ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1685

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ವೇದವ್ಯಾಸ ಕಾಮತ್ ಡಿ. (ಮಂಗಳೂರು ನಗರ ದಕ್ಷಿಣ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರಸ	ಪ್ರಶ್ನೆ	ಉತ್ತರ
ಅ)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣಗಳನ್ನು ನೂತನವಾಗಿ ನಿರ್ಮಾಣ ಮಾಡುವ ಪ್ರಸ್ತಾವನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಈ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಪ್ರಸ್ತುತ, ಅಪೂರ್ಣಗೊಂಡಿರುವ ಕ್ರೀಡಾಂಗಣಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಕನಿಷ್ಠ ಮೂಲ ಸೌಕರ್ಯದ ಕೊರತೆ ಇರುವ ಕ್ರೀಡಾಂಗಣಗಳಲ್ಲಿ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗಿದೆ. ಹೊಸ ಕ್ರೀಡಾಂಗಣಗಳಿಗೆ ಸಂಬಂಧಿಸಿದಂತೆ ಅನುದಾನದ ಲಭ್ಯತೆ ಆಧರಿಸಿ, ಹಂತ-ಹಂತವಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.
ಇ)	ನೂತನವಾಗಿ ಮಂಜೂರಾಗಿರುವ ಕ್ರೀಡಾಂಗಣಗಳೆಷ್ಟು; (ವಿಧಾನ ಸಭಾ ಕ್ಷೇತ್ರಾವಾರು ಮಾಹಿತಿ ನೀಡುವುದು)	2020-21 ನೇ ಸಾಲಿನಲ್ಲಿ ಯಾವುದೇ ಹೊಸ ಕ್ರೀಡಾಂಗಣದ ಕಾಮಗಾರಿಯನ್ನು ಮಂಜೂರು ಮಾಡಿರುವುದಿಲ್ಲ.
ಈ)	ನೂತನವಾಗಿ ಮಂಜೂರಾಗಿರುವ ಕ್ರೀಡಾಂಗಣಗಳಿಗೆ ನೀಡಲಾಗಿರುವ ಅನುದಾನವೆಷ್ಟು? (ವಿಧಾನ ಸಭಾ ಕ್ಷೇತ್ರಾವಾರು ಮಾಹಿತಿ ನೀಡುವುದು)	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವೈಎಸ್‌ಡಿ-ಇಬಿಬಿ/37/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1689
2. ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)
3. ಉತ್ತರಿಸಬೇಕಾದ ದಿನಾಂಕ : 16.03.2021

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬೈರಗೊಂಡ್ಲು ಜಲಾಶಯ ನಿರ್ಮಾಣಕ್ಕೆ ಇದುವರೆಗೂ ಭೂಸ್ವಾಧೀನ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಭೂಸ್ವಾಧೀನ ವಿಳಂಬಕ್ಕೆ ಕಾರಣಗಳೇನು; ಯಾವಾಗ ಭೂಸ್ವಾಧೀನ ಪಡಿಸಿಕೊಂಡು ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು;	ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಾಪುರ ತಾಲ್ಲೂಕಿನ ರೈತರಿಗೆ ನೀಡುವ ಪರಿಹಾರ ದರದಂತೆ ಅವರಿಗೂ ಸಹಾ ಏಕರೂಪ ದರ ನೀಡಲು ಒತ್ತಾಯಿಸಿದ್ದರಿಂದ ಕಾಮಗಾರಿ ಪ್ರಾರಂಭಿಸುವಲ್ಲಿ ಅಡತಡೆ ಉಂಟಾಗಿದ್ದು, ದರ ನಿರ್ಧರಣೆಯ ಕುರಿತು ಪರಿಶೀಲನಾ ಹಂತದಲ್ಲಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿ ಭೂಸ್ವಾಧೀನಕೊಳ್ಳಪಡುವ ಜಮೀನಿಗೆ 'ಏಕರೂಪ ಭೂಪರಿಹಾರ' ನಿಗದಿ ಪಡಿಸಬೇಕಾಗಿರುತ್ತದೆ. ಸದರಿ ಯೋಜನೆಯ ತೀವ್ರ ಅನುಷ್ಠಾನಕ್ಕಾಗಿ "ಉನ್ನತ ಅಧಿಕಾರಿ ಸಮಿತಿ" (High Power Committee) ರಚಿಸಲಾಗಿದ್ದು, ಸದರಿ ಸಮಿತಿಯಲ್ಲಿ 'ಏಕರೂಪ ಭೂಪರಿಹಾರ' (Uniform Rate of Land Compensation) ಕುರಿತಾಗಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದಾಗಿರುತ್ತದೆ. ಸದರಿ ಸಮಿತಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಬೈರಗೊಂಡ್ಲು ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗುವ ಜಮೀನುಗಳಿಗೆ ಏಕರೂಪ ಪರಿಹಾರ ಧರ ಕುರಿತಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿರುತ್ತದೆ.
ಇ)	ಈ ಜಲಾಶಯ ನಿರ್ಮಾಣ ಆಗದೇಇದ್ದರೆ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ನೀರು ಹರಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಇದೆಯೇ;	ಹೌದು.
ಈ)	ಹಾಗಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು?	ಬೈರಗೊಂಡ್ಲು ಜಲಾಶಯ ನಿರ್ಮಾಣದ ಭೂಸ್ವಾಧೀನ ಸಮಸ್ಯೆಯು ಇತ್ಯರ್ಥಗೊಂಡ ನಂತರ ಅನುದಾನದ ಲಭ್ಯತೆಯ ಮೇರೆಗೆ ಜಲಾಶಯ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಸಂಖ್ಯೆ: ಜಸಂಇ 29 ಡಬ್ಲ್ಯೂಎಲ್ಎ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1691
ಮಾನ್ಯ ಸದಸ್ಯರ ಹೆಸರು	:	ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್. (ಗೌರಿಬಿದನೂರು)
ಉತ್ತರಿಸುವ ದಿನಾಂಕ	:	16/03/2021
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಇಲಾಖೆ.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಗೌರಿಬಿದನೂರು ನ್ಯಾಯಾಲಯ ಕಟ್ಟಡ ಶಿಥಿಲಗೊಂಡಿದ್ದು, ಹೊಸದಾಗಿ ಕಟ್ಟಡವನ್ನು ನಿರ್ಮಿಸಲು ಯೋಜನೆ ರೂಪಿಸಿರುವುದು ನಿಜವಲ್ಲವೇ;	ಹೌದು. ಗೌರಿಬಿದನೂರು ತಾಲ್ಲೂಕಿನಲ್ಲಿ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ನ್ಯಾಯಾಲಯ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, ಗೌರಿಬಿದನೂರಿನಲ್ಲಿ ನೂತನ ನ್ಯಾಯಾಲಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ರೂ. 1500.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಆದ್ಯತೆ ಮೇರೆಗೆ ಕೈಗೊಳ್ಳುವಂತೆ ನ್ಯಾಯಾಂಗ ಇಲಾಖೆಯಿಂದ ಪ್ರಸ್ತಾವನೆ ಸ್ವೀಕೃತಗೊಂಡಿದ್ದು, ಅದನ್ನು ಅಪೆಂಡಿಕ್ಸ್ – ಇ ನಲ್ಲಿ ಸೇರ್ಪಡೆಗೊಳಿಸಿ ಆರ್ಥಿಕ ಇಲಾಖೆಯ ಅನುಮೋದನೆಗೆ ಸಲ್ಲಿಸಲಾಗಿದ್ದು, ಅನುಮೋದನೆ ದೊರೆತ ನಂತರ ಸದರಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುವುದು.
ಆ)	ಈ ಸಂಬಂಧ ಪ್ರಯತ್ನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಬಂದಿದ್ದಲ್ಲಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅಗತ್ಯವಿರುವ ಹಣವನ್ನು ಒದಗಿಸಿ, ಕಟ್ಟಡ ನಿರ್ಮಿಸಲು ಅನುವು ಮಾಡಿಕೊಡಲಾಗುವುದೇ?	

ಸಂಖ್ಯೆ: ಲೋಇ 21 ಬಿಎಲ್ ಕ್ಯೂ 2021

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯ ಮಂತ್ರಿಗಳು,
ಲೋಕೋಪಯೋಗಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1695
ಸದಸ್ಯರ ಹೆಸರು : ಶ್ರೀಅಮೃತ್ ಅಯ್ಯಪ್ಪ ದೇಸಾಯಿ (ಧಾರವಾಡ)
ಉತ್ತರಿಸುವ ದಿನಾಂಕ : 16.03.2021

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿಗೆ 2021-22 ನೇ ಸಾಲಿನ ಅಯವ್ಯಯದಲ್ಲಿ ಏಕೈಕ ಜಲ ಮೂಲವಾದ ತುಪ್ಪರಿ ಹಳ್ಳದಿಂದ ಏತ ನೀರಾವರಿ ಯೋಜನೆ ಕೈಗೊಳ್ಳಲು ಅನುದಾನ ಮೀಸಲಿಡಲಾಗಿದೆಯೇ;	ತುಪ್ಪರಿ ಹಳ್ಳದಿಂದ ಏತ ನೀರಾವರಿ ಮೂಲಕ ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿಗೆ ನೀರಾವರಿ ಯೋಜನೆ ಕೈಗೊಳ್ಳಲು ಸರ್ಕಾರದ 2021-22ನೇ ಸಾಲಿನ ಅಯವ್ಯಯದಲ್ಲಿ ಪ್ರತ್ಯೇಕವಾಗಿ ಯಾವುದೇ ಅನುದಾನ ಮೀಸಲಿರಿಸಲಾಗಿರುವುದಿಲ್ಲ. ಆದರೆ, ತುಪ್ಪರಿ ಹಳ್ಳದಿಂದ ಏತ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವ ಹಾಗೂ ಕೆರೆಗಳನ್ನು ತುಂಬಿಸುವ ಯೋಜನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರಿಗೆ (consultant) ಟೆಂಡರ್ ಆಧಾರದ ಮೇಲೆ ರೂ.43.17 ಲಕ್ಷ ಮೊತ್ತಕ್ಕೆ ಗುತ್ತಿಗೆಯನ್ನು ವಹಿಸಿ ಕೊಡಲಾಗಿದ್ದು, ಪ್ರಸ್ತುತ ಸಮಾಲೋಚಕರಿಂದ ಸರ್ವೆ ತನಿಖಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಸರ್ವೆ ತನಿಖಾ ಕಾರ್ಯ ಪೂರ್ಣಗೊಂಡ ನಂತರ ವಿವರವಾದ ಯೋಜನಾ ವರದಿಯನ್ನು ತಯಾರಿಸಿ, ಅವಶ್ಯಕ ನೀರಿನ ಲಭ್ಯತೆ ಹಾಗೂ ಅನುದಾನದ ಹಂಚಿಕೆಯೊಂದಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.
ಆ)	ಸದರಿ ಯೋಜನೆಗೆ ವಿವರವಾದ ಯೋಜನಾ ವರದಿ ತಯಾರಿಕೆ ಯಾವ ಹಂತದಲ್ಲಿದೆ;	
ಇ)	ಸದರಿ ಯೋಜನೆಗೆ ಅನುಮೋದನೆ ಯಾವಾಗ ನೀಡಲಾಗುವುದು?	

ಸಂಖ್ಯೆ: ಜಸಂಇ 38 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

೨೧

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1696**
ಸದಸ್ಯರ ಹೆಸರು	:	**ಶ್ರೀ ಪರಮೇಶ್ವರ ನಾಯಕ್ ಪಿ.ಟಿ.(ಹಡಗಲಿ)**
ಉತ್ತರಿಸುವ ದಿನಾಂಕ	:	**16.03.2021**
ಉತ್ತರಿಸುವ ಸಚಿವರು	:	**ಮಾನ್ಯ ಮುಖ್ಯಮಂತ್ರಿಗಳು**

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸಿಂಗಟಾಲೂರು ಏತ ನೀರಾವರಿ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಅಭಿವೃದ್ಧಿಗಾಗಿ ರೈತರುಗಳ 810.72 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡಿದ್ದು, ಪರಿಹಾರ ಮೊತ್ತ ರೂ 44.33 ಕೋಟಿಗಳನ್ನು ಬಿಡುಗಡೆ ಮಾಡುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು;	ಸಿಂಗಟಾಲೂರು ಏತ ನೀರಾವರಿ ಯೋಜನೆ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಅಭಿವೃದ್ಧಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳುವ 810.72 ಎಕರೆ ಭೂಸ್ವಾಧೀನದ ಪ್ರಕ್ರಿಯೆಯು ವಿವಿಧ ಹಂತದಲ್ಲಿ ಪ್ರಗತಿಯಲ್ಲಿ ಇರುತ್ತದೆ. ಸದರಿ ಪ್ರಕರಣಗಳಿಗೆ ರೂ. 44.33 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.
ಆ)	ಇದುವರೆಗೂ ಭೂಸ್ವಾಧೀನ ಪರಿಹಾರ ಹಣ ಬಿಡುಗಡೆ ಮಾಡದಿರುವುದರಿಂದ, ರೈತರುಗಳ ಆದಾಯಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಭೂಸ್ವಾಧೀನ ಪರಿಹಾರದ ಹಣವನ್ನು ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಹಂತಗಳಿಗೆ ಅನುಗುಣವಾಗಿ ಪಾವತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಪ್ರಸ್ತುತ, ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಥಮಾದ್ಯತೆಗಳಿಗೆ ಆರ್ಥಿಕ ಸಂಪನ್ಮೂಲವನ್ನು ಒದಗಿಸಲು ಪರಿಗಣಿಸಲಾಗುತ್ತಿದೆ. ಆದಾಗ್ಯೂ, ಲಭ್ಯ ಅನುದಾನದಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬ ಉಂಟಾಗದಂತೆ ಪರಿಹಾರದ ಹಣವನ್ನು ಒದಗಿಸಲು ಕ್ರಮ ಜರುಗಿಸಲು ಯೋಜಿಸಲಾಗಿದೆ.
ಇ)	ಈ ರೈತರುಗಳಿಗೆ ಪರಿಹಾರ ಮೊತ್ತ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	
ಈ)	ಪರಿಹಾರ ಮೊತ್ತ ವಿಳಂಬವಾಗಿರುವುದರಿಂದ ರೈತರುಗಳಿಗೆ ಸಂದಾಯವಾಗ ಬೇಕಾಗಿರುವ ಪರಿಹಾರ ಮೊತ್ತವನ್ನು ಹೆಚ್ಚಿಸುವ ಬಡ್ಡಿ ಸಹಿತ ಪಾವತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	
ಉ)	ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡಿರುವ ಸರ್ಕಾರದ ಕ್ರಮಗಳೇನು;	

ಸಂಖ್ಯೆ:ಜಸಂಇ 60 ಎಂಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1703
ಸದಸ್ಯರ ಹೆಸರು : ಶ್ರೀ ದೊಡ್ಡನಗೌಡ ಜಿ.ಪಾಟೀಲ್ (ಹುನಗುಂದ)
ಉತ್ತರಿಸುವ ದಿನಾಂಕ : 16.03.2021

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಏತ ನೀರಾವರಿ ಯೋಜನೆಯಡಿಯಲ್ಲಿ ಹುನಗುಂದ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ; (ಕೆರೆಗಳವಾರು ವಿವರ ನೀಡುವುದು)	ಕೊಪ್ಪಳ ಏತ ನೀರಾವರಿ ಯೋಜನೆಯ 2ನೇ ಹಂತದ ಅನುಷ್ಠಾನದಲ್ಲಿ ಯೋಜನೆಯಡಿ ಬರುವ ಅಚ್ಚುಕಟ್ಟು ವ್ಯಾಪ್ತಿಯಲ್ಲಿನ ಸುಮಾರು 77 ಕೆರೆಗಳನ್ನು ತುಂಬಿಸಲು ಅನುಕೂಲವಾಗಿಸುವ 03 ಪ್ಯಾಕೇಜ್ ಹೆಡ್‌ವರ್ಕ್ ಮತ್ತು ಪೈಪ್‌ಲೈನ್ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಪೈಕಿ ಯೋಜನೆಯ ಪ್ಯಾಕೇಜ್–1 ರಡಿ ಒಟ್ಟು 36 ಸಂಖ್ಯೆಯ MI / ZP ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದ್ದು, ಇದರಡಿ ಈ ಕೆಳಗಿನಂತೆ ಹುನಗುಂದ ತಾಲೂಕಿನ / ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಒಟ್ಟು 10 ಕೆರೆಗಳನ್ನು ಹುನಗುಂದ ಬ್ರ್ಯಾಂಚ್, ವಿತರಣಾ ತೊಟ್ಟಿ–2 ರಿಂದ (ಆರ್.ಎಲ್. 600 ಮೀ.) ಹಾಗೂ ಹೂಲಗೇರಿ ಬ್ರ್ಯಾಂಚ್‌ನಿಂದ ನೀರನ್ನು ತುಂಬಿಸುವ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ.

ಕ್ರಮ ಸಂ.	ಬ್ರಾಂಚ್‌ಗಳ ವಿವರಗಳು	ಹುನಗುಂದ ತಾಲ್ಲೂಕಿನ/ವಿಧಾನ ಸಭಾ ವ್ಯಾಪ್ತಿಯ ಕೆರೆಗಳ ಹೆಸರು
1	ಹುನಗುಂದ ಬ್ರ್ಯಾಂಚ್	1. ಹಿರೇಸಿಂಗನಗುತ್ತಿ ಕೆರೆ
		2. ಕೃಷ್ಣಾಪೂರ ಕೆರೆ
2	ವಿತರಣಾ ತೊಟ್ಟಿ–2 ರಿಂದ (ಆರ್.ಎಲ್ 600.00)	3. ಬಲಕುಂದಿ ಕೆರೆ
		4. ಸಂಕಲಾಪೂರ ಕೆರೆ
		5. ಚಿಕ್ಕಕೊಡಗಲಿ ಕೆರೆ
		6. ಗೂಡೂರ ಕೆರೆ
3	ಹೊಲಗೇರಿ ಬ್ರ್ಯಾಂಚ್	7. ದಮ್ಮೂರ ಕೆರೆ
		8. ಚಿತ್ತವಾಡಗಿ ಕೆರೆ
		9. ವಡಗೇರಿ ಕೆರೆ
		10. ರಂಗಸಮುದ್ರ ಕೆರೆ

ಕ್ರ ಸಂ:	ಪ್ರಶ್ನೆ	ಉತ್ತರ
ಆ)	ಈ ಯೋಜನೆಯಡಿ ಕೈಬಿಡಲಾಗಿರುವ ಇಲ್ಯಾಳ ಮತ್ತು ಅರಸಿಬಿಡಿ ಕೆರೆಗಳಿಗೆ ಯಾವಾಗ ನೀರು ತುಂಬಿಸಲಾಗುವುದು (ವಿವರ ನೀಡುವುದು)	ಪ್ರಸ್ತಾಪಿತ ಇಲ್ಯಾಳ ಮತ್ತು ಅರಸಿಬಿಡಿ ಕೆರೆಗಳು ಯೋಜಿತ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿರದ ಪ್ರಯುಕ್ತ ಸದರಿ ಕೆರೆಗಳು ಯೋಜನೆಯಡಿ ಸೇರ್ಪಡೆಯಾಗಿರುವುದಿಲ್ಲ.

ಸಂಖ್ಯೆ: ಜಸಂಇ 23 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

15ನೇ ಕರ್ನಾಟಕ ವಿಧಾನ ಸಭೆ
9 ನೇ ಅಧಿವೇಶನ 2021

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1706**
ಮಾನ್ಯ ಸದಸ್ಯರ ಹೆಸರು	:	**ಶ್ರೀ. ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ॥ (ಖಾನಾಪುರ)**
ಉತ್ತರಿಸುವ ದಿನಾಂಕ	:	**16-03-2021**
ಉತ್ತರಿಸುವ ಸಚಿವರು	:	**ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು**

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಖಾನಾಪುರ ವಿಧಾನಸಭಾ ಕ್ಷೇತ್ರದ ಕುಸಮಳ್ಳಿ ಗ್ರಾಮದ ಬಳಿ ಮಲ್ಲಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಸೇತುವೆಯು ಶಿಥಿಲಗೊಂಡು ಅಪಾಯಕರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ
ಆ)	ಸದರಿ ಸೇತುವೆಯನ್ನು ಜಲಸಂಪನ್ಮೂಲ ಇಲಾಖೆಯಿಂದ ಪುನರ್ ನಿರ್ಮಿಸಬೇಕಾದ ಪ್ರಸ್ತಾವನೆಯು ಯಾವ ಹಂತದಲ್ಲಿದೆ;	ಸದರಿ ಸೇತುವೆಯು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ರಾಜ್ಯದ ವಿವಿಧೆಡೆ ಒಟ್ಟಾರೆಯಾಗಿ 504 ಸೇತುವೆಗಳನ್ನು ಕೈಗೊಳ್ಳಲು ಉದ್ದೇಶಿಸಿರುವ ಆದ್ಯತಾ ಪಟ್ಟಿಯಲ್ಲಿ ಸೇರಿರುತ್ತದೆ. ಈ ಸೇತುವೆಗಳ ಪಟ್ಟಿಯ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿ, ಹಿಂಬರಹ ಸಂಖ್ಯೆ: FD 208 FC-2/2020, ದಿನಾಂಕ: 11-09-2020 ರಲ್ಲಿ ಈ ಕೆಳಗಿನಂತೆ ತಿಳಿಸಿರುತ್ತದೆ. "The outstanding commitments of KRDCL are already being very high. Hence, Administrative Department is advised not to take up any new works till the previous works are completed and closed financially" ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲು ಯೋಜಿಸಲಾಗುವುದು.
ಇ)	ಸದರಿ ಸೇತುವೆಯನ್ನು ಶೀಘ್ರವಾಗಿ ಪುನರ್‌ನಿರ್ಮಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?	

ಸಂಖ್ಯೆ: ಲೋಇ E-112 ಇಎಪಿ 2021

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1716

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ವೀರಭದ್ರಯ್ಯ ಎಂ.ವಿ.(ಮಧುಗಿರಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಧುಗಿರಿ ಪಟ್ಟಣದಲ್ಲಿರುವ ರಾಜೀವ್‌ಗಾಂಧಿ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಮಧುಗಿರಿ ಪಟ್ಟಣದಲ್ಲಿರುವ ರಾಜೀವ್ ಗಾಂಧಿ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿಗೊಳಿಸುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಸದರಿ ಕ್ರೀಡಾಂಗಣವನ್ನು ಅಭಿವೃದ್ಧಿಗೊಳಿಸಲು ಯಾವ ಕಾಲ ಮಿತಿಯೊಳಗೆ ಅನುದಾನ ಬಿಡುಗಡೆ ಮಾಡಿ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವೈಎಸ್‌ಡಿ-ಇಬಿಬಿ/42/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1718
2. ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ವೀರಭದ್ರಯ್ಯ.ಎಂ.ವಿ.(ಮಧುಗಿರಿ)
3. ಉತ್ತರಿಸುವ ದಿನಾಂಕ : 16-03-2021
4. ಉತ್ತರಿಸುವ ಸಚಿವರು : ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮಧುಗಿರಿ ಪಟ್ಟಣದ ವ್ಯಾಪ್ತಿಯಲ್ಲಿರುವ ಅಗ್ನಿಶಾಮಕ ಠಾಣೆಯಲ್ಲಿರುವ ಎರಡು ವಾಹನಗಳ ಪೈಕಿ ಒಂದು ವಾಹನವು ತುಂಬಾ ಹಳೆಯದಾಗಿರುವುದು ಹಾಗೂ ಇನ್ನೊಂದು ವಾಹನವು ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಕೆಎ 42 ಜಿ 669 ವಾಹನವು 2011ನೇ ವರ್ಷದ ಮಾದರಿಯಾಗಿದ್ದು, ಸುಸ್ಥಿತಿಯಲ್ಲಿರುತ್ತದೆ.
ಆ)	ಬಂದಿದ್ದಲ್ಲಿ, ಯಾವಾಗ ಹೊಸ ವಾಹನಗಳ ಖರೀದಿಗೆ ಮಂಜೂರಾತಿ ನೀಡಲಾಗುವುದು ? (ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ:ಒಇ 08 ಎಸ್‌ಎಫ್‌ಬಿ 2019, ದಿನಾಂಕ:03-02-2021 ರಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ 42 ಹಳೆಯ ಜಲವಾಹನಗಳನ್ನು ಅನುಪಯುಕ್ತಗೊಳಿಸಿ ಬದಲಿಗೆ ಹೊಸ ಆಧುನಿಕ ಜಲವಾಹನಗಳನ್ನು ಖರೀದಿಸಲು ಮಂಜೂರಾತಿ ನೀಡಲಾಗಿದ್ದು, ಹೊಸ ಜಲವಾಹನಗಳನ್ನು ಖರೀದಿಸಿದ ನಂತರ ಹಳೆಯ ಜಲವಾಹನಗಳನ್ನು ಅಷ್ಟೇ ಸಂಖ್ಯೆಯಲ್ಲಿ ವಿಲೇವಾರಿ ಮಾಡಲು ಮತ್ತು ಆಧ್ಯತೆ ಮೇರೆಗೆ ಮಧುಗಿರಿ ಅಗ್ನಿಶಾಮಕ ಠಾಣೆಗೆ ಜಲ ವಾಹನವನ್ನು ಒದಗಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಒಇ 37 ಎಸ್‌ಎಫ್‌ಬಿ 2021

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1720**

2. ಸದಸ್ಯರ ಹೆಸರು : ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)

3. ಉತ್ತರಿಸುವ ದಿನಾಂಕ : 16.03.2021

ಕ್ರ.ಸಂ.	ಪ್ರಶ್ನೆ	ಉತ್ತರಗಳು
(ಅ)	ಮಹದಾಯಿ ನೀರಿನ ಹಂಚಿಕೆ ವಿಷಯದಲ್ಲಿ ಮಾಂಡೋವಿ ನೀರನ್ನು ಗೋವಾ ಹಾಗೂ ಮಹಾರಾಷ್ಟ್ರ ರಾಜ್ಯದೊಂದಿಗೆ ಆಗಿರುವ ಒಪ್ಪಂದದಲ್ಲಿ ರಾಜ್ಯವು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುತ್ತಿರುವುದರಿಂದ ಜಂಟಿ ತನಿಖಾ ಸಮಿತಿ ರಚಿಸುವಂತೆ ಸರ್ವೋಚ್ಚ ನ್ಯಾಯಾಲಯವು ಆದೇಶಿಸಿರುವುದು ನಿಜವೇ; (ಪೂರ್ಣ ಮಾಹಿತಿ ಒದಗಿಸುವುದು)	ಮಹದಾಯಿ ಜಲ ವಿವಾದದ ನ್ಯಾಯಾಧಿಕರಣದ ದಿನಾಂಕ:14.08.2018ರ ವರದಿ/ತೀರ್ಮಾನದಲ್ಲಿ ರಾಜ್ಯಗಳ ನಡುವೆ ಹಂಚಿಕೆಯನ್ನು ನಿರ್ಧರಿಸಲಾಗಿದೆ. ಗೋವಾ ರಾಜ್ಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಕರ್ನಾಟಕವು ನ್ಯಾಯಾಧಿಕರಣದ ಆದೇಶವನ್ನು ಉಲ್ಲಂಘಿಸಿದೆ ಎಂದು ಸಲ್ಲಿಸಿದ್ದ ನಿಂದನಾ ಅರ್ಜಿ ಸಂಖ್ಯೆ:724/2020 ದಿನಾಂಕ:22.02.2021ರಂದು ವಿಚಾರಣೆಗೆ ಬಂದಾಗ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು, ಮೂರು ರಾಜ್ಯಗಳ ಅಧೀಕ್ಷಕ ಇಂಜಿನಿಯರ್‌ಗಳನ್ನೊಳಗೊಂಡ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲು ಸರ್ವೋಚ್ಚ ನ್ಯಾಯಾಲಯವು ಆದೇಶಿಸಿರುತ್ತದೆ. ಸದರಿ ಸಮಿತಿಗೆ ರಾಜ್ಯದ ಪ್ರತಿನಿಧಿಯನ್ನು ನಾಮಾಂಕಿತಗೊಳಿಸಲಾಗಿದೆ.
(ಆ)	ಮಾಂಡೋವಿ ಯೋಜನೆಯ ಸಮರ್ಪಕ ಬಳಕೆಗಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಕಾನೂನಾತ್ಮಕ ಕ್ರಮಗಳೇನು?(ವಿವರ ನೀಡುವುದು)	ಮಹದಾಯಿ ನ್ಯಾಯಾಧಿಕರಣದಿಂದ ಕಳಸಾ ನಾಲಾ ಹಾಗೂ ಬಂಡೂರಾ ನಾಲಾ ಯೋಜನೆಗಳಿಗೆ 3.9 ಟಿ.ಎಂ.ಸಿ ನೀರಿನ ಹಂಚಿಕೆಯಾಗಿದ್ದು, ಸದರಿ ಯೋಜನೆಗಳ ಪೂರ್ವಸಾಧ್ಯತಾ ವರದಿಗಳನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದ್ದು, ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಲ್ಲಿ ಪರಿಶೀಲನೆಯಾಗುತ್ತಿದೆ. ಮುಂದುವರೆದು, ನ್ಯಾಯಾಧಿಕರಣದ ಆದೇಶದ ಅಂಶಗಳ ಕುರಿತಂತೆ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿಯನ್ನು ಹಾಗೂ ನ್ಯಾಯಾಧಿಕರಣಕ್ಕೆ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದು, ಇವುಗಳ ವಿಚಾರಣೆ ನಡೆದು ಇತ್ಯರ್ಥವಾಗಬೇಕಾಗಿದೆ.

ಸಂಖ್ಯೆ: ಜಸಂಇ 1 ಮವಿಇ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2263.

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
ಅ)	ರಾಯಭಾಗ ತಾಲ್ಲೂಕಿನ ಸಾರ್ವಜನಿಕ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ರಾಯಭಾಗ ತಾಲ್ಲೂಕಿನ ರಾಯಭಾಗ ಪಟ್ಟಣದ ಸರ್ವೆ ನಂ. 818 ಬಿ1/ಬಿ4 ರ 6 ಎಕರೆ 12 ಗುಂಟೆ ನಿವೇಶನದಲ್ಲಿ ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಿಸಲಾಗಿದ್ದು, ನೆಲಸಮತಟ್ಟು ಕಾಮಗಾರಿ, ಆವರಣ ಗೋಡೆ, ಸಂಪರ್ಕ ರಸ್ತೆ, 400ಮೀ ಅಥ್ಲೆಟಿಕ್ ಟ್ರ್ಯಾಕ್, ವಿವಿಧ ಕ್ರೀಡಾ ಅಂಕಣಗಳು, ಶೌಚಾಲಯಗಳು, ನೀರಿನ ಸೌಲಭ್ಯ, ವಿದ್ಯುತ್ ಸಂಪರ್ಕ ವ್ಯವಸ್ಥೆ, ಪೆವಿಲಿಯನ್ ಕಟ್ಟಡ ಮತ್ತಿತರ ಸೌಲಭ್ಯ ಕಲ್ಪಿಸಲಾಗಿದೆ. ಹೆಚ್ಚುವರಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು;	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಇ)	ಈ ಅಭಿವೃದ್ಧಿ ಕಾಮಗಾರಿಗೆ ಸರ್ಕಾರ ನಿಗದಿಪಡಿಸಿ ಒದಗಿಸಬಹುದಾದ ಅಂದಾಜು ಮೊತ್ತವೆಷ್ಟು;	
ಈ)	ಇಲ್ಲದಿದ್ದಲ್ಲಿ, ಈ ಸಾರ್ವಜನಿಕ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರಕ್ಕಿರುವ ತೊಂದರೆಗಳೇನು? (ವಿವರ ನೀಡುವುದು)	ಲಭ್ಯ ಅನುದಾನದಲ್ಲಿ ಕ್ರೀಡಾಂಗಣಗಳಿಲ್ಲದ ಸ್ಥಳಗಳಲ್ಲಿ ಕ್ರೀಡಾಂಗಣಗಳ ನಿರ್ಮಾಣ ಹಾಗೂ ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಲಾಗುತ್ತಿದೆ. ಅನುದಾನದ ಲಭ್ಯತೆ ಆಧರಿಸಿ, ಸೌಲಭ್ಯಗಳ ಉನ್ನತೀಕರಣ ಮತ್ತು ಹೆಚ್ಚುವರಿ ಸೌಲಭ್ಯಗಳ ಸೃಜನೆ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದು.

ವೈಎಸ್‌ಡಿ-ಇಬಿಬಿ/43/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನ
ಮತ್ತು ಸಾಂಖ್ಯಿಕ ಸಚಿವರು.

ಗ

ಕರ್ನಾಟಕ ವಿಧಾನ ಸಭೆ

1.ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2324
2. ಸದಸ್ಯರ ಹೆಸರು	:	ಶ್ರೀ ರಿಜ್ವಾನ್ ಅರ್ಷದ್ (ಶಿವಾಜಿನಗರ)
3. ಉತ್ತರಿಸುವ ದಿನಾಂಕ	:	16-03-2021
4. ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ 2015ನೇ ಸಾಲಿನ ಗೆಜೆಟೆಡ್ ಪ್ರೋಬೆಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ರಾಜ್ಯ ದತ್ತಾಂಶ ಕೇಂದ್ರ (Karnataka State data center) Center for E-governance ಅಂದರೆ ಇ-ಆಡಳಿತ ಕೇಂದ್ರ) ದ kpseresults.karnataka.gov.in ಎಂಬ ವೆಬ್ ಡೊಮೈನ್‌ನ ಮೂಲಕ ಅಭ್ಯರ್ಥಿಗಳ ವಿಷಯವಾರು ಅಂಕಗಳನ್ನು (Subject wise scores) ಪ್ರಕಟಿಸಿರುವುದು ನಿಜವೇ;	ಕರ್ನಾಟಕ ಲೋಕ ಸೇವಾ ಆಯೋಗವು ತಿಳಿಸಿರುವಂತೆ National Informatics Center (NIC) ವತಿಯಿಂದ ಅಪ್ಲಿಕೇಷನ್ ತಯಾರಿಸಿ ಆಯಾ ಅಭ್ಯರ್ಥಿಗಳಿಗೆ ತಮ್ಮ ವಿಷಯವಾರು ಅಂಕಗಳು ಲಭ್ಯವಾಗುವಂತೆ ಅವಕಾಶ ಕಲ್ಪಿಸಿ ರಾಜ್ಯ ದತ್ತಾಂಶ ಕೇಂದ್ರದ ಮುಖಾಂತರ Host ಮಾಡಲಾಗಿದೆ.
ಆ	ಹಾಗಿದ್ದಲ್ಲಿ, ರಾಜ್ಯ ದತ್ತಾಂಶ ಕೇಂದ್ರ (Karnataka State data center) Center for E-governance ಅಂದರೆ ಇ-ಆಡಳಿತ ಕೇಂದ್ರವು ಕರ್ನಾಟಕ ಲೋಕಸೇವಾ ಆಯೋಗ ಮತ್ತು Tata consultancy Services TCS) ಕಂಪನಿ ಜೊತೆಗೆ ಮಾಡಿಕೊಂಡಿರುವ ತ್ರಿಪಕ್ಷೀಯ ಒಪ್ಪಂದದ ಸಹಿ ಮಾಡಿದ ಕಾರಾರು ಪತ್ರದ ಪ್ರತಿಯನ್ನು ನೀಡುವುದು?	ಮೇಲ್ಕಂಡ 'ಅ'ರಲ್ಲಿ ಉತ್ತರಿಸಿರುವುದರಿಂದ ಈ ಪ್ರಮೇಯ ಉದ್ಭವಿಸುವುದಿಲ್ಲ.

ಸಂಖ್ಯೆ: ಸಿಆಸುಇ 25 ಎಸ್‌ಎಸ್‌ಸಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2331
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ.ಎಸ್.ಎನ್ (ಬಾಗೇಪಲ್ಲಿ)
3. ಉತ್ತರಿಸಬೇಕಾದ ದಿನಾಂಕ : 16.03.2021

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಹೋಬಳಿಯ ಗಂಟಲಮಲ್ಲಮ್ಮ ಕಣಿವೆಗೆ ಬ್ಯಾರೇಜ್ ನಿರ್ಮಾಣಕ್ಕೆ 2019-20 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಘೋಷಣೆಯಗಿರುವುದು ನಿಜವೇ;	ಹೌದು.
ಆ)	ಈ ಕಾಮಗಾರಿಯನ್ನು ಪ್ರಾರಂಭ ಮಾಡುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯ ಹೋಬಳಿಯ ಬಳಿ ಘಂಟಲಮಲ್ಲಮ್ಮನ ಕಣಿವೆಗೆ ಅಡ್ಡಲಾಗಿ ಹಳ್ಳಕ್ಕೆ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿಗಾಗಿ ಪ್ರಾಥಮಿಕ ಹಂತದ ಸರ್ವೇ ಮತ್ತು ತನಿಖಾ ಕಾರ್ಯಗಳನ್ನು ಕೈಗೊಂಡು ಡಿ.ಪಿ.ಆರ್/ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ನಿಗಮದಲ್ಲಿ ಪರಿಶೀಲನೆ ಹಂತದಲ್ಲಿದೆ.
ಇ)	ಈ ಬ್ಯಾರೇಜ್ ನಿರ್ಮಾಣಕ್ಕೆ ಡಿ.ಪಿ.ಆರ್ ತಯಾರು ಮಾಡಲಾಗಿದೆಯೇ;	
ಈ)	ಈ ಬ್ಯಾರೇಜ್ ಕಾಮಗಾರಿಯ ಟೆಂಡರ್ ಅನ್ನು ಯಾವಾಗ ಕರೆದು ಕಾಮಗಾರಿಯನ್ನು ಪ್ರಾರಂಭ ಮಾಡಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಜಸಂಇ 35 ಡಬ್ಲ್ಯೂಎಲ್ಎ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

91

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2332
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ.ಎಸ್.ಎನ್ (ಬಾಗೇಪಲ್ಲಿ)
3. ಉತ್ತರಿಸಬೇಕಾದ ದಿನಾಂಕ : 16.03.2021

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	2018–19ನೇ ಸಾಲಿನ ಆಯವ್ಯಯದಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಗಂಟಲಮಲ್ಲಮ್ಮ ಕಣಿವೆಯ ಬಳಿ ಅಣೆಕಟ್ಟು ಸ್ಥಾಪನೆಗೆ ಅನುದಾನ ಮಂಜೂರು ಮಾಡಿರುವುದು ನಿಜವೇ;	2018–19 ನೇ ಸಾಲಿನ ಆಯವ್ಯಯದಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಗಂಟಲಮಲ್ಲಮ್ಮ ಕಣಿವೆಯ ಬಳಿ ಅಣೆಕಟ್ಟು ಸ್ಥಾಪನೆಗೆ ಯಾವುದೇ ಅನುದಾನದ ಘೋಷಣೆಯಾಗಿರುವುದಿಲ್ಲ. ಆದರೆ 2019–20ನೇ ಸಾಲಿನ ಆಯವ್ಯಯದಲ್ಲಿ ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯ ಹೋಬಳಿಯ ಬಳಿ ಗಂಟಲಮಲ್ಲಮ್ಮನ ಕಣಿವೆಗೆ ಅಡ್ಡಲಾಗಿ ಹಳ್ಳಕ್ಕೆ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿಗಾಗಿ ರೂ.20.00 ಕೋಟಿಗಳನ್ನು ಘೋಷಿಸಲಾಗಿದೆ.
ಆ)	ಈ ಅಣೆಕಟ್ಟು ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ;	ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯ ಹೋಬಳಿಯ ಬಳಿ ಗಂಟಲಮಲ್ಲಮ್ಮನ ಕಣಿವೆಗೆ ಅಡ್ಡಲಾಗಿ ಹಳ್ಳಕ್ಕೆ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿಗಾಗಿ ಪ್ರಾಥಮಿಕ ಹಂತದ ಸರ್ವೇ ಮತ್ತು ತನಿಖಾ ಕಾರ್ಯಗಳನ್ನು ಕೈಗೊಂಡು ರೂ.9.71 ಕೋಟಿಗಳ ಮೊತ್ತಕ್ಕೆ ಡಿ.ಪಿ.ಆರ್/ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ನಿಗಮದಲ್ಲಿ ಪರಿಶೀಲನೆಯ ಹಂತದಲ್ಲಿದೆ.
ಇ)	ಇದಕ್ಕಾಗಿ ಡಿ.ಪಿ.ಆರ್ ತಯಾರು ಮಾಡಲಾಗಿದೆಯೇ; ಇದ್ದಲ್ಲಿ, ಎಷ್ಟು ಮೊತ್ತದಲ್ಲಿ ಡಿ.ಪಿ.ಆರ್ ತಯಾರಿಸಲಾಗಿದೆ;	
ಈ)	ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗಿದೆ? (ವಿವರ ನೀಡುವುದು)	

ಸಂಖ್ಯೆ: ಜಸಂಇ 36 ಡಬ್ಲ್ಯೂಎಲ್ಎ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2336
2. ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಸುರೇಶ್ ಗೌಡ (ನಾಗಮಂಗಲ)
3. ಉತ್ತರಿಸುವ ದಿನಾಂಕ : 16-03-2021
4. ಉತ್ತರಿಸುವ ಸಚಿವರು : ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನಾಗಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರದಿಂದ ಎಷ್ಟು ಅಗ್ನಿಶಾಮಕ ವಾಹನಗಳು ಮಂಜೂರಾಗಿವೆ; ಅವುಗಳಲ್ಲಿ ಎಷ್ಟು ವಾಹನಗಳನ್ನು ಒದಗಿಸಲಾಗುತ್ತಿದೆ; ಎಷ್ಟು ಕಾರ್ಯನಿರ್ವಹಿಸುತ್ತಿವೆ;</td><td>ನಾಗಮಂಗಲ ಅಗ್ನಿಶಾಮಕ ಠಾಣೆಗೆ ಈ ಕೆಳಕಂಡ ವಾಹನಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ.
<table>
<tr><th>ಕ್ರ.ಸಂ</th><th>ವಾಹನಗಳು</th><th>ಮಂಜೂರಾಗಿರುವ ವಾಹನಗಳ ಸಂಖ್ಯೆ</th><th>ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಾಹನಗಳ ಸಂಖ್ಯೆ</th></tr>
<tr><td>1</td><td>ಜಲವಾಹನ</td><td>01</td><td rowspan="2">02</td></tr>
<tr><td>2</td><td>ಮಿಸ್ಟ್ ಟೆಕ್ನಾಲಜಿ ವಾಹನ</td><td>01</td></tr>
<tr><td>3</td><td>ಪೋರ್ಟ್ ಬಲ್ ಪಂಪ್</td><td>02</td><td>01</td></tr>
</table></td></tr>
<tr><td>ಆ)</td><td>ಅಗ್ನಿಶಾಮಕ ವಾಹನಗಳ ಕೊರತೆಯಿಂದಾಗಿ ತುರ್ತಾಗಿ ಅಗ್ನಿ ಅವಘಡಗಳನ್ನು ತಡೆಯಲು ಸಾಧ್ಯವಾಗದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಈಗಾಗಲೇ ನಾಗಮಂಗಲ ಅಗ್ನಿಶಾಮಕ ಠಾಣೆಗೆ ಅಗತ್ಯ ವಾಹನ ಹಾಗೂ ಉಪಕರಣಗಳನ್ನು ನೀಡಲಾಗಿದ್ದು, ಯಾವುದೇ ಅಗ್ನಿ ಅವಘಡಗಳನ್ನು ತಡೆಯಲು ತೊಂದರೆಯಾಗಿರುವುದಿಲ್ಲ.</td></tr>
<tr><td>ಇ)</td><td>ಬಂದಿದ್ದಲ್ಲಿ ಅಗ್ನಿಶಾಮಕ ವಾಹನಗಳ ಕೊರತೆಯನ್ನು ಶೀಘ್ರವಾಗಿ ಪರಿಹರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?</td><td>ಉದ್ಭವಿಸುವುದಿಲ್ಲ.</td></tr>
</table>

ಸಂಖ್ಯೆ: ಒಇ 36 ಎಸ್‌ಎಫ್‌ಬಿ 2021

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2342
ಸದಸ್ಯರ ಹೆಸರು : ಡಾ॥ ಅಜಯ್ ಧರ್ಮಸಿಂಗ್ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ : 16.03.2021
ಉತ್ತರಿಸುವ ಸಚಿವರು : ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ಕ್ರ.ಸ	ವಿಷಯ	ಉತ್ತರ
ಅ	ಗಣಿಗಾರಿಕೆ ಉದ್ದೇಶಕ್ಕೆ ಬಳಸುವ ಸ್ಫೋಟಕಗಳ ಸಾಗಣೆ, ಸಂಗ್ರಹ ಹಾಗೂ ಬಳಕೆಗೆ ಸಂಬಂಧಿಸಿದಂತೆ, ನಿರ್ದಿಷ್ಟ ನಿಯಮಾವಳಿಗಳನ್ನು ರಚಿಸಲಾಗಿದೆಯೇ;	ಗಣಿಗಾರಿಕೆ ಉದ್ದೇಶಕ್ಕೆ ಬಳಸುವ ಸ್ಫೋಟಕಗಳ ಸಾಗಣೆ, ಸಂಗ್ರಹ ಹಾಗೂ ಬಳಕೆಗೆ ಸಂಬಂಧಿಸಿದಂತೆ, ಪ್ರಸ್ತುತ ಜಾರಿಯಲ್ಲಿರುವ ಸ್ಫೋಟಕಗಳ ಅಧಿನಿಯಮ 1884 (ಎಕ್ಸ್‌ಪ್ಲೋಸೀವ್ಸ್ ಆಕ್ಟ್ 1884) ಹಾಗೂ ಸ್ಫೋಟಕಗಳ ನಿಯಮ 2008 (ಎಕ್ಸ್‌ಪ್ಲೋಸೀವ್ಸ್ ರೂಲ್ಸ್-2008) ಅನ್ನು ಪಾಲಿಸಲಾಗುತ್ತಿದೆ.
ಆ	ಸದರಿ ನಿಯಮಾವಳಿಗಳನ್ನು ರಚಿಸುವ ಹೊಣೆ ಯಾವ ಇಲಾಖೆಗೆ ಸಂಬಂಧಪಟ್ಟಿದೆ;	ಸ್ಫೋಟಕಗಳ ಸಾಗಣೆ, ಸಂಗ್ರಹ ಹಾಗೂ ಬಳಕೆಗೆ ಸಂಬಂಧಿಸಿದಂತೆ ಪರವಾನಗಿ ನೀಡಲು/ನಿರ್ಬಂಧಗಳನ್ನು ವಿಧಿಸಲು ಹಾಗೂ ನೂತನ ನಿಯಮಾವಳಿಗಳನ್ನು ರಚಿಸುವುದು ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸೀವ್ಸ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಮಂತ್ರಾಲಯ ರವರಿಗೆ ಸಂಬಂಧಿಸಿರುತ್ತದೆ.
ಇ	ನಿರ್ದಿಷ್ಟ ನಿಯಮಾವಳಿಗಳನ್ನು ರೂಪಿಸಿದ್ದಲ್ಲಿ, ಇದಕ್ಕೆ ಹೊಣೆಗಾರರ್‍ಯಾರು;	ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ ಮತ್ತು ಭೂ ಮತ್ತು ಗಣಿ ವಿಜ್ಞಾನ ಇಲಾಖೆಗಳು ಸ್ಫೋಟಕಗಳ ಸಾಗಣೆ, ಸಂಗ್ರಹ ಹಾಗೂ ಬಳಕೆಗೆ ನೀಡುವ ಪರವಾನಗೆಗಳಿಗೆ ಜವಾಬ್ದಾರರಾಗಿದ್ದು ಮತ್ತು ಸ್ಫೋಟಕ ನಿಯಮಗಳಡಿ ಉಲ್ಲಂಘನೆಗಳು ಕಂಡು ಬಂದಾಗ ಕ್ರಮ ಜರುಗಿಸಲು ಪೊಲೀಸ್ ಇಲಾಖೆ ಜವಾಬ್ದಾರಿಯಾಗಿರುತ್ತದೆ.
ಈ	ಪ್ರಸ್ತುತ ಸ್ಫೋಟಕಗಳ ಸಂಬಂಧ ಯಾವ ನಿಯಮಾವಳಿಗಳನ್ನು ಪಾಲಿಸಲಾಗುತ್ತಿದೆ ಹಾಗೂ ಪ್ರತ್ಯೇಕವಾಗಿ ಗಣಿಗಾರಿಕೆ ಸಂಬಂಧ ಸ್ಫೋಟಕಗಳ ತಡೆಗಟ್ಟುವಿಕೆಗೆ ನಿಯಮ ರಚಿಸಲಾಗುತ್ತಿದೆಯೇ;	ಪ್ರಸ್ತುತ ಸ್ಫೋಟಕಗಳ ಸಾಗಣೆ, ಸಂಗ್ರಹ ಹಾಗೂ ಬಳಕೆಗೆ ಸಂಬಂಧಿಸಿದಂತೆ, ಕೇಂದ್ರ ಕಾಯ್ದೆಗಳಾದ ಸ್ಫೋಟಕಗಳ ಅಧಿನಿಯಮ 1884 ಹಾಗೂ ಸ್ಫೋಟಕಗಳ ನಿಯಮ 2008 ಗಳು ಜಾರಿಯಲ್ಲಿದ್ದು, ಈ ಕುರಿತು ನೂತನ ನಿಯಮ ರಚನೆ/ತಿದ್ದುಪಡಿಯು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿರುತ್ತದೆ.
ಉ	ಹಾಗಿದ್ದಲ್ಲಿ, ಇದರ ವಿವರಗಳೇನು?	ಅನ್ವಯಿಸುವುದಿಲ್ಲ.

ಹೆಚ್‌ಡಿ 68 ಕೆಎಎ 2021

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು, ಸಂಸದೀಯ
ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2356
2. ಸದಸ್ಯರ ಹೆಸರು : ಶ್ರೀ ಹೆಚ್.ಡಿ. ರೇವಣ್ಣ
3. ಉತ್ತರಿಸಬೇಕಾದ ದಿನಾಂಕ : 16-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018-19 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ, ಸಕಲೇಶಪುರ ವಿಧಾನಸಭಾ ಕ್ಷೇತ್ರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳು ಅನುಮೋದನೆಗಾಗಿ ವಿವಿಧ ಹಂತದಲ್ಲಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ದಿನಾಂಕ:20-09-2019 ರಂದು ನಡೆದ ನಿಗಮದ 70ನೇ ಮಂಡಳಿ ಸಭೆಯಲ್ಲಿ ಇನ್ನೂ ಅನುಷ್ಠಾನಗೊಳ್ಳದೆ ಟೆಂಡರ್ ಪ್ರಕ್ರಿಯೆಯಲ್ಲಿರುವ, ತಾಂತ್ರಿಕ ಮಂಜೂರಾತಿ ಆಗಬೇಕಿರುವ ಹಾಗೂ ಟೆಂಡರ್ ಆಹ್ವಾನಿಸಬೇಕಿರುವ ಕಾಮಗಾರಿಗಳನ್ನು ಕೈಬಿಡಲು ಸೂಚಿಸಲಾಗಿದೆ. ಈ ಪೈಕಿ, ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ, ಸಕಲೇಶಪುರ ವಿಧಾನಸಭಾ ಕ್ಷೇತ್ರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವಿಧ ಪ್ರಕ್ರಿಯೆಯಲ್ಲಿರುವ ಒಟ್ಟು 738 ಸಂಖ್ಯೆಯ ರೂ.348.45 ಕೋಟಿಗಳ ಕಾಮಗಾರಿಗಳು ಒಳಗೊಂಡಿರುತ್ತವೆ.
ಆ	ಕಾವೇರಿ ನೀರಾವರಿ ನಿಗಮದ ಹೇಮಾವತಿ ಯೋಜನಾ ವಲಯದ ವಿವಿಧ ವಿಭಾಗಗಳಲ್ಲಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿರುವುದು ನಿಜವೇ;	
ಇ	ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಅರಕಲಗೂಡು, ಹೊಳೆನರಸೀಪುರ ಮತ್ತು ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರುಗಳು ದಿನಾಂಕ:06-03-2020 ರಲ್ಲಿ ಮನವಿ ನೀಡಿದ್ದು, ಸದರಿ ಮನವಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಜಲಸಂಪನ್ಮೂಲ ಇಲಾಖೆರವರಿಗೆ ನಿರ್ದೇಶನ ನೀಡಿರುವುದು ನಿಜವೇ; ಸಕಲೇಶಪುರ ಅರಕಲಗೂಡು ಮತ್ತು ಹೊಳೆನರಸೀಪುರ ವಿಧಾನಸಭಾ ಸದಸ್ಯರುಗಳು ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರು ಮೇಲ್ಕಂಡ ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಆಶ್ವಾಸನೆ ನೀಡಿರುವುದು ನಿಜವೇ;	ಹೌದು.
ಈ	ಮೇಲ್ಕಂಡ ತಡೆಹಿಡಿದಿರುವ ಕಾಮಗಾರಿಗಳ ಬಗ್ಗೆ ಕಾವೇರಿ ನೀರಾವರಿ ನಿಗಮದಿಂದ ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಕಡತ ಮಂಡಿಸಿದ್ದು, ಮಾನ್ಯ ಜಲಸಂಪನ್ಮೂಲ ಸಚಿವರು ಆರ್ಥಿಕ ಇಲಾಖೆಗೆ ದಿನಾಂಕ:04-05-2020 ಸುತ್ತೋಲೆಯಂತೆ ಕ್ರಮವಹಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಕಡತವನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲು ಸರ್ಕಾರದ ಜಲಸಂಪನ್ಮೂಲ ಕಾರ್ಯದರ್ಶಿಯವರ ಮುಖೇನ ಆರ್ಥಿಕ ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಕಡತವನ್ನು ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ, ಮೇಲ್ಕಂಡ ತಡೆಹಿಡಿದಿರುವ ಟೆಂಡರ್ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)?	ಹೇಮಾವತಿ ಯೋಜನೆ ಅಡಿಯಲ್ಲಿ ಬರುವ ಹೊಳೆನರಸೀಪುರ, ಸಕಲೇಶಪುರ ಮತ್ತು ಅರಕಲಗೂಡು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿರುವ ಒಟ್ಟು 738 ಸಂಖ್ಯೆಯ ರೂ.348.45 ಕೋಟಿ ಮೊತ್ತದ Non-Grounded (Under Tender process) ಕಾಮಗಾರಿಗಳ ಪೈಕಿ ಒಟ್ಟು 230 ಸಂಖ್ಯೆಯ ರೂ.108.20 ಕೋಟಿ ಮೊತ್ತದ ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ಸಮುದಾಯ ಭವನಗಳು ಹಾಗೂ ರಸ್ತೆ ಲೆಕ್ಕ ಶೀರ್ಷಿಕೆ ಅಡಿ ಬರುವ ದೇವಸ್ಥಾನ ಕಾಮಗಾರಿಗಳು ನಿಗಮದ ಧ್ಯೇಯೋದ್ದೇಶಗಳಡಿಯಲ್ಲಿ ಅವಕಾಶವಿರದ ಕಾರಣ, ಇವುಗಳನ್ನು ಹೊರತುಪಡಿಸಿ ಉಳಿದಂತೆ, ಒಟ್ಟು 508 ಸಂಖ್ಯೆಯ ರೂ.240.25 ಕೋಟಿಗಳ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕೋರಿ ನಿಗಮದಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ.

ಸಂಖ್ಯೆ:ಜಸಂಇ 64 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2357

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹೊಳೇನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಾಸನ ಜಿಲ್ಲೆ ಹೊಳೇನರಸೀಪುರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣದ ಕಾಮಗಾರಿಗೆ ಸರ್ಕಾರಿ ಆದೇಶ ಸಂಖ್ಯೆ: ಯುಸೇಇ/378/ಯುಸೇಕ್ರೀ 2016, ಬೆಂಗಳೂರು, ದಿನಾಂಕ: 29.08.2017ರಲ್ಲಿ ರೂ.450.00 ಲಕ್ಷಗಳ ಅನುದಾನ ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುವುದು ನಿಜವೇ; ಸದರಿ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ (ಸಂಪೂರ್ಣ ಮಾಹಿತಿ ನೀಡುವುದು);	ಹೌದು. ಒಳಾಂಗಣ ಕ್ರೀಡಾಂಗಣದ ಛಾವಣಿ ನಿರ್ಮಿಸುವ ಕಾಮಗಾರಿ ಪೂರ್ಣಗೊಂಡಿರುತ್ತದೆ. ಈಜುಕೊಳದ ಸಿವಿಲ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಫಿಲ್ಟ್ರೇಷನ್ ಪ್ಲಾಂಟ್ ಹಾಗೂ ಬ್ಯಾಲೆನ್ಸಿಂಗ್ ಟ್ಯಾಂಕ್ ಅಳವಡಿಸುವ ಕಾಮಗಾರಿ ಬಾಕಿಯಿರುತ್ತದೆ. ಬಾಸ್ಕೆಟ್‌ಬಾಲ್ ಅಂಕಣ ಹಾಗೂ ಬ್ಯಾಡ್ಮಿಂಟನ್ ಅಂಕಣ ಕಾಮಗಾರಿಗಳ ಕಾಂಕ್ರಿಟ್ ನೆಲಹಾಸು ಕಾಮಗಾರಿ ಪೂರ್ಣಗೊಂಡಿರುತ್ತದೆ.
ಆ)	ಮುಖ್ಯ ವಾಸ್ತುಶಿಲ್ಪಿ, ಬೆಂಗಳೂರು ರವರ ನಕ್ಷೆಯಂತೆ ಹೊಳೇನರಸೀಪುರ ಪಟ್ಟಣದ ಒಳಾಂಗಣ ಕ್ರೀಡಾಂಗಣದ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಒಟ್ಟು ಟೆಂಡರ್ ಮೊತ್ತ ರೂ.484.73 ಲಕ್ಷಗಳಾಗಿದ್ದು, ಇದರಲ್ಲಿ ರೂ.360.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಒಳಾಂಗಣ ಕ್ರೀಡಾಂಗಣದ ನಿರ್ಮಾಣ ಕಾಮಗಾರಿಗೆ ಬಾಕಿ ಇರುವ ರೂ.124.73 ಲಕ್ಷಗಳ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆಗೊಳಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)?	ಕಾಮಗಾರಿ ಪ್ರಗತಿಯನ್ನಾಧರಿಸಿ ಅನುದಾನದ ಲಭ್ಯತೆಯಾನುಸಾರ ಬಿಡುಗಡೆಗೆ ಕ್ರಮ ವಹಿಸಲಾಗುವುದು.

ವೈಎಸ್‌ಡಿ-ಇಬಿಬಿ/48/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

(1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2362
(2)	ಮಾನ್ಯ ಸದಸ್ಯರ ಹೆಸರು	:	ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)
(3)	ಉತ್ತರಿಸಬೇಕಾದ ದಿನಾಂಕ	:	16.03.2021
(4)	ಉತ್ತರಿಸುವ ಸಚಿವರು	:	ಮಾನ್ಯ ಒಳಾಡಳಿತ ಮತ್ತು ಕಾನೂನು ,ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

	ಪ್ರಶ್ನೆ	ಉತ್ತರ
(ಅ)	ನಿಡಗುಂದಿ ಮತ್ತು ಕೋಲಾರ ಹೊಸ ತಾಲ್ಲೂಕುಗಳಲ್ಲಿ ಕಾನೂನು ಇಲಾಖೆಯಿಂದ ಹೊಸದಾಗಿ ನ್ಯಾಯಾಲಯಗಳನ್ನು ಸ್ಥಾಪಿಸುವ ಕುರಿತು ಪರಿಶೀಲಿಸಲಾಗುತ್ತಿದೆಯೇ;	ಇಲ್ಲ
(ಆ)	ಹಾಗಿದ್ದಲ್ಲಿ, ಈ ಹೊಸ ತಾಲ್ಲೂಕುಗಳಲ್ಲಿ ನ್ಯಾಯಾಲಯಗಳನ್ನು ಹೊಸದಾಗಿ ಸ್ಥಾಪಿಸುವ ಸಲುವಾಗಿ ಇದುವರೆಗೂ ಕೈಗೊಂಡಿರುವ ಕ್ರಮಗಳೇನು:	ಕರ್ನಾಟಕ ರಾಜ್ಯದಲ್ಲಿ ರಚಿಸಲಾದ 39 ಹೊಸ ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣದ ತಾಲ್ಲೂಕು ಮಟ್ಟದ ಕಚೇರಿಗಳನ್ನು ಸ್ಥಾಪಿಸಲು ಕೈಗೊಂಡ ಕ್ರಮಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಪತ್ರ ದಿನಾಂಕ: 10.11.2020 ರಲ್ಲಿ "ರಾಜ್ಯದಲ್ಲಿ ಹೊಸದಾಗಿ ರಚನೆಯಾಗಿದ್ದ 50 ನೂತನ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಪ್ರಮುಖ ಇಲಾಖೆಗಳ ಕಚೇರಿಗಳನ್ನು ಪ್ರಾರಂಭಿಸಲು ಆಯಾ ಇಲಾಖಾ ವತಿಯಿಂದ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿತ್ತು. ಆದರೆ ರಾಜ್ಯದಲ್ಲಿ ಕೋವಿಡ್ -19 ಇರುವ ಸಂದರ್ಭ ಹಾಗೂ ಸದ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನಲೆಯಲ್ಲಿ ಹೊಸ ತಾಲ್ಲೂಕುಗಳಲ್ಲಿ ತಹಸೀಲ್ದಾರ್ ಕಚೇರಿಯನ್ನು ಹೊರತುಪಡಿಸಿ ಇನ್ನಿತರ ತಾಲ್ಲೂಕು ಮಟ್ಟದ ಕಚೇರಿ ಪ್ರಾರಂಭಿಸಲು / ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಯನ್ನು ಮುಂದೂಡಲು ಆರ್ಥಿಕ ಇಲಾಖೆಯು ಅಭಿಪ್ರಾಯ ನೀಡಿರುತ್ತದೆ. ಹೀಗಾಗಿ ಸದ್ಯದ ಪರಿಸ್ಥಿತಿಯ ಹಿನ್ನಲೆಯಲ್ಲಿ ಹೊಸ ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣದ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲವೆಂದು' ತಿಳಿಸಿರುತ್ತಾರೆ. ಹೊಸ ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣ ತಾಲ್ಲೂಕು ಮಟ್ಟದ ಕಚೇರಿಗಳು ಪ್ರಾರಂಭಗೊಂಡ ನಂತರ, ಕರ್ನಾಟಕ ಉಚ್ಚ ನ್ಯಾಯಾಲಯದಿಂದ, ಪ್ರಸ್ತಾವನೆ ಸ್ವೀಕೃತವಾದಲ್ಲಿ, ಈ ತಾಲ್ಲೂಕುಗಳಲ್ಲಿ ನ್ಯಾಯಾಲಯ ಸ್ಥಾಪನೆಯ ವಿಷಯವನ್ನು ಪರಿಗಣಿಸಲಾಗುವುದು.
(ಇ)	ಈ ಹೊಸ ತಾಲ್ಲೂಕುಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸುವ ವಿಳಂಬಕ್ಕೆ ಕಾರಣಗಳೇನು;	

(ಸಂಖ್ಯೆ: ಲಾ-ಎಲ್‌ಸಿಇ/29 /2021)

(ಬಸವರಾಜ ಬೊಮ್ಮಾಯಿ)
ಒಳಾಡಳಿತ ಮತ್ತು ಕಾನೂನು ,ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು,
ಕರ್ನಾಟಕ ಸರ್ಕಾರ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2363
2. ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ)
3. ಉತ್ತರಿಸುವ ದಿನಾಂಕ : 16-3-2021
4. ಉತ್ತರಿಸುವ ಸಚಿವರು : ಗೃಹ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೂಡಗಿ ಎನ್.ಟಿ.ಪಿ.ಸಿ ಪೊಲೀಸ್ ಠಾಣೆ ಯಾವ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದೆ;	ಪ್ರಸ್ತುತ ಕೂಡಗಿ ಎನ್.ಟಿ.ಪಿ.ಸಿ. ಪೊಲೀಸ್ ಠಾಣೆಯು ಎನ್.ಟಿ.ಪಿ.ಸಿ. ಘಟಕದ ಆವರಣದಲ್ಲಿ 04 ಕೋಣೆಗಳುಳ್ಳ ಪೋರ್ಟಕ್ಯಾಬಿನ್‌ನಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದೆ.
ಆ)	ಪೊಲೀಸ್ ಠಾಣೆ ಮತ್ತು ನೌಕರರ ವಸತಿ ಗೃಹಗಳನ್ನು ನಿರ್ಮಿಸುವ ಸಲುವಾಗಿ ಯಾವ ಸ್ಥಳವನ್ನು ಗುರುತಿಸಿ ಹಂಚಿಕೆ ಮಾಡಲಾಗಿದೆ;	ಪೊಲೀಸ್ ಠಾಣೆ, ಪರೇಡ್ ಗ್ರೌಂಡ್ ಮತ್ತು ನೌಕರರ ವಸತಿ ಗೃಹಗಳನ್ನು ನಿರ್ಮಿಸುವ ಸಲುವಾಗಿ ಅಗತ್ಯವಿರುವ 10 ಎಕರೆ ಭೂಮಿಯನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸುವಂತೆ ಕೋರಿ ಎನ್.ಟಿ.ಪಿ.ಸಿ. ಕೂಡಗಿ ಮತ್ತು ಅಭಿವೃದ್ಧಿ ಅಧಿಕಾರಿಗಳು ಕೆಐಎಡಿಬಿ, ಬೆಳಗಾವಿ ರವರನ್ನು ಕೋರಲಾಗಿರುತ್ತದೆ.
ಇ)	ಪೊಲೀಸ್ ಠಾಣೆ ಮತ್ತು ನೌಕರರ ವಸತಿ ಗೃಹಗಳನ್ನು ನಿರ್ಮಿಸುವುದಕ್ಕೆ ಸ್ಥಳವನ್ನು ಗುರುತಿಸಿ ಹಂಚಿಕೆ ಮಾಡಿಕೊಳ್ಳಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು;	
ಈ)	ಯಾವ ಕಾಲಮಿತಿಯೊಳಗಾಗಿ ಹಂಚಿಕೆ ಮಾಡಿಕೊಡಲಾಗುವುದು?	ಅಗತ್ಯವಿರುವ ಭೂಮಿಯನ್ನು ಎನ್.ಟಿ.ಪಿ.ಸಿ ಕೂಡಗಿ ರವರು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿದಲ್ಲಿ ಪೊಲೀಸ್ ಠಾಣೆ ಮತ್ತು ನೌಕರರ ವಸತಿ ಗೃಹಗಳನ್ನು ನಿರ್ಮಿಸಿ ಹಂಚಿಕೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಹೆಚ್‌ಡಿ 25 ಪಿಬಿಎಲ್ 2021

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನಾ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2366
2)	ಮಾನ್ಯ ಸದಸ್ಯರ ಹೆಸರು	:	ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)
3)	ಉತ್ತರಿಸುವ ದಿನಾಂಕ	:	16/03/2021
4)	ಉತ್ತರಿಸುವ ಸಚಿವರು	:	ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಹೊಸ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ; ಹೊಸದುರ್ಗ ತಾಲ್ಲೂಕಿನಲ್ಲಿ ಅತ್ಯಂತ ಹಿಂದುಳಿದ ಹೋಬಳಿ ಕೇಂದ್ರವಾದ ಮಡದಕೆರೆಯಲ್ಲಿ ನೂತನ ಪೊಲೀಸ್ ಠಾಣೆಯನ್ನು ತೆರೆಯಲು ಸರ್ಕಾರವು ಕೈಗೊಂಡ ಕ್ರಮವೇನು;	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಒಟ್ಟು 03 ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿರುತ್ತದೆ. ಹೊಸದುರ್ಗ ತಾಲ್ಲೂಕಿನ ಮಡದಕೆರೆಯಲ್ಲಿ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.
ಆ)	ಹಾಗಿದ್ದಲ್ಲಿ, ಯಾವಾಗ ಹೊಸ ಪೊಲೀಸ್ ಠಾಣೆಯನ್ನು ಮಂಜೂರು ಮಾಡಲಾಗುವುದು ?	

ಸಂಖ್ಯೆ: ಹೆಚ್‌ಡಿ 45 ಪಿಓಪಿ 2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2367
2. ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಆರ್ಥಿಕ ಇಲಾಖೆಯಿಂದ ಸಣ್ಣ ನೀರಾವರಿ, ಬೃಹತ್ ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಮೀಸಲಿಟ್ಟ ಅನುದಾನ ಬಳಕೆಗೆ ಡೀಮ್ಡ್ ಎಕ್ಸ್‌ಪೆಂಡೀಚರ್ ನ ನಿರ್ಬಂಧ ತೆಗೆಸಿ ಈ ಹಿಂದೆ ಇರುವ ರೀತಿ ಅನುಷ್ಠಾನಗೊಳಿಸಲು ತೆಗೆದುಕೊಂಡ ಕ್ರಮಗಳೇನು?	ಜಲಸಂಪನ್ಮೂಲ ಇಲಾಖೆಗೆ ಸಂಬಂಧಿಸಿದಂತೆ 2020-21ನೇ ಸಾಲಿಗೆ ಶೇ.75 ರಷ್ಟನ್ನು Deemed Expenditure ಆಗಿ ಪರಿಗಣಿಸುವಂತೆ ನಿರ್ದೇಶಿಸಲಾಗಿರುತ್ತದೆ. ಉಳಿದಂತೆ ಲೋಕೋಪಯೋಗಿ ಇಲಾಖೆ, ನಗರಾಭಿವೃದ್ಧಿ ಮತ್ತು ಸಣ್ಣ ನೀರಾವರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಈ ಮೊದಲಿನ ನಿರ್ದೇಶನದಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.

ಸಂಖ್ಯೆ: ಎಫ್‌ಡಿ 22 ಎಫ್‌ಸಿ-2 / 2021

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2369

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಜಕ್ಕೂರಿನಲ್ಲಿರುವ ವೈಮಾನಿಕ ತರಬೇತಿ ಕೇಂದ್ರ ಮುಂಭಾಗದಲ್ಲಿ ಎತ್ತರದ ಹೈವೇ ರಸ್ತೆ ನಿರ್ಮಿಸುವ ಸಂದರ್ಭ ದಲ್ಲಿ 'ಡಿಜಿಸಿಎ' ಒಪ್ಪಿಗೆ ಪಡೆಯಲಾಗಿದೆಯೇ ; ಅನುಮತಿ ಪಡೆಯದೇ ರಸ್ತೆ ನಿರ್ಮಿಸಿದ್ದಲ್ಲಿ ಸರ್ಕಾರದ ಕ್ರಮವೇನು ;	ಜಕ್ಕೂರಿನಲ್ಲಿರುವ ವೈಮಾನಿಕ ತರಬೇತಿ ಕೇಂದ್ರ ಮುಂಭಾಗದಲ್ಲಿ ಎತ್ತರದ ಹೈವೆ ರಸ್ತೆ ನಿರ್ಮಿಸುವ ಸಂದರ್ಭದಲ್ಲಿ 'ಡಿಜಿಸಿಎ' ಒಪ್ಪಿಗೆ ಪಡೆಯುವುದು ಅಗತ್ಯವಿರುವುದಿಲ್ಲ. ಅನುಮತಿ ಪಡೆಯದೆ ರಸ್ತೆ ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ರಚಿಸಿದ್ದ ತಾಂತ್ರಿಕ ಸಮಿತಿಯ ತೀರ್ಮಾನದಂತೆ ಶಾಲೆಯು ಅಗತ್ಯವಿರುವ ಮಾರ್ಪಾಡುಗಳನ್ನು ಅಳವಡಿಸಿಕೊಂಡು ಹಾರಾಟ ಚಟುವಟಿಕೆಯನ್ನು ಪ್ರಾರಂಭಿಸಿರುತ್ತದೆ.
ಆ)	ಎಲಿವೇಟೆಡ್ ರಾಷ್ಟ್ರೀಯ ಹೆದ್ದಾರಿ ರಸ್ತೆ ನಿರ್ಮಾಣದಿಂದ ಏರ್ ಕ್ರಾಫ್ಟ್‌ಗಳ ತರಬೇತಿ ಹಾರಾಟಕ್ಕೆ ಅಡ್ಡಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ.
ಇ)	ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?	ಎಲಿವೇಟೆಡ್ ಹೈವೆಯಿಂದ ಶಾಲೆಯ ಹಾರಾಟ ಚಟುವಟಿಕೆಗಳಿಗೆ ಅಡ್ಡಿಯುಂಟಾಗಿದ್ದು, ತಾಂತ್ರಿಕ ಸಮಿತಿಯ ನಿರ್ಧಾರದಂತೆ ಶಾಲೆಯ ರನ್‌ವೇಯ ಪೂರ್ವ ದಿಕ್ಕಿನಲ್ಲಿ 170 ಮೀಟರ್‌ನಷ್ಟು ರನ್‌ವೇಯನ್ನು ಲಂಬೀಕರಿಸಲು ಸುಮಾರು 3 ಎಕರೆ 14 ಗುಂಟೆ ಖಾಸಗಿ ಜಮೀನನ್ನು ಭೂ ವಿನಿಮಯದ ಮೂಲಕ ಪಡೆಯಲು ಸರ್ಕಾರವು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 05/05/2016ರಂದು ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯು ಖಾಸಗಿ ಜಮೀನಿನ ಭೂ ಮಾಲೀಕರ ಜೊತೆಯಲ್ಲಿ ಹಲವು ಬಾರಿ ಸಭೆಯನ್ನು ನಡೆಸಿದ್ದು, ಭೂ ವಿನಿಮಯದ ಬಗ್ಗೆ ಒಮ್ಮತ ಮೂಡಿರುವುದಿಲ್ಲ. ತದನಂತರ, ಸರ್ಕಾರವು ಭೂ ವಿನಿಮಯದ ಪ್ರಕ್ರಿಯೆಯನ್ನು ಕೈಬಿಟ್ಟು ಅಗತ್ಯವಿರುವ ಭೂ ಖರೀದಿಗೆ ಅನುದಾನದ ಮೂಲವನ್ನು ಗುರುತಿಸಿ ಮುಂದುವರೆಯುವಂತೆ ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಇವರಿಗೆ ನಿರ್ದೇಶನ ನೀಡಿರುತ್ತದೆ.

ವೈಎಸ್‌ಡಿ-ಇಬಿಬಿ/49/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2372

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ;	ಬೀದರ್ ಜಿಲ್ಲೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಗ್ರಾಮೀಣ ಕ್ರೀಡೋತ್ಸವ ಕಾರ್ಯಕ್ರಮವನ್ನು ಜಿಲ್ಲಾ, ತಾಲ್ಲೂಕು/ಗ್ರಾಮ ಪಂಚಾಯಿತ್ ಮೂಲಕ ಹೋಬಳಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಗ್ರಾಮೀಣ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 2018-19ನೇ ಸಾಲಿನಲ್ಲಿ ಬೀದರ್ ನಗರದ ಬಹುಮನಿ ಯುವಕ ಸಂಘ, ಮಣಿಯಾರ್ ತಾಲೀಮು ನಿರ್ಮಾಣಕ್ಕಾಗಿ ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.
ಆ)	ಕಳೆದ ಸಾಲಿನಲ್ಲಿ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಸರ್ಕಾರವು ವೆಚ್ಚ ಮಾಡಿರುವ ಹಣ ಎಷ್ಟು ;	ಕಳೆದ 2019-20ನೇ ಸಾಲಿನಲ್ಲಿ ಗ್ರಾಮೀಣ ಕ್ರೀಡೋತ್ಸವ ಕಾರ್ಯಕ್ರಮವನ್ನು 30 ಜಿಲ್ಲೆಯಲ್ಲಿ ಸಂಘಟನೆ ಮಾಡಲು ರೂ. 340.50 ಲಕ್ಷ ಹಾಗೂ ಗ್ರಾಮೀಣ ಗರಡಿ ಮನೆ ನಿರ್ಮಾಣ ಮಾಡಲು ರೂ. 150.00 ಲಕ್ಷ ವೆಚ್ಚ ಮಾಡಲಾಗಿದೆ.
ಇ)	ಸದರಿ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಇನ್ನು ಎಷ್ಟು ಹಣವನ್ನು ಮೀಸಲಿರಿಸಲಾಗಿದೆ. (ವಿವರ ನೀಡುವುದು)	ಮೀಸಲಿರಿಸಿದ್ದ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಲಾಗಿದ್ದು, ಹೆಚ್ಚುವರಿ ಅನುದಾನವನ್ನು ಮೀಸಲಿರಿಸಲಾಗಿಲ್ಲ.

ವೈಎಸ್‌ಡಿ-ಇಬಿಬಿ/50/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

160

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2375
ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸುವ ದಿನಾಂಕ	:	16.03.2021
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ.	ಪ್ರಶ್ನೆಗಳು	ಉತ್ತರ
ಅ)	ಬೀದರ್ ಜಿಲ್ಲೆಯ ಚುಳಕಿ ನಾಲದಿಂದ 33 ಕೆರೆಗಳನ್ನು ತುಂಬಿಸುವ ಕಾಮಗಾರಿಗೆ 2019-20ನೇ ಸಾಲಿನ ಆಯವ್ಯಯದಲ್ಲಿ ರೂ.375.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆಯೇ?	ಬೀದರ್ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ ಚಂದಾಪುರ ಗ್ರಾಮದ ಹತ್ತಿರ ನಿರ್ಮಿಸಿರುವ ಬ್ಯಾರೇಜ್‌ನಿಂದ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ 2019-20ನೇ ಸಾಲಿನ ಆಯವ್ಯಯದಲ್ಲಿ ರೂ.75.00 ಕೋಟಿಗಳ ಅನುದಾನ ಒದಗಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಗೆ ನೀರಿನ ಲಭ್ಯತೆಯ ಬಗ್ಗೆ ಹಾಗೂ ಯೋಜನಾ ವರದಿಯನ್ನು ತಯಾರಿಸುವ ಕುರಿತಂತೆ ಕರ್ನಾಟಕ ನೀರಾವರಿ ನಿಗಮದ ಪರಿಶೀಲನೆಯಲ್ಲಿರುತ್ತದೆ.
ಆ)	ಹಾಗಿದ್ದಲ್ಲಿ, ಸದರಿ ಕೆರೆಗಳನ್ನು ತುಂಬಿಸುವ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;	
ಇ)	ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ಹಾಗೂ ಈ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು.	

ಸಂಖ್ಯೆ:ಜಸಂಇ 63 ಎಂಎಲ್‌ಎ 2021

(ಸಹಿ)
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2376
ಸದಸ್ಯರ ಹೆಸರು	:	ಶ್ರೀ ಭರತ್ ಶೆಟ್ಟಿ ವೈ.ಡಾ|| (ಮಂಗಳೂರು ನಗರ ಉತ್ತರ)
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	16.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	**2019-20ನೇ ಸಾಲಿನ ಸ್ಥಳೀಯ ಶಾಸಕರು ಪ್ರದೇಶಾಭಿವೃದ್ಧಿ ಯೋಜನೆಯಡಿ ಬಿಡುಗಡೆಯಾಗಬೇಕಾದ ಅನುದಾನವು ಕಡಿಮೆ ಪ್ರಮಾಣದಲ್ಲಿ ಬಿಡುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು)**	ಹೌದು 2019-20ನೇ ಸಾಲಿನಲ್ಲಿ ಮೊದಲನೆಯ ಕಂತನ್ನು ಎಲ್ಲಾ ಕ್ಷೇತ್ರಗಳಿಗೂ ತಲಾ ರೂ.50.00 ಲಕ್ಷಗಳಂತೆ ಬಿಡುಗಡೆ ಮಾಡಲಾಗಿದ್ದು, ಪ್ರಗತಿಯನ್ನಾಧರಿಸಿ 13 ಜಿಲ್ಲೆಗಳಿಗೆ ಮಾತ್ರ ಎರಡನೆಯ ಕಂತಿನ ಅನುದಾನವನ್ನು ಪೂರ್ಣವಾಗಿ ಬಿಡುಗಡೆಮಾಡಲಾಗಿದೆ. ರಾಜ್ಯದ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.751.16 ಕೋಟಿಗಳ ಅನುದಾನ ಫೆಬ್ರುವರಿ-2020ರ ಅಂತ್ಯದವರೆಗೆ ಇರುವ ಕಾರಣ ಮೂರು ಮತ್ತು ನಾಲ್ಕನೆಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.

ಸಂಖ್ಯೆ:ಪಿಡಿಎಸ್ 23 ಕೆಎಲ್ ಎಸ್ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ
ಸಂಯೋಜನೆಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನ ಸಭೆ

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2382

02. ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ವೇದವ್ಯಾಸ ಕಾಮತ್ ಡಿ. (ಮಂಗಳೂರು ನಗರ ದಕ್ಷಿಣ)

03. ಉತ್ತರಿಸುವ ದಿನಾಂಕ : 16/03/2021

04. ಉತ್ತರಿಸುವ ಸಚಿವರು. : ಮಾನ್ಯ ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಹಿಂದೂ ಪರ ಸಂಘಟನೆಗಳು ಹಾಗೂ ಕಾರ್ಯಕರ್ತರ ಮೇಲೆ ಅನವಶ್ಯಕವಾಗಿ ದಾಖಲಾಗಿರುವ ದೂರುಗಳನ್ನು ಹಿಂಪಡೆಯಲು ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಂಗಳೂರು ನಗರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಹಿಂದೂ ಪರ ಸಂಘಟನೆಗಳು ಹಾಗೂ ಕಾರ್ಯಕರ್ತರ ಮೇಲೆ ಅನಾವಶ್ಯಕವಾಗಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.
ಆ)	ಬಂದಿದ್ದಲ್ಲಿ, ಈ ಪ್ರಕರಣಗಳನ್ನು ಹಿಂಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಅನ್ವಯಿಸುವುದಿಲ್ಲ.
ಇ)	ರಾಜ್ಯದಲ್ಲಿ 2019ರಿಂದ ಪ್ರಸುತ್ತ ಸಾಲಿನವರೆಗೆ ಒಟ್ಟು ಎಷ್ಟು ಅನವಶ್ಯಕವಾಗಿ ದಾಖಲಾಗಿರುವ ದೂರುಗಳನ್ನು ಹಿಂಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 2019 ರಿಂದ ಪ್ರಸ್ತುತ ಸಾಲಿನವರೆಗೆ ಅನಾವಶ್ಯಕವಾಗಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.
ಈ)	ಇಂತಹ ಅನಾವಶ್ಯಕ ಪ್ರಕರಣಗಳನ್ನು ಹಿಂಪಡೆಯಲು ಸರ್ಕಾರ ವಿಳಂಬ ಮಾಡುತ್ತಿರುವ ಬಗ್ಗೆ ಸೂಕ್ತ ಕಾರಣಗಳನ್ನು ತಿಳಿಸುವುದು;	ಅನ್ವಯಿಸುವುದಿಲ್ಲ.

HD 8 SDN 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2388
ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದ ನಗರ ಮತ್ತು ಗ್ರಾಮೀಣ ಭಾಗದಲ್ಲಿರುವ ಬೆಸ್ಕಾಂ ಕಛೇರಿಗಳಿಗೆ ಮಂಜೂರಾದ ಸಿಬ್ಬಂದಿಗಳು ಎಷ್ಟು; ಕೊರತೆ ಇರುವ ಸಿಬ್ಬಂದಿಗಳು ಎಷ್ಟು; (ವಿವರ ನೀಡುವುದು)	ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದ ನಗರ ಮತ್ತು ಗ್ರಾಮೀಣ ಭಾಗದಲ್ಲಿರುವ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಕಛೇರಿಗಳಿಗೆ ಮಂಜೂರಾದ ಸಿಬ್ಬಂದಿಗಳು ಹಾಗೂ ಕೊರತೆ ಇರುವ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ. (ದಿನಾಂಕ:28.02.2021ರ ಅಂತ್ಯಕ್ಕೆ)

ಗ್ರೂಪ್	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಖಾಲಿ ಇರುವ ಹುದ್ದೆ
ಎ	2	2	0
ಬಿ	11	6	5
ಸಿ	111	64	47
ಡಿ	203	99	104
ಒಟ್ಟು	**327**	**171**	**156**

ಆ)	ಕೊರತೆ ಇರುವ ಸಿಬ್ಬಂದಿಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ಸರ್ಕಾರದ ಸುತ್ತೋಲೆ ದಿನಾಂಕ:06.07.2020 ರಲ್ಲಿ ಕೋವಿಡ್-19 ನಿಂದ ಉಂಟಾದ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ. ಮುಂದುವರೆದು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಖಾಲಿ ಹುದ್ದೆಗಳ ಭರ್ತಿಗಾಗಿ, ಆರ್ಥಿಕ ಇಲಾಖೆಯ ಸೂಚನೆಗಳನ್ವಯ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 82 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2390
2)	ಮಾನ್ಯ ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ.ಟಿ (ದೊಡ್ಡಬಳ್ಳಾಪುರ)
3)	ಉತ್ತರಿಸುವ ದಿನಾಂಕ	:	16/03/2021
4)	ಉತ್ತರಿಸುವ ಸಚಿವರು	:	ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದ ನಗರ ಸಭೆಯ 31 ವಾರ್ಡುಗಳಲ್ಲಿ 1.00 ಲಕ್ಷ ಜನಸಂಖ್ಯೆ ಇದ್ದು, ಗ್ರಾಮೀಣ ಭಾಗದಲ್ಲಿ 1.50 ಲಕ್ಷ ಜನಸಂಖ್ಯೆ ಇದ್ದು, ಶಾಲೆ, ಕಾಲೇಜಿನ ವಿದ್ಯಾರ್ಥಿಗಳ ವಾಹನಗಳ ಸಂಚಾರ, ಕಾರ್ಮಿಕರ ಜನ ಸಂದಣಿ, ಕೈಗಾರಿಕೆಗಳ ಭಾರಿ ವಾಹನಗಳು, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ, ಅಂತರ ರಾಜ್ಯ ರಸ್ತೆ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೆಚ್ಚಿನ ವಾಹನಗಳು ಸಂಚಾರ ದಟ್ಟಣೆಯಿಂದ ಕೂಡಿರುವ ಈ ಭಾಗದಲ್ಲಿ ಸಂಚಾರ ಪೊಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;	ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ನಗರಕ್ಕೆ ಹೊಸದಾಗಿ ಸಂಚಾರ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.
(ಆ)	ಹಾಗಿದ್ದಲ್ಲಿ, ಸಂಚಾರ ಪೊಲೀಸ್ ಠಾಣೆ ಪ್ರಾರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;	

ಸಂಖ್ಯೆ: ಹೆಚ್‌ಡಿ 44 ಪಿಓಪಿ 2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : 2391

ಉತ್ತರಿಸಬೇಕಾದ ದಿನಾಂಕ 16/03/2021

ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಸಂ.	ಪ್ರಶ್ನೆ	ಉತ್ತರ
ಅ)	ಮಂಡ್ಯ ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವ ಸರ್.ಎಂ.ವಿ. ಕ್ರೀಡಾಂಗಣ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಈಗಾಗಲೇ ಅನೇಕ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದರೂ ಸಹ ಕ್ರೀಡಾಂಗಣದ ಅಭಿವೃದ್ಧಿ ಕಾರ್ಯಕ್ಕೆ ಸ್ಪಂದಿಸದಿರಲು ಕಾರಣವೇನು;	2019-20ನೇ ಸಾಲಿನ ಆಯವ್ಯಯ ಘೋಷಣೆಯಂತೆ ಮಂಡ್ಯ ನಗರದಲ್ಲಿರುವ ಸರ್.ಎಂ.ವಿ. ಜಿಲ್ಲಾ ಕ್ರೀಡಾಂಗಣದ ಪೆವಿಲಿಯನ್ ಕಟ್ಟಡ, ವೀಕ್ಷಕರ ಗ್ಯಾಲರಿಯ ಸೀಟಿಂಗ್ ದುರಸ್ತಿ, ಚೈನ್ ಲಿಂಕ್ ಫೆನ್ಸಿಂಗ್ ದುರಸ್ತಿ, ಮತ್ತಿತರ ಕಾಮಗಾರಿಗಳನ್ನು ಕೈಗೊಳ್ಳಲು ರೂ. 100.00 ಲಕ್ಷಗಳನ್ನು ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಮಂಡ್ಯ ಇವರಿಗೆ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
ಇ)	ಸದರಿ ಕ್ರೀಡಾಂಗಣದ ಅಭಿವೃದ್ಧಿ ಕಾರ್ಯಕ್ಕೆ ಯಾವಾಗ ಅನುದಾನ ಮಂಜೂರು ಮಾಡಲಾಗುವುದು?	2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಈ ಕ್ರೀಡಾಂಗಣವನ್ನು ರೂ.10ಕೋಟಿಗಳ ವೆಚ್ಚದಲ್ಲಿ ಉನ್ನತೀಕರಿಸಿ ಅತ್ಯುತ್ತಮ ದರ್ಜೆಯ ಸವಲತ್ತುಗಳನ್ನು ಸಾರ್ವಜನಿಕರಿಗೆ ಒದಗಿಸಲು ಕ್ರಮವಹಿಸಲಾಗುವುದೆಂದು ಘೋಷಿಸಿರುತ್ತಾರೆ. ಅದರಂತೆ, ಮುಂದಿನ ಆರ್ಥಿಕ ಸಾಲಿನಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ವೈಎಸ್‌ಡಿ-ಇಬಿಬಿ/52/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2392
2. ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್.ಎಂ
3. ಉತ್ತರಿಸಬೇಕಾದ ದಿನಾಂಕ : 16-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಮಂಡ್ಯ ವಿಧಾನಸಭಾ ಕ್ಷೇತ್ರದ ಬಸರಾಳು ಹೋಬಳಿಯ ಗ್ರಾಮಗಳು ಯಾವುದೇ ನೀರಾವರಿ ಸೌಲಭ್ಯಗಳಿಂದ ವಂಚಿತರಾಗಿರುವುದು, ಈ ಭಾಗಗಳಲ್ಲಿ ಈವರೆಗೂ ಯಾವುದೇ ಕೆರೆ ಕಟ್ಟೆಗಳು ತುಂಬದಿರುವುದು ಹಾಗೂ ಹೇಮಾವತಿ ನಾಲೆಯ ನೀರು ಬಸರಾಳು ಹೋಬಳಿಗೆ ಸಮರ್ಪಕವಾಗಿ ಪೂರೈಕೆಯಾಗದಿರುವ ಕುರಿತು ಮತ್ತು ಇಲ್ಲಿನ ಕಾಲುವೆಗಳು ದುಸ್ಥಿತಿಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೇಮಾವತಿ ಎಡದಂಡೆ ನಾಲೆಯ ವಿತರಣಾ ನಾಲೆ 70 ರಡಿಯಲ್ಲಿ 6530 ಹೆಕ್ಟೇರ್ ಮತ್ತು ಬಸರಾಳು ಉಪ ವಿತರಣಾ ನಾಲೆ ಅಡಿಯಲ್ಲಿ 6200 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಬಸರಾಳು ಹೋಬಳಿಯ ವ್ಯಾಪ್ತಿಗೆ ಒಳಪಡುತ್ತದೆ. ಸದರಿ ಅಚ್ಚುಕಟ್ಟು ಪ್ರದೇಶದಲ್ಲಿ ವಿನ್ಯಾಸದ ಪ್ರಕಾರ ಅರೆ ಖುಷ್ಕಿ ಬೆಳೆಗಳ ಅಚ್ಚುಕಟ್ಟಿಗೆ ನೀರನ್ನು ಹರಿಸಲಾಗುತ್ತಿದೆ. ಹೇಮಾವತಿ ಎಡದಂಡೆ ನಾಲೆಯ ಮುಖ್ಯ ನಾಲೆಯನ್ನು ಆಧುನೀಕರಣಗೊಳಿಸಿದ್ದು, ಮುಖ್ಯ ನಾಲೆಯ ಕೊನೆಯ ಭಾಗದವರೆಗೂ ನೀರನ್ನು ಸರಾಗವಾಗಿ ಹರಿಸಲು ಅನುವು ಮಾಡಿಕೊಡಲಾಗಿರುತ್ತದೆ. 2020-21 ನೇ ಸಾಲಿನಲ್ಲಿ ಬಸರಾಳು ಹೋಬಳಿಯ 24 ಕೆರೆಗಳಿಗೆ ಶೇ.90 ರಷ್ಟು ನೀರನ್ನು ಹರಿಸಲಾಗಿದೆ. ಸದರಿ ವಿತರಣಾ ನಾಲೆ ಹಾಗೂ ಮೈನರ್‌ಗಳು ಸುಮಾರು 25-30 ವರ್ಷಗಳ ಹಿಂದೆಯೇ ನಿರ್ಮಾಣಗೊಂಡಿದ್ದು ನಾಲೆಯಲ್ಲಿನ ಲೈನಿಂಗ್ ಹಾಗೂ ಮೂಲ ಸ್ವರೂಪ ಕಳೆದುಕೊಂಡಿದ್ದರೂ ಸಹ ತುರ್ತು ನಾಲಾ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳುವ ಮುಖೇನ ನೀರು ನಿರ್ವಹಣೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ವಿತರಣಾ ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಮುಂಬರುವ ಸಾಲುಗಳಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಕೈಗೆತ್ತಿಕೊಳ್ಳುವ ಕುರಿತು ಪರಿಶೀಲಿಸಲಾಗುವುದು.
ಆ	ಬಂದಿದ್ದಲ್ಲಿ, ಕೆರೆಗಳಿಗೆ ನೀರು ತುಂಬಿಸಲು ಏತ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಬಸರಾಳು ಹೋಬಳಿಯ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಸಲುವಾಗಿ ಯಾವುದೇ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ:ಜಸಂಇ 51 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2393
2. ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ.
3. ಉತ್ತರಿಸಬೇಕಾದ ದಿನಾಂಕ : 16-03-2021
4. ಉತ್ತರಿಸುವವರು : ಸಣ್ಣ ನೀರಾವರಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಮಂಡ್ಯ ವಿಧಾನಸಭಾ ಕ್ಷೇತ್ರದ ಕೆರೆಗಳಿಗೆ ಹಾಗೂ ಏತ ನೀರಾವರಿ ಯೋಜನೆಗೆ ಹಿಂದಿನ ಸರ್ಕಾರದ ಅವಧಿಯಲ್ಲಿ ರೂ.35 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ತಡೆಹಿಡಿದಿರಲು ಕಾರಣವೇನು;	ಮಂಡ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಕೆರೆಗಳ ಅಭಿವೃದ್ಧಿ ಮತ್ತು ಏತ ನೀರಾವರಿ ಯೋಜನೆಗಳಿಗೆ 2019-20ನೇ ಸಾಲಿನಲ್ಲಿ ರೂ 34.95 ಕೋಟಿಗಳ ಮೊತ್ತದಲ್ಲಿ ಕ್ರಿಯಾ ಯೋಜನೆಯಲ್ಲಿ ಸೇರಿಸುವ ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿರುತ್ತದೆ. 2019-20ನೇ ಸಾಲಿನ ಕ್ರಿಯಾಯೋಜನೆಗೆ ಅನುಮೋದನೆ ದೊರೆಯದ ಕಾರಣ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವುದಿಲ್ಲ.
ಆ	ಈಗಾಗಲೇ ಈ ಸಂಬಂಧ ಅನೇಕ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಇದುವರೆಗೂ ಅನುಮೋದನೆ ನೀಡದಿರಲು ಕಾರಣಗಳೇನು	
ಇ	ಸದರಿ ಯೋಜನೆಗೆ ಯಾವಾಗ ಅನುಮೋದನೆ ನೀಡಲಾಗುವುದು	ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನಾಧರಿಸಿ ಅನುದಾನದ ಲಭ್ಯತೆ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಕಡತ ಸಂಖ್ಯೆ: ಎಂಐಡಿ 132 ಎಲ್ ಎ ಕ್ಯೂ 2021(ಇ)

(ಜೆ.ಸಿ ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು

✓

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2395

ಸದಸ್ಯರ ಹೆಸರು : ನಾಗೇಶ್.ಬಿ.ಸಿ.(ತಿಪಟೂರು)

ಉತ್ತರಿಸಬೇಕಾದ ದಿನಾಂಕ : 16.03.2021

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮನೆ ಬಾಡಿಗೆ ಭತ್ಯೆ ಪಡೆಯಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು(ವಿವರ ನೀಡುವುದು);	ರಾಜ್ಯ ಸರ್ಕಾರದ ನೀತಿಯಂತೆ, ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕಾಗಿ ರಾಜ್ಯದಲ್ಲಿನ ನಗರಗಳು, ಪಟ್ಟಣಗಳು ಮತ್ತು ಇತರೆ ಪ್ರದೇಶಗಳನ್ನು ಕೇಂದ್ರ ಸರ್ಕಾರದ ಮಾದರಿಯಲ್ಲಿ 'ಎ', 'ಬಿ' ಮತ್ತು 'ಸಿ' ವರ್ಗದ ಪ್ರದೇಶಗಳನ್ನಾಗಿ ವರ್ಗೀಕರಿಸಲಾಗಿರುತ್ತದೆ. ಮನೆ ಬಾಡಿಗೆ ಭತ್ಯೆ ಮಂಜೂರಾತಿ ಸಂಬಂಧ ರಾಜ್ಯ ಸರ್ಕಾರವು ಹೊರಡಿಸಿರುವ ಆದೇಶಗಳ ಷರತ್ತು ಮತ್ತು ನಿಬಂಧನೆಗಳ ಪೂರೈಕೆಗೊಳಪಟ್ಟು ವಿವಿಧ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರು ಅವರು ಕಾರ್ಯನಿರ್ವಹಿಸುತ್ತಿರುವ ಪ್ರದೇಶಕ್ಕೆ ಅನುಗುಣವಾಗಿ ನಿಗದಿಪಡಿಸಲಾದ ದರಗಳಲ್ಲಿ ಮನೆ ಬಾಡಿಗೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ.
ಆ)	ಸರ್ಕಾರಿ ಕೆಲಸದಲ್ಲಿರುವ ಪತಿ, ಪತ್ನಿ ಇಬ್ಬರೂ ಸಹ ಮನೆ ಬಾಡಿಗೆ ಭತ್ಯೆ ಪಡೆಯಲು ನಿಯಮಗಳಲ್ಲಿ ಅವಕಾಶವಿದೆಯೇ (ವಿವರ ನೀಡುವುದು)?	ಸರ್ಕಾರಿ ಕೆಲಸದಲ್ಲಿರುವ ಪತಿ ಮತ್ತು ಪತ್ನಿ ಇಬ್ಬರನ್ನೂ ಒಳಗೊಂಡಂತೆ ಇತರೆ ಎಲ್ಲಾ ಸರ್ಕಾರಿ ನೌಕರರ ಮನೆ ಬಾಡಿಗೆ ಭತ್ಯೆಗಳನ್ನು ಮಂಜೂರು ಮಾಡಲು ದಿನಾಂಕ: 19-10-2012ರ ಸರ್ಕಾರಿ ಆದೇಶ ಸಂಖ್ಯೆ: ಆಇ 18 ಎಸ್ಆರ್‌ಪಿ 2012ರಲ್ಲಿ ವಿಸ್ತೃತವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ ಈ ಮಾರ್ಗಸೂಚಿಗಳ ಮತ್ತು ಅನ್ವಯಿಸುವ ಸೇವಾ ನಿಯಮಗಳ ಬೆಳಕಿನಲ್ಲಿ ಸರ್ಕಾರಿ ನೌಕರರ ಮನೆ ಬಾಡಿಗೆ ಭತ್ಯೆಯನ್ನು ಕ್ರಮಬದ್ಧಗೊಳಿಸಿ ಮಂಜೂರು ಮಾಡಲಾಗುತ್ತದೆ. ನಿಯಮಗಳಲ್ಲಿನ ಅವಕಾಶಗಳ ಪೂರೈಕೆಗೊಳಪಟ್ಟು ಸರ್ಕಾರಿ ನೌಕರಿಯಲ್ಲಿರುವ ಪತಿ-ಪತ್ನಿಯರಿಗೆ ಮನೆ ಬಾಡಿಗೆ ಭತ್ಯೆ ಮಂಜೂರು ಮಾಡಲು ಸಹ ಅವಕಾಶ ಕಲ್ಪಿಸಿರುತ್ತದೆ.

ಸಂ: ಆಇ 8 ಎಸ್ಆರ್‌ಪಿ 2021

(signature)

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2396
2)	ಮಾನ್ಯ ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
3)	ಉತ್ತರಿಸುವ ದಿನಾಂಕ	:	16/03/2021
4)	ಉತ್ತರಿಸುವ ಸಚಿವರು	:	ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸವದತ್ತಿ ತಾಲ್ಲೂಕಿನ ಯಕ್ಕುಂಡಿ ಬಡ್ಲಿ, ಕಾತ್ರಾಳ, ಧೂಪದಾಳ, ಬಡ್ಲಿ ತಾಂಡೆ, ಕಾರ್ಲಕಟ್ಟಿ, ಕಾರ್ಲಕಟ್ಟಿ ತಾಂಡೆ ಮುಂತಾದ ಗ್ರಾಮಗಳು ಸವದತ್ತಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಸಂಗತಿ ನಿಜವೇ;	ಹೌದು
(ಆ)	ಈ ಗ್ರಾಮಗಳು ನಂಜುಡಪ್ಪ ವರದಿಯ ಪ್ರಕಾರ ಹಿಂದುಳಿದ ಪ್ರದೇಶದಲ್ಲಿ ಬರಲಿದ್ದು, ಹೋಬಳಿ ಕೇಂದ್ರಸ್ಥಾನವಾಗಿರುವ ಮುರುಗೋಡ ಗ್ರಾಮದ ಸುತ್ತ-ಮುತ್ತಲಿನ ಗ್ರಾಮಗಳಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;	
(ಇ)	ಈ ಗ್ರಾಮಗಳಿಂದ ಸವದತ್ತಿಯು ದೂರದಲ್ಲಿದ್ದು, ಈ ಭಾಗದ ಜನರು ತಮ್ಮ ವ್ಯಾಜ್ಯ (ಧಾವೆ) ಗಳಿಗಾಗಿ ಸವದತ್ತಿ ಪೊಲೀಸ್ ಠಾಣೆಗೆ ಹೋಗಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
(ಈ)	ಸದರಿ ಗ್ರಾಮಗಳನ್ನು ಸವದತ್ತಿ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಮುರಗೋಡ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿಸುವಂತೆ ಈ ಭಾಗದ ಜನಪ್ರತಿನಿಧಿಗಳು ಸರ್ಕಾರವನ್ನು ಒತ್ತಾಯಿಸುತ್ತಿರುವುದು ನಿಜವೇ;	
(ಉ)	ಹಾಗಿದ್ದಲ್ಲಿ, ಈ ಭಾಗದ ಜನರ ಅನುಕೂಲತೆಗಾಗಿ ಈ ಎಲ್ಲಾ ಗ್ರಾಮಗಳನ್ನು ಸವದತ್ತಿ ಪೊಲೀಸ್ ಠಾಣೆಯ ವ್ಯಾಪ್ತಿಯಿಂದ ಮುರಗೋಡ ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗುವುದೇ?	ಸವದತ್ತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಯಕ್ಕುಂಡಿ ಬಡ್ಲಿ, ಕಾತ್ರಾಳ, ಧೂಪದಾಳ, ಬಡ್ಲಿ ತಾಂಡೆ, ಕಾರ್ಲಕಟ್ಟಿ, ಕಾರ್ಲಕಟ್ಟಿ ತಾಂಡೆ ಮುಂತಾದ ಗ್ರಾಮಗಳನ್ನು ಮುರಗೋಡ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಸಂಖ್ಯೆ: ಹೆಚ್‌ಡಿ 43 ಪಿಓಪಿ 2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2397
ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	16.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಪ್ರತಿ ವರ್ಷ ಶಾಸಕರಿಗೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಎಷ್ಟು ಅನುದಾನ ಒದಗಿಸಬೇಕೆಂದು ಸರ್ಕಾರ ನಿಗದಿ ಪಡಿಸಿದೆ;	ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಶಾಸಕರಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತಿ ವರ್ಷ ರೂ.2.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ.
ಆ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರಕ್ಕೆ ಸನ್ 2018-2019, 2019-2020 ಹಾಗೂ 2020-2021ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಎಷ್ಟು ಅನುದಾನ ನಿಗದಿಪಡಿಸಲಾಗಿದೆ ಹಾಗೂ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ಪೂರ್ಣ ವಿವರ ನೀಡುವುದು)	ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರಕ್ಕೆ ಸನ್ 2018-2019, 2019-2020 ಹಾಗೂ 2020-2021ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ನಿಗದಿಪಡಿಸಿದ ಹಾಗೂ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ:- (ಕೆಳಗಿನ ಕೋಷ್ಟಕ)
ಇ)	ಈ ಯೋಜನೆಯಡಿಯಲ್ಲಿ ಸರಿಯಾಗಿ ಅನುದಾನ ಬಿಡುಗಡೆ ಅಗದೇ ಇರುವುದರಿಂದ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತೊಂದರೆ ಆಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;	ಹೌದು
ಈ)	ಹಾಗಿದ್ದಲ್ಲಿ ಕೂಡಲೇ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರದಲ್ಲಿ ಈ ಯೋಜನೆಯಡಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅವಶ್ಯವಿರುವ ಹಾಗೂ ಸರ್ಕಾರ ನಿಗದಿಪಡಿಸಿದ ಅನುದಾನವನ್ನು ಬಿಡುಗಡೆ ಮಾಡಲಾಗುವುದೇ?	ಆರ್ಥಿಕ ಇಲಾಖೆಯ ಷರತ್ತುಗಳಂತೆ ಬಿಡುಗಡೆಯಾದ ಅನುದಾನ ಹಾಗೂ ಆರಂಭಿಕ ಶಿಲ್ಕು ಸೇರಿದಂತೆ ಒಟ್ಟು ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚ ಮಾಡಿದ ನಂತರ ಉಳಿಕೆ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

ಕ್ರಮ ಸಂಖ್ಯೆ	ಕ್ಷೇತ್ರ	ವರ್ಷ	ನಿಗದಿಯಾದ ಅನುದಾನ	ಬಿಡುಗಡೆಯಾದ ಅನುದಾನ
1	ಬೈಲುಹೊಂಗಲ	2018-19	200.00	159.15
		2019-20	200.00	60.05
		2020-21	200.00	200.00

ಸಂಖ್ಯೆ: ಪಿಡಿಎಸ್ 26 ಕೆಎಲ್ ಎಸ್ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ತ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2398
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ದಿನಾಂಕ : 16.03.2021

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಬೈಲವಾಡ ಗ್ರಾಮವು ಮಲಪ್ರಭಾ ಯೋಜನೆಯ ಪುನರ್ವಸತಿ ಕೇಂದ್ರವಾಗಿದ್ದು, ಈ ಗ್ರಾಮದ ಜನರ ಅನುಕೂಲತೆಗಾಗಿ ಬೈಲವಾಡ ಅಗಮೆಂಟೇಷನ್ ಆಫ್ ಲಿಫ್ಟ್ ಇರಿಗೇಶನ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ನಿಜವೇ ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ.	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ದೇವಲಾಪೂರ (ಬೈಲವಾಡ) ಅಗಮೆಂಟೇಷನ್ ಆಫ್ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.46.40 ಕೋಟಿಗಳ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಪ್ರಸ್ತುತ ಸದರಿ ಯೋಜನೆಯ ಸಾಧಕ-ಭಾದಕಗಳನ್ನು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲಿಸಲಾಗುತ್ತಿದೆ.
ಆ)	ಈ ಯೋಜನೆಯಿಂದ ಎಷ್ಟು ಎಕರೆ ಜಮೀನಿಗಳಿಗೆ ನೀರಾವರಿ ಸೌಲಭ್ಯ ಸಿಗುವುದೆಂದು ಸರ್ವೆ ಮಾಡಲಾಗಿದೆ.	ಈ ಯೋಜನೆಯಿಂದ ಸುಮಾರು 1574 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿರುತ್ತದೆ.
ಇ)	ಹಾಗಿದ್ದಲ್ಲಿ ಕೂಡಲೇ ಈ ಭಾಗದ ಜನರ ಅನುಕೂಲತೆಗಾಗಿ ಸದರಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ;	ಸದರಿ ವಿವರವಾದ ಯೋಜನಾ ವರದಿಗೆ ಅವಶ್ಯಕ ನೀರಿನ ಲಭ್ಯತೆ/ಹಂಚಿಕೆ ಮತ್ತು ಅನುದಾನದ ಹಂಚಿಕೆಯೊಂದಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ನಂತರ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಜಸಂಇ 36 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

55

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2399
ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕಿತ್ತೂರು ತಾಲ್ಲೂಕಿನ ತುರಕರಶಿಗಿಹಳ್ಳಿ ಗ್ರಾಮದಲ್ಲಿ ಹಾಗೂ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 110 ಕೆ.ವಿ. ಸ್ಟೇಶನ್ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುವುದು ನಿಜವೇ;	ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕಿತ್ತೂರು ತಾಲ್ಲೂಕಿನ ತುರುಕರಶೀಗಿಹಳ್ಳಿ ಗ್ರಾಮದಲ್ಲಿ ಹಾಗೂ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 110/11 ಕೆ.ವಿ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿಯ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.
ಆ)	ಈ ಭಾಗದಲ್ಲಿ ಮೇಲಿಂದ ಮೇಲೆ ವಿದ್ಯುತ್ ನಿಲಗಡೆ ಆಗುತ್ತಿದ್ದು ಸಾರ್ವಜನಿಕರಿಗೆ ಹಾಗೂ ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಆಗದೇ ಇರುವುದು ನಿಜವೇ;	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕಿತ್ತೂರು ತಾಲ್ಲೂಕಿನ ತುರುಕರಶೀಗಿಹಳ್ಳಿ ಗ್ರಾಮ ಹಾಗೂ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಿಗೆ ಪ್ರಸ್ತುತ ನಿರಂತರ ಜ್ಯೋತಿ ವಿದ್ಯುತ್ ಮಾರ್ಗಗಳ ಮುಖಾಂತರ 22 ರಿಂದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸುವ ನಿಟ್ಟಿನಲ್ಲಿ ತುರುಕರಶೀಗಿಹಳ್ಳಿ ಮತ್ತು ಹೊಸೂರು ಗ್ರಾಮಗಳಲ್ಲಿ 110 ಕೆ.ವಿ. ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.
ಇ)	ಇಲ್ಲಿ 110 ಕೆ.ವಿ.ಸ್ಟೇಶನ್ ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿರುವುದು ನಿಜವೇ;	ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕಿತ್ತೂರು ತಾಲ್ಲೂಕಿನ ತುರುಕರಶೀಗಿಹಳ್ಳಿ ಗ್ರಾಮದಲ್ಲಿ ಹಾಗೂ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 110 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿಯ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಪ್ರಸ್ತುತ ಅಂದಾಜು ಪಟ್ಟಿಯನ್ನು ತಯಾರಿಸುವ ಪ್ರಕ್ರಿಯೆ ಜಾರಿಯಲ್ಲಿದೆ.
ಈ)	ಹಾಗಿದ್ದಲ್ಲಿ, ಈ ಭಾಗದ ಜನರ ಅನುಕೂಲತರಗಾಗಿ ಸದರಿ ಕೆ.ವಿ. ಸ್ಟೇಸನ್‌ಗಳನ್ನು ಪ್ರಾರಂಭಿಸಲು ಕೂಡಲೇ ಸರ್ಕಾರ ಕ್ರಮ ಕೈಗೊಳ್ಳುವುದೇ; ಇದಕ್ಕೆ ಇನ್ನು ಎಷ್ಟು ದಿನಗಳ ಕಾಲಾವಕಾಶ ಬೇಕಾಗುವುದು? (ವಿವರ ನೀಡುವುದು)	

ಸಂಖ್ಯೆ: ಎನರ್ಜಿ 83 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2400
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ದಿನಾಂಕ : 16.03.2021

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸವದತ್ತಿ ತಾಲ್ಲೂಕಿನ ಏಣಗಿ–ಹಳೆ ಏಣಗಿ ರಸ್ತೆ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಈ ರಸ್ತೆಯ ಮೇಲೆ ಮಲಪ್ರಭಾ, ರೇಣುಕಾ, ಹರ್ಷಾ ಹಾಗೂ ಸೋಮೇಶ್ವರ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸುವ ವಾಹನಗಳು ಸಂಚರಿಸುತ್ತಿದ್ದು ಅಲ್ಲದೆ ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡ, ಶ್ರೀ ಕ್ಷೇತ್ರ ಸೊಗಲ, ಶ್ರೀ ಕ್ಷೇತ್ರ ಉಳವಿ ಹಾಗೂ ಶ್ರೀ ಕ್ಷೇತ್ರ ಗೊಡಚಿ ಜಾತ್ರೆಗಳಿಗೆ ಹೋಗುವ ವಾಹನಗಳು ಸಂಚರಿಸುತ್ತಿರುವುದರಿಂದ ಈ ರಸ್ತೆ ಹೆಚ್ಚಿನ ಮಟ್ಟದಲ್ಲಿ ಹಾಳಾಗಿ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಈ ರಸ್ತೆ ಹಾಳಾಗಿರುವುದರಿಂದ ಈ ಭಾಗದ ರೈತರಿಗೆ ತೊಂದರೆಯಾಗುತ್ತಿದ್ದು, ಈ ರಸ್ತೆ ದುರಸ್ತಿಗಾಗಿ ಜನಪ್ರತಿನಿಧಿಗಳು ಸರ್ಕಾರವನ್ನು ಕೋರಿರುವುದು ನಿಜವೇ:	ಹೌದು
ಈ)	ಈ ರಸ್ತೆಯು ಮಲಪ್ರಭಾ ಮುಳುಗಡೆಯ ಪುನರ್ವಸತಿ ವ್ಯಾಪ್ತಿಯಲ್ಲಿ ಬರುವುದರಿಂದ ಸದರಿ ರಸ್ತೆ ಸುಧಾರಣೆ ಮಾಡಲು ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ; ಎಷ್ಟು ಮೊತ್ತದ ಪ್ರಸ್ತಾವನೆ ಸಲ್ಲಿಕೆಯಾಗಿರುವುದು;	ಸದರಿ ರಸ್ತೆ ಸುಧಾರಣೆ ಮಾಡಲು ರೂ.309.00 ಲಕ್ಷಗಳ ಪ್ರಸ್ತಾವನೆಯನ್ನು ತಯಾರಿಸಲಾಗಿದ್ದು, ಕರ್ನಾಟಕ ನೀರಾವರಿ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಪ್ರಸ್ತಾವನೆಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅಗತ್ಯ ಅನುದಾನದ ಲಭ್ಯತೆಗೆ ಅನುಗುಣವಾಗಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.
ಉ)	ಹಾಗಿದ್ದಲ್ಲಿ ಕೂಡಲೇ ಈ ಭಾಗದ ಜನರ ಅನುಕೂಲತೆಗಾಗಿ ಈ ಕಾಮಗಾರಿಯನ್ನು ಆಯವ್ಯಯದಲ್ಲಿ ಸೇರಿಸಿ ಅವಶ್ಯವಿರುವ ಹಣ ಬಿಡುಗಡೆ ಮಾಡಿ ಈ ಕಾಮಗಾರಿ ಪ್ರಾರಂಬಿಸಲಾಗುವುದೇ?	

ಸಂಖ್ಯೆ: ಜಸಂಇ 35 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2402
2. ಸದಸ್ಯರ ಹೆಸರು : ಶ್ರೀ ಹೆಚ್.ಪಿ.ಮಂಜುನಾಥ್
3. ಉತ್ತರಿಸಬೇಕಾದ ದಿನಾಂಕ : 16-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹುಣಸೂರು ತಾಲ್ಲೂಕಿನ ಹಾರಂಗಿ ವಿಭಾಗ ವ್ಯಾಪ್ತಿಯಲ್ಲಿ 2018-19 ನೇ ಸಾಲಿನಲ್ಲಿ ಅನುಮೋದನೆಯಾಗಿ ಟೆಂಡರ್ ಕರೆಯಲಾಗಿರುವ ಒಟ್ಟು 43 ಕಾಮಗಾರಿಗಳನ್ನು ಪ್ರವಾಹದಿಂದಾಗಿ ತಡೆಹಿಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹುಣಸೂರು ತಾಲ್ಲೂಕಿನ ಹಾರಂಗಿ ವಿಭಾಗ ವ್ಯಾಪ್ತಿಯಲ್ಲಿ 2018-19 ನೇ ಸಾಲಿನಲ್ಲಿ ಪ್ರವಾಹದ ಕಾರಣದಿಂದ ಟೆಂಡರ್ ಕರೆದಿರುವ ಯಾವುದೇ ಕಾಮಗಾರಿಗಳನ್ನು ತಡೆಹಿಡಿದಿರುವುದಿಲ್ಲ.
ಆ	ಬಂದಿದ್ದಲ್ಲಿ, ತೆಡಹಿಡಿಯಲಾದ 43 (un-grounded) ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ ; (ವಿವರ ನೀಡುವುದು)	ಮುಂದುವರೆದು, ದಿನಾಂಕ:20-09-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ ಮಂಡಳಿಯ 70ನೇ ಸಭೆಯ ನಿರ್ಣಯದಂತೆ ಇನ್ನೂ ಅನುಷ್ಠಾನಗೊಳ್ಳದ ವಿವಿಧ ಪ್ರಕ್ರಿಯೆಯಲ್ಲಿರುವ ಹೊಸ ಕಾಮಗಾರಿಗಳನ್ನು ಆಡಳಿತಾತ್ಮಕ ಹಾಗೂ ಆರ್ಥಿಕ ಶಿಸ್ತನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಕೈಬಿಡಲಾಗಿದ್ದು, ಹಾಲಿ ಮುಂದುವರೆದ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಗಮದ ಕಾರ್ಯಭಾರ ಅಧಿಕವಾಗಿರುವುದರಿಂದ ಸದರಿ ಅನುಷ್ಠಾನಗೊಳ್ಳದೇ ಇರುವ ಕಾಮಗಾರಿಗಳನ್ನು ಮುಂಬರುವ ಆರ್ಥಿಕ ವರ್ಷದಲ್ಲಿ ಅನುದಾನದ ಲಭ್ಯತೆಗನುಸಾರವಾಗಿ ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು.
ಇ	ಈ ಕ್ಷೇತ್ರದ 43 - un-grounded ಕಾಮಗಾರಿಗಳಿಗೆ ನೀಡಿರುವ ತಡೆ ಆದೇಶವನ್ನು ಹಿಂಪಡೆದು ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು ? (ವಿವರ ನೀಡುವುದು)	

ಸಂಖ್ಯೆ:ಜಸಂಇ 54 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2404
2. ಸದಸ್ಯರ ಹೆಸರು : ಶ್ರೀ ಹೆಚ್.ಪಿ.ಮಂಜುನಾಥ್
3. ಉತ್ತರಿಸಬೇಕಾದ ದಿನಾಂಕ : 16-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹುಣಸೂರು ತಾಲ್ಲೂಕಿನ ಹಾರಂಗಿ ವಿಭಾಗ ವ್ಯಾಪ್ತಿಯಲ್ಲಿ ಬರುವ ಕಟ್ಟೆಮಳಲವಾಡಿ ಅಣೆಕಟ್ಟು ನಾಲೆ ಆಧುನೀಕರಣ ಕಾಮಗಾರಿಯನ್ನು ಅನುದಾನ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯಿಂದ ಹಿಂದಿರುಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು.
ಆ	ಬಂದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗೆ ಅನುಮೋದನೆ ನೀಡಿ ಅನುಷ್ಠಾನಗೊಳಿಸಲಾಗುವುದೇ ; (ವಿವರ ನೀಡುವುದು)	ಕಾವೇರಿ ನೀರಾವರಿ ನಿಗಮಕ್ಕೆ 2020-21 ನೇ ಸಾಲಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಮುಂದುವರೆದ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲು ಅವಕಾಶವಿರುವುದರಿಂದ ಮುಂದಿನ ಆರ್ಥಿಕ ವರ್ಷಗಳಲ್ಲಿ ಹಂಚಿಕೆಯಾಗಬಹುದಾದ ಅನುದಾನವನ್ನು ಪರಾಮರ್ಶಿಸಿ ಹುಣಸೂರು ತಾಲ್ಲೂಕಿನ ಹಾರಂಗಿ ವಿಭಾಗ ವ್ಯಾಪ್ತಿಯಲ್ಲಿ ಬರುವ ಕಟ್ಟೆಮಳಲವಾಡಿ ಅಣೆಕಟ್ಟು ನಾಲೆ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.
ಇ	ಈ ಕಾಮಗಾರಿಯನ್ನು ಅನುಷ್ಠಾನಗೊಳಿಸುವುದಾದರೆ ಯಾವ ಕಾಲಮಿತಿಯೊಳಗಾಗಿ ಅನುಮೋದನೆ ನೀಡಿ, ಅನುಷ್ಠಾನಗೊಳಿಸಲಾಗುವುದು ; (ವಿವರ ನೀಡುವುದು)	
ಈ	ಪ್ರಸಕ್ತ ಸಾಲಿನಲ್ಲಿ ಅನುಮೋದನೆ ನೀಡುವ ಯೋಜನೆ ಸರ್ಕಾರದ ಮುಂದೆ ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ:ಜಸಂಇ 53 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1.ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2405
2. ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ
(ಹುಣಸೂರು)
3. ಉತ್ತರಿಸುವ ದಿನಾಂಕ : 16-03-2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ 2015ನೇ ಸಾಲಿನ ಗೆಜೆಟೆಡ್ ಪ್ರೋಬೆಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದಲ್ಲಿ ಅಭ್ಯರ್ಥಿಗಳು ಪಡೆದ ವಿಷಯವಾರು ಅಂಕಗಳನ್ನು (Subjectwise marks) ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ (Karnataka State data center) (Center for E-governance) ಅಂದರೆ ಇ-ಆಡಳಿತ ಕೇಂದ್ರ ಸಹಾಯದೊಂದಿಗೆ kpseresults.karnataka.gov.in ಎಂಬ ವೆಬ್ ಡೊಮೈನ್‌ನ ಮೂಲಕ ಪ್ರಕಟಿಸಲಾಗಿದೆಯೇ;	ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಮಾಹಿತಿಯಂತೆ, National Informatics Center (NIC) ವತಿಯಿಂದ ಅಪ್ಲಿಕೇಷನ್ ತಯಾರಿಸಿ ಆಯಾ ಅಭ್ಯರ್ಥಿಗಳಿಗೆ ತಮ್ಮ ವಿಷಯವಾರು ಅಂಕಗಳು ಲಭ್ಯವಾಗುವಂತೆ ಅವಕಾಶ ಕಲ್ಪಿಸಿ ರಾಜ್ಯ ದತ್ತಾಂಶ ಕೇಂದ್ರದ ಮುಖಾಂತರ Host ಮಾಡಲಾಗಿದೆ.
ಆ	ಹಾಗಿದ್ದಲ್ಲಿ, ಈ kpseresults.karnataka.gov.in ಎಂಬ ಡೊಮೈನ್ MS-SQL ಡೇಟಾಬೇಸ್ ಮತ್ತು (Windows) ಸರ್ವರ್‌ನೊಂದಿಗೆ ಲಿಂಕ್ ಆಗಿರುವುದು ನಿಜವೇ?	ಯಾವುದೇ ತಂತ್ರಾಂಶವನ್ನು ಬಳಸಲು Operating system ಹಾಗೂ Data Base ನ ಅವಶ್ಯಕತೆ ಇರುತ್ತದೆ. ಮೇಲ್ಕಂಡ ತಂತ್ರಾಂಶಕ್ಕೆ Window Operating System ಹಾಗೂ SQL data Base ಅನ್ನು ಬಳಸಲಾಗಿರುತ್ತದೆ.

ಸಂಖ್ಯೆ: ಸಿಆಸುಇ 23 ಎಸ್‌ಎಸ್‌ಸಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2406
2) ಸದಸ್ಯರ ಹೆಸರು	: ಶ್ರೀ ಆನಂದ್ ಸಿದ್ದು ನ್ಯಾಮಗೌಡ
3) ಉತ್ತರಿಸಬೇಕಾದ ದಿನಾಂಕ	: 16.03.2021
4) ಉತ್ತರಿಸುವ ಸಚಿವರು	: ಸಣ್ಣ ನೀರಾವರಿ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ	ಜಮಖಂಡಿ ಮತಕ್ಷೇತ್ರದ ಕಂಕನವಾಡಿ ಗ್ರಾಮದ ಗುಹೇಶ್ವರ ದೇವಸ್ಥಾನದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಹೌದು. ಜಮಖಂಡಿ ಮತಕ್ಷೇತ್ರದ ಕಂಕನವಾಡಿ ಗ್ರಾಮದ ಗುಹೇಶ್ವರ ದೇವಸ್ಥಾನದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕಾಗಿ ರೂ.11.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಯನ್ನಾಧರಿಸಿ ಕ್ರಮ ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು.
ಆ	ಮಳೆಗಾಲದಲ್ಲಿ ಸದರಿ ಗ್ರಾಮದಿಂದ ಬೇರೆ ಗ್ರಾಮದಿಂದ ಬೇರೆ ಗ್ರಾಮಗಳಿಗೆ ಹೋಗುವುದಕ್ಕೆ ಅಲ್ಲಿನ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ	ಸದರಿ ಪ್ರಸ್ತಾವನೆಯನ್ನು ಸಣ್ಣ ನೀರಾವರಿ ಇಲಾಖೆಗೆ ರೂ.11 ಕೋಟಿ ಅಂದಾಜು ಪಟ್ಟಿ ಸಲ್ಲಿಸಿದ್ದರೂ ಇದುವರೆವಿಗೂ ಮಂಜೂರಾಗದೇ ಇರಲು ಕಾರಣವೇನು?	

ಸಂಖ್ಯೆ: ಸನೀಇ 170 ವಿಸವಿ 2021

(ಜೆ.ಸಿ ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2408

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ. (ಆನೇಕಲ್)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿ ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಪೂರ್ಣ ಮಾಹಿತಿ ನೀಡುವುದು)	ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿ ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣದ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. ಸರ್ಜಾಪುರ ಹೋಬಳಿಯಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತವಾದ ನಿವೇಶನ ಇದುವರೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಗೊಂಡಿರುವುದಿಲ್ಲ.
ಆ)	ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿ ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣದ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗಾಗಿ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು)	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವೈಎಸ್‌ಡಿ-ಇಬಿಬಿ/53/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2409
ಸದಸ್ಯರ ಹೆಸರು	:	ಶ್ರೀ ರಾಮಪ್ಪ ಎಸ್. (ಹರಿಹರ)
ಉತ್ತರಿಸುವ ದಿನಾಂಕ	:	16.03.2021
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ</td><td>ಹರಿಹರ ಮತಕ್ಷೇತ್ರದ ಹರಿಹರೇಶ್ವರ ದೇವಸ್ಥಾನದ ಬಳಿ ತುಂಗಭದ್ರಾ ನದಿಗೆ ತಡೆಗೋಡೆ ನಿರ್ಮಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td rowspan="4">ಹರಿಹರ ಮತಕ್ಷೇತ್ರದ ಹರಿಹರೇಶ್ವರ ದೇವಸ್ಥಾನದ ಬಳಿ ತುಂಗಭದ್ರಾ ನದಿಗೆ ತಡೆಗೋಡೆ ನಿರ್ಮಿಸುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ.</td></tr>
<tr><td>ಆ</td><td>ಬಂದಿದ್ದಲ್ಲಿ, ಯಾವಾಗ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.?</td></tr>
<tr><td>ಇ</td><td>ಸದರಿ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು;</td></tr>
<tr><td>ಈ</td><td>ಇಲ್ಲವಾದಲ್ಲಿ ಕಾರಣವೇನು</td></tr>
</table>

ಸಂಖ್ಯೆ:ಜಸಂಇ 62 ಎಂಎಲ್ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

2

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2410
ಸದಸ್ಯರ ಹೆಸರು	:	ಶ್ರೀ ವೀರಭದ್ರಯ್ಯ ಎಂ.ವಿ. (ಮಧುಗಿರಿ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಪ್ರಶ್ನೆ		ಉತ್ತರ
ಅ)	ಮಧುಗಿರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಾಸ ಹೆಚ್ಚಾಗಿ, ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಧುಗಿರಿ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದ 100 ಎಂ.ವಿ.ಎ. ಪರಿವರ್ತಕ ವಿಫಲವಾಗಿರುವುದರಿಂದ, ಸದರಿ ಸ್ಥಾವರದಲ್ಲಿ ಇರುವ ಇನ್ನೊಂದು 100 ಎಂ.ವಿ.ಎ. ಪರಿವರ್ತಕದ ಮೂಲಕ ಹಾಗೂ ಅಂತರಸನಹಳ್ಳಿ, ಪಾವಗಡ ಮತ್ತು ಗೌರಿಬಿದನೂರು 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಗಳಿಂದ ಮಧುಗಿರಿ ತಾಲ್ಲೂಕಿನ ಎಲ್ಲಾ ವಿದ್ಯುತ್ ಉಪಕೇಂದ್ರಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ, ಮುಂದುವರೆದು, ವಿಫಲಗೊಂಡಿರುವ 100 ಎಂ.ವಿ.ಎ. ಪರಿವರ್ತಕದ ಬದಲಾಗಿ ಹೊಸದಾದ 100 ಎಂ.ವಿ.ಎ. ಪರಿವರ್ತಕವನ್ನು ಅಳವಡಿಸುವ ಕಾಮಗಾರಿಯು ಪ್ರಸ್ತುತ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿಯೇ ಚಾಲನೆಗೊಳಿಸಲಾಗುವುದು.
ಆ)	ಬಂದಿದ್ದಲ್ಲಿ, ಹೊಸದಾಗಿ ವಿದ್ಯುತ್ ಸಬ್ ಸ್ಟೇಷನ್ ನಿರ್ಮಾಣ ಮಾಡಲು ಸರ್ಕಾರದಿಂದ ಯೋಜನೆ ರೂಪಿಸಲಾಗಿದೆಯೇ;	ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬ್ರಹ್ಮದೇವನಹಳ್ಳಿ, ಕವನದಾಳ ಮತ್ತು ಗರಣಿ ಗ್ರಾಮಗಳಲ್ಲಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿಯ ಸಭೆಯಲ್ಲಿ ಅನುಮೋದನೆಗೊಂಡಿರುತ್ತವೆ. ಸದರಿ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಅಗತ್ಯವಿರುವ ಸರ್ಕಾರಿ ಭೂಮಿಯನ್ನು ಗುರುತಿಸಿಕೊಡಲು ಜಿಲ್ಲಾಧಿಕಾರಿ, ತುಮಕೂರು ರವರಿಗೆ ಮನವಿಯನ್ನು ಸಲ್ಲಿಸಲಾಗಿದೆ.
ಇ)	ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಎನರ್ಜಿ 85 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2423
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತರಿಗೆ ಎಷ್ಟು ಗಂಟೆ 3 ಫೇಸ್ ವಿದ್ಯುತ್ ನೀಡಲಾಗುತ್ತಿದೆ;	ರಾಜ್ಯದಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸರ್ಕಾರದ ಆದೇಶದಂತೆ ದಿನವಹಿ 7 ಗಂಟೆಗಳ ಕಾಲ 3-ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.
ಆ)	ಕಿತ್ತೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ ರಾತ್ರಿ ವೇಳೆ 3 ಫೇಸ್ ವಿದ್ಯುತ್ತನ್ನು ನೀಡುತ್ತಿರುವುದರಿಂದ ಅಪಘಾತ, ಹಾವು ಕಡಿತದಂತಹ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ ರಾತ್ರಿ ವೇಳೆ 3 ಫೇಸ್ ವಿದ್ಯುತ್ತನ್ನು ನೀಡುತ್ತಿರುವುದರಿಂದ ಅಪಘಾತ, ಹಾವು ಕಡಿತದಂತಹ ಯಾವುದೇ ಪ್ರಕರಣಗಳು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ವರದಿಯಾಗಿರುವುದಿಲ್ಲ.
ಇ)	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ 3 ಫೇಸ್ ವಿದ್ಯುತ್ತನ್ನು ಸಂಪೂರ್ಣವಾಗಿ ಹಗಲು ವೇಳೆಯಲ್ಲಿ ವಿತರಿಸಲು ಸರ್ಕಾರದ ಕ್ರಮವೇನು?	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ 3 ಫೇಸ್ ವಿದ್ಯುತನ್ನು ಸಂಪೂರ್ಣವಾಗಿ ಹಗಲಿನ ವೇಳೆಯಲ್ಲಿ ಸರಬರಾಜು ಮಾಡಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. 1. ಹಿರೇಬಾಗೇವಾಡಿಯಲ್ಲಿ 110 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದ 1*10 ಎಂ.ವಿ.ಎ 110/11ಕೆ.ವಿ ಶಕ್ತಿ ಪರಿವರ್ತಕವನ್ನು 1*20 ಎಂ.ವಿ.,ಎ ಶಕ್ತಿ ಪರಿವರ್ತಕದಿಂದ ಬದಲಾಯಿಸುವ ಕಾಮಗಾರಿ ಪ್ರಗತಿಯಲ್ಲಿದೆ. 2. ತುರ್ಕರಶಿಗೆಹಳ್ಳಿಯಲ್ಲಿ 110 ಕೆ.ವಿ. ಉಪಕೇಂದ್ರವನ್ನು ಸ್ಥಾಪಿಸಲು ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. 3. ತಿಗಡಿಯಲ್ಲಿ 110 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.

ಸಂಖ್ಯೆ: ಎನರ್ಜಿ 87 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2422
2. ಸದಸ್ಯರ ಹೆಸರು : ಶ್ರೀ ತಮ್ಮಣ್ಣ ಡಿ.ಸಿ.
3. ಉತ್ತರಿಸಬೇಕಾದ ದಿನಾಂಕ : 16-03-2021.
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಮಂಡ್ಯ ಜಿಲ್ಲೆ, ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ ಸಣ್ಣ ನೀರಾವರಿ ಇಲಾಖೆಯಿಂದ ಒಟ್ಟು 8 ಕಾಮಗಾರಿಗಳಗೆ ಆಡಳಿತಾತ್ಮಕ, ತಾಂತ್ರಿಕ, ಆರ್ಥಿಕ ಮಂಜೂರಾತಿ ನೀಡಿದ್ದು, ಟೆಂಡರ್ ಅಧಿಸೂಚನೆ ಹಾಗೂ ಟೆಂಡರ್ ಅಧಿಸೂಚನೆ ಹೊರಡಿಸಿ, ಟೆಂಡರ್‌ದಾರರು ಭಾಗವಹಿಸಿದ್ದರೂ ಮೂರು(3) ಕಾಮಗಾರಿಗಳ ಹೊರತು ಐದು (5) ಕಾಮಗಾರಿಗಳನ್ನು ತಡೆಹಿಡಿದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;	ಹೌದು. ಬಂದಿದೆ.
ಆ	ಬಂದಿದ್ದರೆ ಸರ್ಕಾರದಲ್ಲ ತಡೆಹಿಡಿದಿರುವ ಐದು (5) ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿಸಿ, ಕಾಮಗಾರಿಗಳ ಪ್ರಾರಂಭಕ್ಕೆ ಆದೇಶ ನೀಡಲಾಗುವುದೇ? ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಆದೇಶ ನೀಡಲಾಗುವುದು?	2019-20ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಅನುಮೋದನೆಗೊಂಡಿರುವ 11 ಕಾಮಗಾರಿಗಳ ಬದಲಾಗಿ ಮಂಡ್ಯ ಜಿಲ್ಲೆ, ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ 8 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಅನುಮೋದನೆಗೊಂಡ ಬದಲಿ ಕಾಮಗಾರಿಗಳ ಅಂದಾಜು ಪಟ್ಟಿಗಳಗೆ ಮಂಜೂರಾತಿ ಪಡೆದು ಟೆಂಡರ್ ಪ್ರಕಟಣೆಗೊಳಸಲಾಗಿರುತ್ತದೆ. ಮುಂದುವರೆದು, 2019-20ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆ, ಮದ್ದೂರು ವಿಧಾನ ಸಭಾ ಕ್ಷೇತ್ರಕ್ಕೆ ಅನುಮೋದನೆಗೊಂಡಿರುವ 8 ಕಾಮಗಾರಿಗಳಲ್ಲಿ 7 ಕಾಮಗಾರಿಗಳ ಬದಲಾಗಿ ಕೆ.ಆರ್.ಪೇಟೆ ತಾಲ್ಲೂಕಿನ 10 ಬದಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ. ಈ ಕಾರಣದಿಂದಾಗಿ ಈ ಹಿಂದೆ ಪ್ರಕಟಿಸಿದ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಸಲಾಗಿರುತ್ತದೆ. ತಡೆಹಿಡಿದಿರುವ ಕಾಮಗಾರಿಗಳಗೆ ಅನುಮೋದನೆ ನೀಡಿದ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಸಂಖ್ಯೆ: ಸನೀಇ 158 ವಿಸವಿ 2021.

(ಜೆ.ಸಿ.ಮಾಧುಸ್ವಾಮಿ,)
ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2423
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತರಿಗೆ ಎಷ್ಟು ಗಂಟೆ 3 ಫೇಸ್ ವಿದ್ಯುತ್ ನೀಡಲಾಗುತ್ತಿದೆ;	ರಾಜ್ಯದಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸರ್ಕಾರದ ಆದೇಶದಂತೆ ದಿನವಹಿ 7 ಗಂಟೆಗಳ ಕಾಲ 3–ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.
ಆ)	ಕಿತ್ತೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ ರಾತ್ರಿ ವೇಳೆ 3 ಫೇಸ್ ವಿದ್ಯುತ್ತನ್ನು ನೀಡುತ್ತಿರುವುದರಿಂದ ಅಪಘಾತ, ಹಾವು ಕಡಿತದಂತಹ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ ರಾತ್ರಿ ವೇಳೆ 3 ಫೇಸ್ ವಿದ್ಯುತ್ತನ್ನು ನೀಡುತ್ತಿರುವುದರಿಂದ ಅಪಘಾತ, ಹಾವು ಕಡಿತದಂತಹ ಯಾವುದೇ ಪ್ರಕರಣಗಳು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ವರದಿಯಾಗಿರುವುದಿಲ್ಲ.
ಇ)	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ 3 ಫೇಸ್ ವಿದ್ಯುತ್ತನ್ನು ಸಂಪೂರ್ಣವಾಗಿ ಹಗಲು ವೇಳೆಯಲ್ಲಿ ವಿತರಿಸಲು ಸರ್ಕಾರದ ಕ್ರಮವೇನು?	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಗ್ರಾಮಗಳ ರೈತರಿಗೆ 3 ಫೇಸ್ ವಿದ್ಯುತನ್ನು ಸಂಪೂರ್ಣವಾಗಿ ಹಗಲಿನ ವೇಳೆಯಲ್ಲಿ ಸರಬರಾಜು ಮಾಡಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. 1. ಹಿರೇಬಾಗೆವಾಡಿಯಲ್ಲಿ 110 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದ 1*10 ಎಂ.ವಿ.ಎ 110/11ಕೆ.ವಿ ಶಕ್ತಿ ಪರಿವರ್ತಕವನ್ನು 1*20 ಎಂ.ವಿ.,ಎ ಶಕ್ತಿ ಪರಿವರ್ತಕದಿಂದ ಬದಲಾಯಿಸುವ ಕಾಮಗಾರಿ ಪ್ರಗತಿಯಲ್ಲಿದೆ. 2. ತುರ್ಕರಶಿಗೆಹಳ್ಳಿಯಲ್ಲಿ 110 ಕೆ.ವಿ. ಉಪಕೇಂದ್ರವನ್ನು ಸ್ಥಾಪಿಸಲು ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. 3. ತಿಗಡಿಯಲ್ಲಿ 110 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.

ಸಂಖ್ಯೆ: ಎನರ್ಜಿ 87 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2424
2. ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವವರು : ಸಣ್ಣ ನೀರಾವರಿ ಸಚಿವರು

	ಪ್ರಶ್ನೆ	ಉತ್ತರ
ಅ	ಕಿತ್ತೂರು ವಿಧಾನಸಭಾ ಕ್ಷೇತ್ರದ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದು ನಿಜವೇ;	ಹೌದು.
ಆ	ಹಾಗಿದ್ದಲ್ಲಿ, ಈ ಪ್ರಸ್ತಾವನೆಗಳು ಯಾವ ಹಂತದಲ್ಲಿದೇ;	2020-21ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಹಾನಿಯಾದ ಮಾರ್ಗನಕೊಪ್ಪ ಕೆರೆಯ ಏರಿಯ ಪುನರುಜ್ಜೀವನ ಕಾಮಗಾರಿಯನ್ನು ಅಂದಾಜು ಮೊತ್ತ ರೂ.30.00ಲಕ್ಷಗಳಲ್ಲಿ ಮತ್ತು ಬೆಣಚಿನಮರಡಿ ಕೆರೆಯ ಏರಿಯ ಪುನರುಜ್ಜೀವನ ಕಾಮಗಾರಿಯನ್ನು ಅಂದಾಜು ಮೊತ್ತ ರೂ.100.00 ಲಕ್ಷಗಳಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಎಂ.ಕೆ. ಹುಬ್ಬಳ್ಳಿ (ಗದ್ದಿಕೆರೆ) ಪುನರುಜ್ಜೀವನ ಕಾಮಗಾರಿಯನ್ನು ರೂ.950.00ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಪ್ರಸ್ತಾವನೆ ಸ್ವೀಕೃತವಾಗಿದ್ದು. ಅನುದಾನದ ಲಭ್ಯತೆ ಆಧರಿಸಿ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.
ಇ	ಈ ಪ್ರಸ್ತಾವನೆಗಳಿಗೆ 2021-22ನೇ ಸಾಲಿನಲ್ಲಿ ಅನುಮೋದನೆ ನೀಡಿ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರದ ಕ್ರಮವೇನು;	
ಈ	ಯಾವ ಕಾಲಮಿತಿಯಲ್ಲಿ ಈ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು?	

ಸಂಖ್ಯೆ: ಎಂ ಐ ಡಿ 149 ಎಲ್ ಎ ಕ್ಯೂ 2021

(ಜೆ.ಸಿ ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2426
2. ಮಾನ್ಯ ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
3. ಉತ್ತರಿಸುವ ದಿನಾಂಕ : 16–3–2021
4. ಉತ್ತರಿಸುವ ಸಚಿವರು : ಗೃಹ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಿತ್ತೂರು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ–04ರಲ್ಲಿ ಹೆಚ್ಚಾಗಿ ವಾಹನಗಳು ಓಡಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನಲ್ಲಿ ಸಂಚಾರ ಪೊಲೀಸ್ ಠಾಣೆಯನ್ನು ತೆರೆಯಲು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯನ್ವಯ ನಿಗದಿಪಡಿಸಿದ ಮಾನದಂಡಗಳನ್ನು ಪೂರೈಸಿದಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.
(ಆ)	ಹಾಗಿದ್ದಲ್ಲಿ, ಕಿತ್ತೂರು ತಾಲ್ಲೂಕಿನಲ್ಲಿ ಅಪಘಾತ ಪ್ರಕರಣಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಮತ್ತು ಸುಗಮ ಸಂಚಾರಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡಲು ಸರ್ಕಾರದ ಕ್ರಮವೇನು ?	

ಸಂಖ್ಯೆ:ಹೆಚ್‌ಡಿ 42 ಪಿಓಪಿ 2021

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನಾ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2436
ಸದಸ್ಯರ ಹೆಸರು	:	ಶ್ರೀ ಯತೀಂದ್ರ ಸಿದ್ದರಾಮಯ್ಯ ಡಾ|| (ವರುಣ)
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	16.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2018-19, 2019-20 ಮತ್ತು 2020-21ನೇ ಸಾಲಿಗೆ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ನಿಗದಿಪಡಿಸಿದ ಅನುದಾನವೆಷ್ಟು; (ಮಾಹಿತಿ ನೀಡುವುದು)	2018-19, 2019-20 ಮತ್ತು 2020-21ನೇ ಸಾಲುಗಳಿಗೆ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಪ್ರತಿ ಕ್ಷೇತ್ರಕ್ಕೆ ಪ್ರತಿ ವರ್ಷ ರೂ.2.00 ಕೋಟಿಗಳಂತೆ ಅನುದಾನವನ್ನು ನಿಗದಿಪಡಿಸಲಾಗಿದೆ.
ಆ)	ಈ ಪೈಕಿ ಮಂಜೂರು ಮಾಡಿದ ಅನುದಾನ ಎಷ್ಟು? (ವರ್ಷವಾರು ಮಾಹಿತಿ ನೀಡುವುದು)	ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ 2018-19, 2019-20 ಮತ್ತು 2020-21ನೇ ಸಾಲುಗಳಲ್ಲಿ ಮಂಜೂರು ಮಾಡಲಾದ ಅನುದಾನದ ವಿವರಗಳು ಈ ಕೆಳಗಿನಂತಿವೆ:- (ರೂ.ಕೋಟಿಗಳಲ್ಲಿ)

(ರೂ.ಕೋಟಿಗಳಲ್ಲಿ)

ಕ್ರ.ಸಂ	ವರ್ಷ	ಬಿಡುಗಡೆಯಾದ ಅನುದಾನ
1	2018-19	481.69
2	2019-20	299.67
3	2020-21	447.50

ಸಂಖ್ಯೆ: ಪಿಡಿಎಸ್ 22 ಕೆಎಲ್ ಎಸ್ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

೩\

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2443
ಸದಸ್ಯರ ಹೆಸರು	:	ಶ್ರೀ ವೆಂಕಟರೆಡ್ಡಿ ಮುದ್ನಾಳ್
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಯಾದಗಿರಿ ಮತಕ್ಷೇತ್ರದಲ್ಲಿ ವಡಗೇರಾ ನೂತನ ತಾಲ್ಲೂಕು ಕೇಂದ್ರವಾಗಿದ್ದು, ವಡಗೇರಾದಲ್ಲಿ ಇಂಧನ ಇಲಾಖೆಯ ಕಛೇರಿ ಆರಂಭ (Sub division) ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಯಾದಗಿರಿ ವಿಭಾಗವನ್ನು ವಿಭಜಿಸಿ ಹೊಸದಾಗಿ ಸುರಪುರ ವಿಭಾಗ ರಚನೆಗೆ ದಿನಾಂಕ:27.11.2020 ರಂದು ಜರುಗಿದ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಮಂಡಳಿ ನಿರ್ದೇಶಕರ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಸುರಪುರ ವಿಭಾಗಕ್ಕೆ ಬರುವ ವಡಗೇರಾ ತಾಲ್ಲೂಕಿನಲ್ಲಿ ಹೊಸದಾಗಿ ಉಪ ವಿಭಾಗ ಕಛೇರಿ (Sub division) ಸ್ಥಾಪಿಸುವ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಮುಂದಿನ ಮಂಡಳಿ ನಿರ್ದೇಶಕರ ಸಭೆಯಲ್ಲಿ ಮಂಡಿಸಿ ಸೂಕ್ತ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

ಸಂಖ್ಯೆ : ಎನರ್ಜಿ 89 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2446
2. ಸದಸ್ಯರ ಹೆಸರು : ಶ್ರೀ ನಿಂಬಣ್ಣನವರ್ ಸಿ.ಎಂ.
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ.	ಕಲಘಟಗಿ ಮತಕ್ಷೇತ್ರ ಡಾ:ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ಕ್ಷೇತ್ರವಾಗಿದ್ದು ಇದು ಸಣ್ಣ ನೀರಾವರಿ ಇಲಾಖೆಯ ಪಶ್ಚಿಮವಾಹಿನಿ ಯೋಜನೆ ವ್ಯಾಪ್ತಿಯಡಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಡಾ:ನಂಜುಂಡಪ್ಪ ವರದಿ ಪ್ರಕಾರ ಕಲಘಟಗಿ ತಾಲ್ಲೂಕು ಅತಿ ಹಿಂದುಳಿದ ಕ್ಷೇತ್ರವಾಗಿರುತ್ತದೆ. ಈ ತಾಲ್ಲೂಕು ವ್ಯಾಪ್ತಿಯಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ (WEST FLOWING RIVER) ನದಿ/ಉಪ ನದಿಗಳಿರುತ್ತವೆ.
ಆ.	ಈ ಯೋಜನೆಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸಿರುವುದು ಯಾವ ಹಂತದಲ್ಲಿದೆ;	ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಹರಿವನ್ನು ಸಂರಕ್ಷಿಸಲು ಮತ್ತು ಸಂಗ್ರಹಿಸಲು "ಪಶ್ಚಿಮವಾಹಿನಿ ಯೋಜನೆಯನ್ನು" ಅನುಷ್ಠಾನಗೊಳಿಸಲು ಯೋಜಿಸಲಾಗಿದ್ದು, ಕಲಘಟಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.
ಇ.	ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಎಷ್ಟು ಅನುದಾನ ನಿಗದಿಗೊಳಿಸಿದೆ? (ಸಂಪೂರ್ಣ ಮಾಹಿತಿ ನೀಡುವುದು).	

ಸಂಖ್ಯೆ: MID 138 LAQ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

76(a)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2448
ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯಲ್ಲಿ ಜೆಸ್ಕಾಂ ಇಲಾಖೆಯ ಅಧೀಕ್ಷಕ ಅಭಿಯಂತರರ ಕಾರ್ಯ ಮತ್ತು ಪಾಲನೆ ವಿಭಾಗದ ಕಛೇರಿ ಜಿಲ್ಲೆಯ ಯಾವ ಭಾಗದಲ್ಲಿದೆ;	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕೊಪ್ಪಳ ಜಿಲ್ಲೆಯಲ್ಲಿನ ಜೆಸ್ಕಾಂ ಕಂಪನಿಯ ಅಧೀಕ್ಷಕ ಇಂಜಿನಿಯರ್ (ವಿ)., ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿಯು ಮುನಿರಾಬಾದ್ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿದೆ.
ಆ)	ಜಿಲ್ಲಾ ಕೇಂದ್ರ ಸ್ಥಾನದಲ್ಲಿರಬೇಕಾದ ಕಛೇರಿಯನ್ನು ಕೊಪ್ಪಳದಿಂದ ದೂರದ ಮುನಿರಾಬಾದ್ ಗ್ರಾಮದಲ್ಲಿ ಸ್ಥಾಪಿಸಲು ಕಾರಣವೇನು;	ಜಿಲ್ಲಾ ಕೇಂದ್ರದಲ್ಲಿ ಕಟ್ಟಡ ಲಭ್ಯವಿಲ್ಲದ ಕಾರಣದಿಂದ ಮುನಿರಾಬಾದ್‌ನಲ್ಲಿ ಕವಿಪ್ರನಿನಿ ರವರ ಕಟ್ಟಡ ಖಾಲಿ ಇದ್ದುದ್ದರಿಂದ ಹಾಗೂ ವಸತಿ ಗೃಹಗಳು ಇದ್ದ ಕಾರಣ ಮುನಿರಾಬಾದ್ ಗ್ರಾಮದಲ್ಲಿ ವೃತ್ತ ಕಛೇರಿಯನ್ನು ಸ್ಥಾಪಿಸಲಾಗಿದೆ.
ಇ)	ಆಡಳಿತಾತ್ಮಕವಾಗಿ ಹಾಗೂ ದೈನಂದಿನ ಕಛೇರಿ ಕಾರ್ಯಗಳಿಗೆ ಅನೂಕೂಲ ಕಲ್ಪಿಸಲು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಈ ಕಛೇರಿಯನ್ನು ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕಿದೆಯೇ;	ಈಗಾಗಲೇ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ನಿವೇಶನ ಹುಡುಕುವ ಪ್ರಕ್ರಿಯೆ ಜಾರಿಯಲ್ಲಿದೆ.
ಈ)	ಇಲ್ಲವಾದಲ್ಲಿ ಈ ಕುರಿತು ಸರ್ಕಾರದ ನಿಲುವೇನು?	

ಸಂಖ್ಯೆ: ಎನರ್ಜಿ 95 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

4

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2454
2	ಸದಸ್ಯರ ಹೆಸರು	:	ಶ್ರೀಮತಿ ಸೌಮ್ಯ ರೆಡ್ಡಿ, (ಜಯನಗರ)
3	ಉತ್ತರಿಸುವ ದಿನಾಂಕ	:	16-03-2021
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಿಬಿಎಂಪಿ ವ್ಯಾಪ್ತಿಯ 23ನೇ ಅಡ್ಡರಸ್ತೆ, ಓಲ್ಡ್ ನಂದಾ ಥಿಯೇಟರ್ ಬಳಿಯ 4ನೇ ಮುಖ್ಯ ರಸ್ತೆ, ಜಯನಗರ, ಇಲ್ಲಿ ಉದ್ಯಾನವನದ ಅಭಿವೃದ್ಧಿಯ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಿಬಿಎಂಪಿ ವ್ಯಾಪ್ತಿಯ 23ನೇ ಅಡ್ಡರಸ್ತೆ, ಓಲ್ಡ್ ನಂದಾ ಥಿಯೇಟರ್ ಬಳಿಯ 4ನೇ ಮುಖ್ಯ ರಸ್ತೆ, ಜಯನಗರ, ಇಲ್ಲಿ ಉದ್ಯಾನವನದ ಅಭಿವೃದ್ಧಿಯ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಉದ್ಯಾನವನವು ಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 168-ಪಟ್ಟಾಭಿರಾಮನಗರ ವ್ಯಾಪ್ತಿಗೆ ಬರುತ್ತಿದ್ದು, 4ನೇ ಮುಖ್ಯರಸ್ತೆಗೆ ಹೊಂದಿಕೊಂಡಿರುವ ವಿವಿಧ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ರೂ. 200.00 ಲಕ್ಷಗಳನ್ನು ಪಾಲಿಕೆಯ **"ವಿಶೇಷ ಅಭಿವೃದ್ಧಿ ಅನುದಾನ"** ಅಡಿಯಲ್ಲಿ ಮೀಸಲಿರಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ 23ನೇ ಅಡ್ಡರಸ್ತೆ, ಓಲ್ಡ್ ನಂದಾ ಥಿಯೇಟರ್ ಬಳಿಯ 4ನೇ ಮುಖ್ಯ ರಸ್ತೆಯ, ಜಯನಗರದ ಉದ್ಯಾನವನದ ಅಭಿವೃದ್ಧಿಗೂ ಸಹ ಅನುವು ಮಾಡಲಾಗಿದ್ದು, ಸದರಿ ಉದ್ಯಾನವನದ ಕಾಮಗಾರಿಯನ್ನು ನಿರ್ವಹಿಸಲು ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಲಾಗಿದ್ದು, ಸದರಿ ಉದ್ಯಾನವನದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
ಆ)	ಬಂದಿದ್ದಲ್ಲಿ, ಈ ಉದ್ಯಾನವನದ ಅಭಿವೃದ್ಧಿಗೆ ಒದಗಿಸುವ ಅನುದಾನವೆಷ್ಟು? (ವಿವರ ನೀಡುವುದು)	

ನಅಇ 129 ಎಂಎನ್‌ಯು 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2466
2. ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್
3. ಉತ್ತರಿಸಬೇಕಾದ ದಿನಾಂಕ : 16-03-2021.
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕಿನ ಮಣಸಗೇರಾ ಹಾಗೂ ಇತರೆ 14 ಗ್ರಾಮಗಳ ಕೆರೆಗಳಿಗೆ ಕೃಷ್ಣಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ) ನೀರು ತುಂಬಿಸುವ ಯೋಜನೆಯನ್ನು ಕಾರ್ಯಗತ ಗೊಳಿಸುವುದು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ;	ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಮೇಣಸಗೇರಾ ಹಾಗೂ ಇತರೆ 14 ಗ್ರಾಮಗಳ ಕೆರೆಗಳಿಗೆ ಕೃಷ್ಣಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ನೀರನ್ನು ತುಂಬಿಸುವ "ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿ ಸಲುವಾಗಿ ಕೃಷ್ಣಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿಯ" ರೂ.498.80 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಿಂದ 1.ಮೇಣಸಗೇರಾ ಕೆರೆ, 2.ಮಿಯ್ಯಾಪುರ ಕೆರೆ, 3.ಹೊಸಳ್ಳಿ ಕೆರೆ, 4.ಹನಮಸಾಗರ ಕೆರೆ, 5.ಮಾವಿನಇಟಗಿ ಕೆರೆ, 6.ಬಾದಮಿನಾಳ ಕೆರೆ, 7.ಜಾಗೀರ ಗುಡದೂರು ಕೆರೆ, 8.ಜುಮಲಾಪುರ ಕೆರೆ, 9.ವಿಠಲಾಪುರ ಕೆರೆ, 10.ನಾರಿನಾಳ ಕೆರೆ; 11.ರಾಯನಕೆರೆ, 12.ಮೆಣೆದಾಳ ಕೆರೆ, 13.ಹುಲಿಯಾಪುರ ಕೆರೆ, 14.ಪುರ ಕೆರೆ ಮತ್ತು 15.ನೀಡಶೇಸಿ ಕೆರೆಯನ್ನು ತುಂಬಿಸಲು ಯೋಜಿಸಲಾಗಿದೆ. ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ರೂ.492.29 ಕೋಟಿಗಳಿಗೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ರೈಜಿಂಗ್ ಮೇನ್ ಕಾಮಗಾರಿಯು ಪ್ರಗತಿಯಲ್ಲಿದೆ. ಸದರಿ ಕಾಮಗಾರಿಗೆ ಇದುವರೆಗೆ ರೂ. 55.12 ಕೋಟಿ ವೆಚ್ಚ ಮಾಡಲಾಗಿದೆ.
ಆ	ಹಾಗಿದ್ದಲ್ಲಿ, ಈ ಯೋಜನೆಗಾಗಿ ಸಮಗ್ರ ತಾಂತ್ರಿಕ ವರದಿಯನ್ನು (ಡಿ.ಪಿ.ಆರ್) ಸಿದ್ಧಪಡಿಸಲಾಗಿದೆಯೇ; ಇದಕ್ಕಾಗಿ ತಗಲಬಹುದಾದ ಅಂದಾಜು ವೆಚ್ಚ ಎಷ್ಟು;	
ಇ	ಸದರಿ ಯೋಜನೆಯನ್ನು 2021-22 ನೇ ಸಾಲಿನ ಆರ್ಥಿಕ ಪೂರಕ ಆಯ-ವ್ಯಯದಲ್ಲಿ ಘೋಷಿಸಲು ಸರ್ಕಾರವು ಕ್ರಮವಹಿಸುವುದೇ?	

ಸಂಖ್ಯೆ: ಸನೀಇ 159 ವಿಸವಿ 2021.

(ಜೆ.ಸಿ.ಮಾಧುಸ್ವಾಮಿ,)
ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2475

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಕ್ರೀಡಾ ವಸತಿ ಶಾಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಬಂದಿದೆ.
ಆ)	ಬಂದಿದ್ದಲ್ಲಿ, ಕ್ರೀಡಾ ವಸತಿ ಶಾಲೆ ಪ್ರಾರಂಭಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)	ದೇವನಹಳ್ಳಿ ತಾಲ್ಲೂಕಿನ ದೇವನಹಳ್ಳಿ ಸರ್ವೆ ನಂ: 193 ರಲ್ಲಿ 12.21 ಎಕರೆ ನಿವೇಶನ ಲಭ್ಯವಿದ್ದು, ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಸದರಿ ನಿವೇಶನದಲ್ಲಿ ಕ್ರೀಡಾ ವಸತಿ ನಿಲಯವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಆರಂಭಿಸಲು ಯೋಜಿಸಿದ್ದು, ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.
ಇ)	2021-22 ನೇ ಸಾಲಿನ ಆಯವ್ಯಯದಲ್ಲಿ ಕ್ರೀಡಾ ವಸತಿ ಶಾಲೆ ನಿರ್ಮಾಣಕ್ಕೆ ಹಣ ಮೀಸಲಿರಿಸಲು ಉದ್ದೇಶಿಸಲಾಗಿದೆಯೇ; (ಪೂರ್ಣ ಮಾಹಿತಿ ನೀಡುವುದು)	ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದನ್ವಯ, 2021-22ನೇ ಸಾಲಿನ ಆಯವ್ಯಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕ್ರೀಡಾ ವಸತಿ ನಿಲಯ ನಿರ್ಮಾಣಕ್ಕೆ ಯಾವುದೇ ಹಣ ಮೀಸಲಿರಿಸಿರುವುದಿಲ್ಲ.
ಈ)	ಹಾಗಿದ್ದಲ್ಲಿ, 2021-22ನೇ ಸಾಲಿನ ಆಯವ್ಯಯದಲ್ಲಿ ಹಣ ಮೀಸಲಿರಿಸಿ ಕ್ರೀಡಾ ವಸತಿ ಶಾಲೆ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು? (ಪೂರ್ಣ ಮಾಹಿತಿ ನೀಡುವುದು)	ದೇವನಹಳ್ಳಿ ತಾಲ್ಲೂಕಿನ ದೇವನಹಳ್ಳಿಯಲ್ಲಿ ಲಭ್ಯವಿರುವ 12.21 ಎಕರೆ ನಿವೇಶನದಲ್ಲಿ ಕ್ರೀಡಾ ವಸತಿ ನಿಲಯವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, ಈ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

ವೈಎಸ್‌ಡಿ-ಇಬಿಬಿ/57/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2476
2)	ಮಾನ್ಯ ಸದಸ್ಯರ ಹೆಸರು	:	ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್ (ದೇವನಹಳ್ಳಿ)
3)	ಉತ್ತರಿಸುವ ದಿನಾಂಕ	:	16/03/2021
4)	ಉತ್ತರಿಸುವ ಸಚಿವರು	:	ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆ ಸರಹದ್ದಿನ ಗ್ರಾಮಗಳ ಜನರು ವ್ಯಾಜ್ಯ ಇತ್ಯಾದಿ ವಿಚಾರವಾಗಿ ಪೊಲೀಸ್ ಠಾಣೆಗೆ ಬಂದು ಹೋಗಲು ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಇಲ್ಲ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯು 2008ನೇ ಸಾಲಿನಲ್ಲಿ ಸೃಜನೆಯಾಗಿದ್ದು, ಸದರಿ ಠಾಣಾ ವ್ಯಾಪ್ತಿಯು ಟರ್ಮಿನಲ್ ಬಿಲ್ಡಿಂಗ್ ಹೊಂದಿಕೊಂಡಂತೆಯೇ 10 ಹಳ್ಳಿಗಳನ್ನು ಒಳಗೊಂಡಿರುತ್ತದೆ. 1) ಭುವನಹಳ್ಳಿ 2) ಯರಪ್ಪನಹಳ್ಳಿ 3) ಅಣ್ಣೇಶ್ವರ 4) ದೊಡ್ಡಸಣ್ಣೆ 5) ಯರ್ತಿಗಾನಹಳ್ಳಿ 6) ಅಕ್ಲೇನಮಲ್ಲೇನಹಳ್ಳಿ 7) ಕನ್ನಮಂಗಲ 8) ಪೂಜನಹಳ್ಳಿ 9) ಸಾದಹಳ್ಳಿ 10) ಕನ್ನಮಂಗಲ ಪಾಳ್ಯ ಗ್ರಾಮಗಳು ಒಳಪಡುತ್ತವೆ. ಸದರಿ ಠಾಣೆಯಿಂದ ಸುಮಾರು 05 ರಿಂದ 06 ಕಿ.ಮೀ. ಇದ್ದು ಸಾರ್ವಜನಿಕರಿಗೆ ಯಾವುದೇ ತೊಂದರೆ ಕಂಡು ಬಂದಿರುವುದಿಲ್ಲ.
(ಆ)	ಹಾಗಿದ್ದಲ್ಲಿ, ಈ ಪೊಲೀಸ್ ಠಾಣೆಗೆ ಜನರು ಬರಬೇಕಾದರೆ ಟೋಲ್ ಪ್ಲಾಜಾ ಮುಖಾಂತರ ಹಣ ಪಾವತಿಸಿ ಬರಬೇಕಾದ ಪರಿಸ್ಥಿತಿ ಇರುವುದು ಹಾಗೂ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; (ಮಾಹಿತಿ ನೀಡುವುದು)	ಇಲ್ಲ, ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಗೆ ಮೇಲ್ಕಂಡ ಗ್ರಾಮಗಳಿಂದ ಬರುವಂತಹ ಸಾರ್ವಜನಿಕರು ಯಾವುದೇ ಟೋಲ್‌ಗೆ ಹಣ ಪಾವತಿಸುವ ಅವಶ್ಯಕತೆ ಇರುವುದಿಲ್ಲ.
(ಇ)	ಹಾಗಿದ್ದಲ್ಲಿ, ಅಲ್ಲಿನ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಗೆ ಒಳಪಡುವ ಗ್ರಾಮಗಳನ್ನು ದೇವನಹಳ್ಳಿ ಟೌನ್ ಠಾಣೆ ವ್ಯಾಪ್ತಿಗೆ ಸೇರಿಸಲು ಸರ್ಕಾರವು ಕ್ರಮಕೈಗೊಳ್ಳುವುದೇ; (ಮಾಹಿತಿ ನೀಡುವುದು)	ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಗೆ ಮೇಲ್ಕಂಡ ಗ್ರಾಮಗಳು ಸುಮಾರು 05 ರಿಂದ 06 ಕಿ.ಮೀ. ದೂರದಲ್ಲಿರುತ್ತವೆ. ಆದರೆ, ದೇವನಹಳ್ಳಿ ಪೊಲೀಸ್ ಠಾಣೆಯಿಂದ ಸುಮಾರು 10 ರಿಂದ 11 ಕಿ.ಮೀ ದೂರದಲ್ಲಿರುತ್ತವೆ. ಒಂದು ವೇಳೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯನ್ನು ದೇವನಹಳ್ಳಿ ಪೊಲೀಸ್ ಠಾಣೆಗೆ ಸೇರಿಸಿದ್ದಲ್ಲಿ ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ತೊಂದರೆಯಾಗುತ್ತದೆ.
(ಈ)	ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೀಮಿತವಾಗಿ ಪೊಲೀಸ್ ಠಾಣೆ ಉಳಿಸಿ ಇದರ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಜನರಿಗೆ ಅನುಕೂಲವಾಗುವಂತೆ ದೇವನಹಳ್ಳಿ ಟೌನ್ ಠಾಣೆಗೆ ಸೇರಿಸುವ ಬಗ್ಗೆ ಸರ್ಕಾರವು ಕೂಡಲೇ ಕ್ರಮಕೈಗೊಳ್ಳುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು? (ಪೂರ್ಣ ವಿವರ ನೀಡುವುದು)	

ಸಂಖ್ಯೆ: ಹೆಚ್‌ಡಿ 41 ಪಿಓಪಿ 2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2477
2.	ವಿಧಾನ ಸಭಾ ಸದಸ್ಯರ ಹೆಸರು	:	ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ)
3.	ಉತ್ತರಿಸುವ ದಿನಾಂಕ	:	16-03-2021
4.	ಉತ್ತರಿಸುವ ಸಚಿವರು	:	ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಇತ್ತೀಚೆಗೆ ಬೆಳಗಾವಿಯಲ್ಲಿ ಭಾರತೀಯ ಸೇನೆಗೆ ನಡೆದ ಹುದ್ದೆಗಳ ಆಯ್ಕೆಯಲ್ಲಿ ಮಹಾರಾಷ್ಟ್ರ ರಾಜ್ಯದವರು ಆಳಂದ ತಾಲ್ಲೂಕಿನ ತಡೋಳ ಗ್ರಾಮದ ನಿವಾಸಿಗಳೆಂದು ಸುಳ್ಳು ಆಧಾರ್ ಕಾರ್ಡ್ ಮತ್ತು ವಾಸ ಪ್ರಮಾಣ ಪತ್ರವನ್ನು ಮಾಡಿಸಿ, ಕಾನೂನುಬಾಹಿರವಾಗಿ ಆಯ್ಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿಯಲ್ಲಿ ನಡೆದ ಭಾರತೀಯ ಸೇನೆಗೆ ಹುದ್ದೆಗಳ ಆಯ್ಕೆ ಪ್ರಕ್ರಿಯೆಗೆ ಸೇನಾ ನೇಮಕಾತಿ ಕಛೇರಿ, ಬೆಳಗಾವಿ ಇವರು ಆಯ್ಕೆ ಪ್ರಾಧಿಕಾರವಾಗಿದ್ದು, ಸದರಿಯವರು ಯಾವುದೇ ಹುದ್ದೆಗಳ ಆಯ್ಕೆಯನ್ನು ಮಾಡಿಕೊಂಡ ನಂತರ ಅದರ ಮಾಹಿತಿಯನ್ನು ಗೌಪ್ಯದಲ್ಲಿಡುವುದಾಗಿ ತಿಳಿಸಿರುವುದರಿಂದ ಹುದ್ದೆಗಳ ಆಯ್ಕೆಯಲ್ಲಿ ಮಹಾರಾಷ್ಟ್ರ ರಾಜ್ಯದವರು ಆಳಂದತಾಲ್ಲೂಕಿನ ತಡೋಳ ಗ್ರಾಮದ ನಿವಾಸಿಗಳೆಂದು ಸುಳ್ಳು ಆಧಾರ್ ಕಾರ್ಡ್ ಮತ್ತು ವಾಸ ಪ್ರಮಾಣ ಪತ್ರವನ್ನು ಮಾಡಿಸಿ, ಕಾನೂನುಬಾಹಿರವಾಗಿ ಆಯ್ಕೆಯಾಗಿರುವುದರ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ.
ಆ)	ಇದರಿಂದ ಆಳಂದ ಕ್ಷೇತ್ರ ಬಡ ನಿರುದ್ಯೋಗಿಗಳಿಗೆ ನೇಮಕಾತಿಯಲ್ಲಿ ಅನ್ಯಾಯವಾಗಿದ್ದು, ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು;	ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಿಂದ ನೇಮಕಾತಿ ಪ್ರಕ್ರಿಯೆಗೆ ಆಡಳಿತಾತ್ಮಕ ಸಹಕಾರ ಮಾತ್ರ ನೀಡುವುದಾಗಿದ್ದು, ಸೇನಾ ನೇಮಕಾತಿಯು ಕೇಂದ್ರ ಸರ್ಕಾರದ ನಿಯಮಗಳಿಗೆ ಒಳಪಟ್ಟಿರುತ್ತದೆ.
ಇ)	ಈ ರೀತಿ ಸುಳ್ಳು ದಾಖಲೆಗಳು ಸೃಷ್ಟಿಸಿ ನೇಮಕಾತಿಯಾಗಿರುವವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ?	

ಸಂಖ್ಯೆ: ಒಇ 17 ಕಸ್ಸೆಸೇ 2021

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2481

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ದೇಸಿ ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ದೇಸಿ ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸಲು ಗ್ರಾಮೀಣ ಕ್ರೀಡೋತ್ಸವ ಕಾರ್ಯಕ್ರಮವನ್ನು ಹೋಬಳಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಗ್ರಾಮೀಣ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಗ್ರಾಮೀಣ ಗರಡಿ ಮನೆ ನಿರ್ಮಾಣ/ದುರಸ್ತಿ ಮಾಡಲಾಗುತ್ತಿದೆ. ಸಾಧಕ ಕ್ರೀಡಾಪಟುಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.
ಆ)	ರಾಜ್ಯದಲ್ಲಿರುವ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸಿ ಪ್ರೋತ್ಸಾಹಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ ;	ಹೌದು. ಇಲಾಖೆಯಲ್ಲಿ ನೊಂದಾವಣೆಗೊಂಡಿರುವ ಕ್ರೀಡಾ ಸಂಘಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸಲು ಅವಕಾಶವಿರುತ್ತದೆ.
ಇ)	ಹಾಗಿದ್ದಲ್ಲಿ, ಎಷ್ಟು ಕ್ರೀಡಾ ಸಂಸ್ಥೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುವುದು ?	ಯುವ ಕ್ರೀಡಾ ಮಿತ್ರ ಯೋಜನೆಯಡಿ ಹೋಬಳಿ ಮಟ್ಟದ ಒಂದು ಕ್ರೀಡಾ ಸಂಘಕ್ಕೆ ಕ್ರೀಡಾ ಸಾಮಗ್ರಿ ನೀಡುವ ಅವಕಾಶ ಕಲ್ಪಿಸಲಾಗಿದೆ.

ವೈಎಸ್‌ಡಿ-ಇಬಿಬಿ/58/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2482
ಮಾನ್ಯ ಸದಸ್ಯರ ಹೆಸರು	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಮಾನ್ಯ ಅಬಕಾರಿ ಸಚಿವರು

ಕ್ರ.	ಪ್ರಶ್ನೆ	ಉತ್ತರ
ಅ)	ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಬಕಾರಿ ಇಲಾಖೆಯ ಕಛೇರಿಗೆ ಸ್ವಂತ ಕಟ್ಟಡವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಬಕಾರಿ ಇಲಾಖೆಯ ಅಬಕಾರಿ ನಿರೀಕ್ಷಕರ ಕಚೇರಿಯು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ ಅಬಕಾರಿ ಇಲಾಖೆಯ ಕಛೇರಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಕಡೂರು ತಾಲ್ಲೂಕು ಅಬಕಾರಿ ನಿರೀಕ್ಷಕರ ಕಚೇರಿಗೆ ಒದಗಿಸಲು ಸರ್ಕಾರಿ ಕಟ್ಟಡಗಳು ಲಭ್ಯವಿರುವುದಿಲ್ಲವೆಂದು ಲೋಕೋಪಯೋಗಿ ಇಲಾಖೆಯು ತಿಳಿಸಿದ ಮೇರೆಗೆ, ಖಾಸಗಿ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿದೆ. ಅಬಕಾರಿ ಇಲಾಖೆಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಜಾಗ ಹಂಚಿಕೆ ಮಾಡಿಕೊಡುವಂತೆ ತಹಶೀಲ್ದಾರ್, ಕಡೂರು ತಾಲ್ಲೂಕು ಇವರಿಗೆ ದಿನಾಂಕ 19.11.2019 ರಂದು ಪತ್ರ ಬರೆಯಲಾಗಿರುತ್ತದೆ.
ಇ)	ಕಡೂರು ಪಟ್ಟಣದ ಯಾವ ಭಾಗದಲ್ಲಿ ಕಟ್ಟಡವನ್ನು ನಿರ್ಮಿಸಲಾಗುವುದು; ಜಾಗ ಗುರುತಿಸಿದಲ್ಲಿ, ಕಟ್ಟಡವನ್ನು ಪ್ರಸಕ್ತ ಸಾಲಿನಲ್ಲಿ ನಿರ್ಮಾಣ ಮಾಡಲಾಗುವುದೇ;	ಕಂದಾಯ ಇಲಾಖೆಯಿಂದ ಕಟ್ಟಡ ನಿರ್ಮಾಣಕ್ಕಾಗಿ ಸ್ಥಳ ಹಂಚಿಕೆಯನ್ನು ನಿರೀಕ್ಷಿಸಲಾಗಿರುತ್ತದೆ.
ಈ)	ಈ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಅನುದಾನವನ್ನು ನಿಗದಿಪಡಿಸಿದೆಯೇ: ಹಾಗಿದ್ದಲ್ಲಿ ಎಷ್ಟು ಅನುದಾನವನ್ನು ನಿಗದಿಪಡಿಸಿದೆ: (ಮಾಹಿತಿ ನೀಡುವುದು)	
ಉ)	ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು? (ವಿವರ ನೀಡುವುದು)	ಅನ್ವಯಿಸುವುದಿಲ್ಲ.

(ಕೆ.ಗೋಪಾಲಯ್ಯ)

ಅಬಕಾರಿ ಸಚಿವರು

ಆಇ 32 ಇಎಲ್‌ಕ್ಯೂ 2021

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2492
2	ಸದಸ್ಯರ ಹೆಸರು	:	ಶ್ರೀ ಶರತ್ ಕುಮಾರ್ ಬಚ್ಚೇಗೌಡ
3	ಉತ್ತರಿಸುವ ದಿನಾಂಕ	:	16.03.2021
4	ಉತ್ತರಿಸುವ ಸಚಿವರು	:	ಮಾನ್ಯ ಯೋಜನಾ ಸಚಿವರು, ಯೋಜನೆ,ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯ ವಿಧಾನಸಭಾ ಸದಸ್ಯರ ವಿವೇಚನಾ ಕೋಟಾದಡಿ ಪ್ರಸ್ತುತ ಇರುವ ರೂ.2.00 ಕೋಟಿಗಳ ಅನುದಾನವನ್ನು ರೂ.5.00 ಕೋಟಿಗೆ ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ.
(ಆ)	ಹಾಗಿದ್ದಲ್ಲಿ, ಅನುದಾನ ಹೆಚ್ಚಳ ಕುರಿತು ತೆಗೆದುಕೊಂಡಿರುವ ತೀರ್ಮಾನಗಳೇನು;	ಅನ್ವಯಿಸುವುದಿಲ್ಲ.
(ಇ)	ಹೆಚ್ಚಳ ಮಾಡುವ ಉದ್ದೇಶ ಸರ್ಕಾರದ ಮುಂದೆ ಇದ್ದಲ್ಲಿ ಅದನ್ನು ಯಾವ ಆರ್ಥಿಕ ವರ್ಷದಿಂದ ಅನುಷ್ಠಾನಗೊಳಿಸಲಾಗುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ಪಿಡಿಎಸ್ 27 ಕೆಎಲ್ಎಸ್ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

<u>**ಕರ್ನಾಟಕ ವಿಧಾನಸಭೆ**</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2498
2. ಸದಸ್ಯರ ಹೆಸರು : ಡಾ॥ ಪರಮೇಶ್ವರ್ ಜಿ. (ಕೊರಟಗೆರೆ)
3. ಉತ್ತರಿಸಬೇಕಾದ ದಿನಾಂಕ : 16.03,2021

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಕುಡಿಯುವ ನೀರಿನ ಮಹತ್ವಾಕಾಂಕ್ಷಿ ಯೋಜನೆಯಾದ ಎತ್ತಿನಹೊಳೆ ಯೋಜನೆಯು ಪ್ರಾರಂಭವಾದದ್ದು ಯಾವಾಗ; ಸದರಿ ಯೋಜನೆಯು ಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿ ಎಷ್ಟು;	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಮಾರ್ಚ್ 2014 ರಲ್ಲಿ ಕೈಗೆತ್ತಿಕೊಂಡಿದ್ದು, ಅನುದಾನದ ಲಭ್ಯತೆಯ ಮೇರೆಗೆ 2023 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
ಆ)	ಈ ಯೋಜನೆಯಡಿಯಲ್ಲಿ ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಬೈರಗೊಂಡ್ಲು ಹಳ್ಳಿಯ ಹತ್ತಿರ ನೀರನ್ನು ಸಂಗ್ರಹ ಮಾಡಲು ಭೂ ಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿದೆಯೇ;	ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಾಪುರ ತಾಲ್ಲೂಕಿನ ರೈತರಿಗೆ ನೀಡುವ ಪರಿಹಾರ ದರದಂತೆ ಅವರಿಗೂ ಸಹಾ ಏಕರೂಪ ದರ ನೀಡಲು ಒತ್ತಾಯಿಸಿದ್ದರಿಂದ ಕಾಮಗಾರಿ ಪ್ರಾರಂಭಿಸುವಲ್ಲಿ ಅಡತಡೆ ಉಂಟಾಗಿದ್ದು, ದರ ನಿರ್ಧರಣೆಯ ಕುರಿತು ಪರಿಶೀಲನಾ ಹಂತದಲ್ಲಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಭೂಸ್ವಾಧೀನಕೊಳ್ಳಪಡುವ ಜಮೀನಿಗೆ 'ಏಕರೂಪ ಭೂಪರಿಹಾರ' ನಿಗದಿ ಪಡಿಸಬೇಕಾಗಿರುತ್ತದೆ. ಸದರಿ ಯೋಜನೆಯ ತೀವ್ರ ಅನುಷ್ಠಾನಕ್ಕಾಗಿ "ಉನ್ನತ ಅಧಿಕಾರಿ ಸಮಿತಿ" (High Power Committee) ರಚಿಸಲಾಗಿದ್ದು, ಸದರಿ ಸಮಿತಿಯಲ್ಲಿ 'ಏಕರೂಪ ಭೂಪರಿಹಾರ' (Uniform Rate of Land Compensation) ಕುರಿತಾಗಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದಾಗಿರುತ್ತದೆ. ಸದರಿ ಸಮಿತಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಬೈರಗೊಂಡ್ಲು ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗುವ ಜಮೀನುಗಳಿಗೆ ಏಕರೂಪ ಪರಿಹಾರ ಧರ ಕುರಿತಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿರುತ್ತದೆ.
ಇ)	ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಇದುವರೆಗೂ ಪರಿಹಾರವನ್ನು ನೀಡಲು ವಿಳಂಬ ಮಾಡಿರುವುದಕ್ಕೆ ಕಾರಣಗಳೇನು;	
ಈ)	ಎಷ್ಟು ದಿನದೊಳಗಾಗಿ ಸಂಬಂಧಿಸಿದ ರೈತರುಗಳಿಗೆ ಪರಿಹಾರಗಳನ್ನು ನೀಡಲು ಸರ್ಕಾರ ನಿರ್ಧರಿಸಿದೆ ಮತ್ತು ಪರಿಹಾರದ ಮೊತ್ತ ಎಷ್ಟು (ಸಂಪೂರ್ಣ ವಿವರ ನೀಡುವುದು);	

ಸಂಖ್ಯೆ: ಜಸಂಇ 28 ಡಬ್ಲ್ಯೂಎಲ್ಎ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2506
2. ಸದಸ್ಯರ ಹೆಸರು : ಶ್ರೀ ಲಿಂಗೇಶ್ ಕೆ.ಎಸ್.
3. ಉತ್ತರಿಸಬೇಕಾದ ದಿನಾಂಕ : 16-03-2021.
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಬೇಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆರೆ-ಕಟ್ಟೆ ಮತ್ತು ನಾಲೆಗಳ ಅಭಿವೃದ್ಧಿ ಕಾಮಗಾರಿಗೆ ಹಾಗೂ ಜಲಾಮೃತ ಯೋಜನೆಯಡಿ ಯಲ್ಲಿ ಕೆರೆ-ಕಟ್ಟೆಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗೆ ಅನುದಾನ ಮಂಜೂರು ಮಾಡುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ;	ಬೇಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆರೆ-ಕಟ್ಟೆ ಮತ್ತು ನಾಲೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಕೋರಿ ಪ್ರಸ್ತಾವನೆ ಬಂದಿರುತ್ತದೆ. ಜಲಾಮೃತ ಯೋಜನೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.
ಆ	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಗಳು ಯಾವ ಹಂತದಲ್ಲಿದೆ; ಯಾವಾಗ ಅನುದಾನ ಮಂಜೂರು ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ಪ್ರಸ್ತುತ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅನುದಾನದ ಲಭ್ಯತೆಯ ಅನುಸಾರ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಸಂಖ್ಯೆ: ಸನೀಇ 160 ವಿಸವಿ 2021.

(ಜೆ.ಸಿ.ಮಾಧುಸ್ವಾಮಿ,)
ಸಣ್ಣ ನೀರಾವರಿ ಸಚಿವರು.

43

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2509
2.	ಪ್ರಶ್ನೆ ಕೇಳಿದ ಸದಸ್ಯರು	ಶ್ರೀ. ರಾಜೇಗೌಡ ಟಿ.ಡಿ (ಶೃಂಗೇರಿ)
3.	ಉತ್ತರಿಸುವ ದಿನಾಂಕ	16.03.2021
4.	ಉತ್ತರಿಸುವ ಸಚಿವರು	ಮುಖ್ಯಮಂತ್ರಿಯವರು

	ಪ್ರಶ್ನೆ	ಉತ್ತರ
(ಅ)	ಚಿಕ್ಕಮಗಳೂರು ಜಿಲ್ಲೆ, ಮೂಡಗೆರೆ ತಾಲ್ಲೂಕು, ಕಿರುಗುಂದ ಗ್ರಾಮದಲ್ಲಿ ಸರ್ಕಾರದ ಅನುದಾನ ಬಳಸಿ ನಡೆಸುವ ಕಾಮಗಾರಿಯ ಶಂಕುಸ್ಥಾಪನೆ ವೇಳೆ ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ ಇವರಿಂದ ವರದಿಯನ್ನು ಪಡೆಯಲಾಗಿದ್ದು, ಸದರಿ ವರದಿಯನುಸಾರ ಮೂಡಿಗೆರೆ ತಾಲ್ಲೂಕಿನ ಕಿರುಗುಂದ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಹಾಗೂ ಇತರೆ ಯಾವುದೇ ಇಲಾಖಾ ವತಿಯಿಂದ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದಿಲ್ಲ ಹಾಗೂ ಯಾವುದೇ ಇಲಾಖಾ ವತಿಯಿಂದ ಪತ್ರಿಕೆಯನ್ನು ಮುದ್ರಿಸಿರುವುದಿಲ್ಲ ಮತ್ತು ಕಾರ್ಯಕ್ರಮವನ್ನು ಆಯೋಜಿಸಲು ಅನುಮತಿ ಕೋರಿ ಜಿಲ್ಲಾಡಳಿತಕ್ಕೆ ಯಾವುದೇ ಇಲಾಖೆಯಿಂದ ಪತ್ರ ಸ್ವೀಕೃತಗೊಂಡಿರುವುದಿಲ್ಲ.
(ಆ)	ಒಂದು ರಾಷ್ಟ್ರೀಯ ಪಕ್ಷಕ್ಕೆ ಸೇರಿದ ಹೋಬಳಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಸಿ ಶಿಷ್ಟಾಚಾರ ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಜಿಲ್ಲಾಧಿಕಾರಿಯವರ ವರದಿಯನುಸಾರ ಜಿಲ್ಲಾಡಳಿತ, ತಾಲ್ಲೂಕು ಆಡಳಿತ ಮತ್ತು ಗ್ರಾಮ ಪಂಚಾಯಿತಿ ವತಿಯಿಂದ ಯಾವುದೇ ಶಿಷ್ಟಾಚಾರ ಉಲ್ಲಂಘನೆ ಆಗಿರುವುದಿಲ್ಲ.
(ಇ)	ಚಿಕ್ಕಮಗಳೂರಿನಲ್ಲಿ ಪದೇ ಪದೇ ಶಿಷ್ಟಾಚಾರ ಉಲ್ಲಂಘಿಸುವ ಪ್ರಕರಣ ಜರುಗುತ್ತಿದ್ದು, ಕರ್ತವ್ಯ ಲೋಪವೆಸಗಿರುವ ಅಧಿಕಾರಿಗಳ ವಿರುದ್ಧ ಇಲ್ಲಿಯವರೆಗೂ ಯಾವ ಕಠಿಣ ಶಿಕ್ಷೆ ವಿಧಿಸಲಾಗಿದೆ; ಎಷ್ಟು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)	ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಸ್ತುತ ಯಾವುದೇ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಸಂಭವಿಸಿರುವುದಿಲ್ಲವೆಂದು ಜಿಲ್ಲಾಧಿಕಾರಿಯವರು ವರದಿ ಸಲ್ಲಿಸಿರುತ್ತಾರೆ. ಆದ್ದರಿಂದ, ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಶಿಷ್ಟಾಚಾರ ಪಾಲನೆ ವಿಚಾರದಲ್ಲಿ ಸರ್ಕಾರದ ಸುತ್ತೋಲೆ, ಆದೇಶ ಹಾಗೂ ಮಾರ್ಗಸೂಚಿಗಳ ಬಗ್ಗೆ ಎಲ್ಲಾ ಇಲಾಖಾಧಿಕಾರಿಗಳ ಸಭೆ ನಡೆಸುವ ಮೂಲಕ ಸ್ಪಷ್ಟ ನಿರ್ದೇಶನವನ್ನು ನೀಡಲಾಗಿದ್ದು, ಹೆಚ್ಚಿನ ನಿಗಾವಹಿಸಿ ಕ್ರಮ ವಹಿಸಲಾಗುತ್ತಿದೆ.

(ಸಂಖ್ಯೆ: ಸಿಆಸುಇ 22 ಹೆಚ್‌ಪಿಎ 2021)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2511

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ. ಡಿ. (ಶೃಂಗೇರಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ, ಕೊಪ್ಪ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕ್ರೀಡಾಂಗಣಗಳ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ನರಸಿಂಹರಾಜಪುರ, ಮೂಡಿಗೆರೆ ಮತ್ತು ಕಡೂರುಗಳಲ್ಲಿ ಕ್ರೀಡಾಂಗಣಗಳಿರುತ್ತವೆ. ಆದರೆ, ಶೃಂಗೇರಿ ಮತ್ತು ಕೊಪ್ಪಗಳಲ್ಲಿ ಮಾತ್ರ ಕ್ರೀಡಾಂಗಣ ಇರುವುದಿಲ್ಲ; ಕ್ರೀಡಾಂಗಣಗಳ ನಿರ್ಮಾಣಕ್ಕೆ ಇಲ್ಲಿ ಸೂಕ್ತ ನಿವೇಶನ ಲಭ್ಯವಾಗಿರುವುದಿಲ್ಲ; ನಿವೇಶನ ಲಭ್ಯವಾದ ನಂತರ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು.
ಆ)	ಕ್ರೀಡಾಂಗಣಗಳ ನಿರ್ಮಾಣಕ್ಕೆ ಜಾಗ ಲಭ್ಯವಿರುವ ಕ್ರೀಡಾಂಗಣ ನಿರ್ಮಿಸಲು ಸರ್ಕಾರದ ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು;	
ಇ)	ಯಾವ ಕಾಲ ಮಿತಿಯೊಳಗಾಗಿ ಕ್ರೀಡಾಂಗಣಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗುವುದು? (ವಿವರ ನೀಡುವುದು)	

ವೈಎಸ್‌ಡಿ-ಇಬಿಬಿ/60/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು.

122

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2512
ಸದಸ್ಯರ ಹೆಸರು	:	ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸುವ ದಿನಾಂಕ	:	16.03.2021
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆ, ಎನ್.ಆರ್ ಪುರ ತಾಲ್ಲೂಕು, ಬಕ್ರಿಹಳ್ಳ-ಕಡಹಿನಬೈಲು ಏತ ನೀರಾವರಿ ಯೋಜನೆಯು ಕಳೆದ ಒಂದು ವರ್ಷದಿಂದ ಕುಂಟಿತವಾಗಿ ಸಾಗಿದ್ದು, ಈ ಯೋಜನೆ ವಿಳಂಬವಾಗಲು ಕಾರಣವೇನು;	ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲ್ಲೂಕಿನ ಸೂಸಲವಾನಿ ಗ್ರಾಮದ ಹತ್ತಿರ ಭದ್ರಾ ಜಲಾಶಯದ ಹಿನ್ನೀರಿನ ಸಮೀಪ ನೀರನ್ನೆತ್ತಿ 526 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದು ಮತ್ತು ಕೆರೆಗಳಿಗೆ ನೀರು ತುಂಬಿಸುವುದು ಬಕ್ರಿಹಳ್ಳ-ಕಡುಹಿನಬೈಲು ಏತ ನೀರಾವರಿ ಯೋಜನೆಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯ ರೂ.690.00 ಲಕ್ಷಗಳ ವಿವರವಾದ ಯೋಜನಾ ವರದಿಗೆ ಸರ್ಕಾರದ ಪತ್ರ ದಿನಾಂಕ:10.05.2005 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯು ಪೂರ್ಣಗೊಂಡಿದ್ದು ದಿನಾಂಕ:10.11.2016 ರಂದು ಲೋಕಾರ್ಪಣೆಗೊಂಡಿರುತ್ತದೆ. ಮುಂದುವರೆದು, ಬಕ್ರಿಹಳ್ಳ-ಕಡುಹಿನಬೈಲು ಏತ ನೀರಾವರಿ ಯೋಜನೆಯಡಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿ ಮತ್ತು ಪೈಪ್‌ಲೈನ್ ಅಳವಡಿಕೆಯ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದ ಪರಿಶೀಲನಾ ಹಂತದಲ್ಲಿರುತ್ತದೆ.
ಆ)	ಸದರಿ ಯೋಜನೆಯ ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ನೀಡುವುದು)	
ಇ)	ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು?	

ಸಂಖ್ಯೆ:ಜಸಂಇ 65 ಎಂಎಲ್ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2514
ಸದಸ್ಯರ ಹೆಸರು	:	ಶ್ರೀ ನಾಗನಗೌಡ ಕಂದ್‌ಕೂರ್ (ಗುರ್‌ಮಿತ್ ಕಲ್)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಪ್ರಶ್ನೆ		ಉತ್ತರ
ಅ)	ರೈತರ ಪಂಪ್‌ಸೆಟ್‌ಗಳಿಗೆ ನೀಡುತ್ತಿರುವ ಪ್ರಸ್ತುತ ನೀಡುತ್ತಿರುವ 7 ಗಂಟೆ 3 ಫೇಸ್ ವಿದ್ಯುತ್ ಬದಲಾಗಿ ಇನ್ನು ಮುಂದೆ 10 ಗಂಟೆ 3 ಫೇಸ್ ವಿದ್ಯುತ್ ನೀಡಿ ರೈತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು; ಹಾಗಿಲ್ಲದಿದ್ದಲ್ಲಿ, ಈ ರೀತಿಯ ಆಶ್ವಾಸನೆ ನೀಡುವುದು ಸರಿಯೇ?	ಪ್ರಸ್ತುತ ಜಾರಿಯಲ್ಲಿರುವ ಆದೇಶದಂತೆ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ದಿನವಹಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ. ತಾಂತ್ರಿಕ ಸಾಧ್ಯತೆ ಇರುವ ಕೃಷಿ ಪಂಪ್‌ಸೆಟ್‌ಗಳ ಫೀಡರ್‌ಗಳಿಗೆ ಹಗಲಿನ ವೇಳೆಯಲ್ಲಿಯೇ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ. ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ 10 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಪ್ರಸ್ತುತ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಎನರ್ಜಿ 94 ಪಿಪಿಎಂ 2021

ಬಿಎಸ್

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:		1686
ಉತ್ತರಿಸಬೇಕಾದ ದಿನಾಂಕ	:	16/03/2021.
ಸದಸ್ಯರ ಹೆಸರು	:	ಶ್ರೀ ವೇದವ್ಯಾಸ ಕಾಮತ್ ಡಿ. (ಮಂಗಳೂರು ನಗರ ದಕ್ಷಿಣ)
ಉತ್ತರಿಸುವ ಸಚಿವರು	:	ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರಸ	ಪ್ರಶ್ನೆ	ಉತ್ತರ
ಅ)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಒಳಪಡುವ ಕ್ರೀಡಾಂಗಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬಿಡುಗಡೆಯಾಗಿರುವ ಅನುದಾನವೆಷ್ಟು;	2019-20 ಮತ್ತು 2020-21 ನೇ ಸಾಲಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಒಟ್ಟು ರೂ. 58.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ; ವಿವರ ಕೆಳಕಂಡಂತಿದೆ:- (ರೂ. ಕೋಟಿಗಳಲ್ಲಿ) (see table below)
ಇ)	ಅನುದಾನ ಹಂಚಿಕೆ ಮಾಡುವಲ್ಲಿ ಅನುಸರಿಸಿರುವ ಕ್ರಮಗಳೇನು; (ದಕ್ಷಿಣ ಕನ್ನಡ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಾವಾರು ಮಾಹಿತಿ ನೀಡುವುದು)	ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಕನಿಷ್ಟ ಮೂಲ ಸೌಕರ್ಯಗಳಿಲ್ಲದ ಕ್ರೀಡಾಂಗಣಗಳಲ್ಲಿ ತುರ್ತು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಆದ್ಯತೆ ನೀಡಿ, ಅನುದಾನ ಹಂಚಿಕೆ ಮಾಡಲಾಗಿದೆ. ಮಂಗಳೂರು ನಗರದ ಮಂಗಳಾ ಕ್ರೀಡಾ ಸಮುಚ್ಚಯದಲ್ಲಿರುವ ಯು.ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದ ಮೇಲ್ಛಾವಣಿ ಸೋರುತ್ತಿದ್ದ ಹಿನ್ನೆಲೆಯಲ್ಲಿ ದುರಸ್ಥಿಗಾಗಿ 2019-20ನೇ ಸಾಲಿನಲ್ಲಿ ರೂ.15.25 ಲಕ್ಷಗಳನ್ನು ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ,

(ರೂ. ಕೋಟಿಗಳಲ್ಲಿ)

ಲೆಕ್ಕಶೀರ್ಷಿಕೆ ವಿವರ	2019-20	2020-21
4202-03-102-0-01 386 ಬಂಡವಾಳವೆಚ್ಚ	24.00	4.50
4202-03-102-0-03 132 ರಾಜ್ಯ ಮಟ್ಟದ ಕ್ರೀಡಾಂಗಣ ನಿರ್ಮಾಣ	17.50	12.50
ಒಟ್ಟು	**41.50**	**17.00**

...2)

		ದಕ್ಷಿಣ ಕನ್ನಡ ಇವರಿಗೆ ಬಿಡುಗಡೆ ಮಾಡಲಾಗಿದೆ. ಸುಳ್ಯ ತಾಲ್ಲೂಕು ಕ್ರೀಡಾಂಗಣದಲ್ಲಿ ಕ್ರೀಡಾ ಮೂಲ ಸೌಕರ್ಯಗಳ ಸೃಜನೆಯನ್ನು ರೂ. 100.00 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ, 2019-20 ನೇ ಸಾಲಿನಲ್ಲಿ ರೂ. 30.00 ಲಕ್ಷಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಬಿಡುಗಡೆ ಮಾಡಲಾಗಿದೆ.
ಈ)	ಅನುದಾನ ಬಿಡುಗಡೆಯಾಗಿದ್ದಲ್ಲಿ, ಅನುದಾನ ಹಂಚಿಕೆ ಮಾಡುವ ಮಾನದಂಡವೇನು ಹಾಗೂ ಅನುದಾನ ಹಂಚಿಕೆಗೆ ವಿಳಂಬವಾಗುತ್ತಿರಲು ಕಾರಣವೇನು?	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾಂಗಣಗಳ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಕನಿಷ್ಟ ಮೂಲ ಸೌಕರ್ಯಗಳಿಲ್ಲದ ಕ್ರೀಡಾಂಗಣಗಳಲ್ಲಿ ತುರ್ತು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಆದ್ಯತೆ ನೀಡಿ, ಅನುದಾನ ಹಂಚಿಕೆ ಮಾಡಲಾಗುತ್ತಿದೆ. ಅನುದಾನದ ಕೊರತೆ ಹಿನ್ನೆಲೆಯಲ್ಲಿ ಅನುದಾನ ಹಂಚಿಕೆ ವಿಳಂಬವಾಗುತ್ತಿದೆ.

ವೈಎಸ್‌ಡಿ-ಇಬಿಬಿ/38/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1687

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಗೌರಿಬಿದನೂರು ನಗರದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣದ ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ;	ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹಿರೇಬಿದನೂರು ಪಂಚಾಯಿತಿಗೆ ಸೇರಿದ ಸರ್ವೆ ನಂ-199 ರಲ್ಲಿ ಒಟ್ಟು 2.02 ಎಕರೆ ವಿಸ್ತೀರ್ಣದ ನಿವೇಶನದಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣವನ್ನು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಜಿಲ್ಲಾ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿದ್ದು, ರೂ.150.00 ಲಕ್ಷಗಳ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಐ.ಡಿ.ಎಲ್.), ಚಿಕ್ಕಬಳ್ಳಾಪುರ-ವಿಭಾಗ, ಚಿಕ್ಕಬಳ್ಳಾಪುರ- ಈ ಸಂಸ್ಥೆಯು ನಿರ್ಮಾಣ ಏಜೆನ್ಸಿಯಾಗಿದ್ದು, ಪ್ರಸ್ತುತ 12 ಮೀಟರ್ ಎತ್ತರದ ಗೋಡೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಟ್ರಸ್ ಅಳವಡಿಕೆ ಹಂತದಲ್ಲಿದೆ.
ಆ)	ಸದರಿ ಕ್ರೀಡಾಂಗಣ ನಿರ್ಮಾಣದ ಅಂದಾಜು ವೆಚ್ಚವೆಷ್ಟು;	ಗೌರಿಬಿದನೂರಿನಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣದ ನಿರ್ಮಾಣಕ್ಕೆ ಸಂಬಂಧಿಸಿದಂತೆ, 2014-15ನೇ ಸಾಲಿನ ಲೋಕೋಪಯೋಗಿ ದರಪಟ್ಟಿಯಂತೆ ರೂ.6.75 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ಮೆ: ಕೆ.ಆರ್.ಐ.ಡಿ.ಎಲ್. ರವರು ತಯಾರಿಸಿ, ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರು ಮೇಲ್ಕಂಡ ಕಾಮಗಾರಿಯಲ್ಲಿ ರೂ.150.00 ಲಕ್ಷಗಳಿಗೆ ಮೆ|| ಕೆ.ಆರ್.ಐ.ಡಿ.ಎಲ್. ರವರಿಗೆ ದಿನಾಂಕ: 06-08-2016 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ಎರಡು ಕಂತುಗಳಲ್ಲಿ ಒಟ್ಟು ರೂ.125.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ. ನಂತರ ಮಾನ್ಯ ಲೋಕಸಭಾ ಸದಸ್ಯರ ಪ್ರದೇಶಾಭಿವೃದ್ಧಿ ನಿಧಿಯಿಂದ ರೂ.10.00 ಲಕ್ಷಗಳಿಗೆ ದಿನಾಂಕ:24-08-2018ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ, ರೂ.5.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಅದರಂತೆ, ಒಟ್ಟಾರೆಯಾಗಿ ನಿರ್ಮಾಣ ಸಂಸ್ಥೆಗೆ ರೂ.130.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

		ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ರವರ ವರದಿಯ ತೆ ಸದರಿ ಒಳಾಂಗಣ ಕ್ರೀಡಾಂಗಣದ 12 ಮೀಟರ್ ಎತ್ತರದ ಇಟ್ಟಿಗೆ ಕಟ್ಟಡ ನಿರ್ಮಾಣ ಹಾಗೂ ಇತರೆ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ; ಪೂರ್ಣಗೊಳಿಸಲು ಬಾಕಿ ಇರುವ ಇತರೆ ಕಾಮಗಾರಿಗಳಾದ ಟ್ರಸ್ ಅಳವಡಿಸುವುದು, ಗ್ಯಾಲ್ವನೈಸ್ಡ್ ರೂಫ್ ಶೀಟ್ ಅಳವಡಿಸುವುದು, ಗ್ಯಾಲರಿ ಪೋಷನ್‌ಗೆ ಪ್ಲಾಸ್ಟರಿಂಗ್, ಆಟದ ಮೈದಾನಕ್ಕೆ ಫ್ಲೋರಿಂಗ್, ವಿದ್ಯುದೀಕರಣ, ಸುಣ್ಣ-ಬಣ್ಣ ಬಳಿಯುವ ಕೆಲಸ, ಕಿಟಕಿ-ಬಾಗಿಲುಗಳನ್ನು ಅಳವಡಿಸುವುದು ಹಾಗೂ ಇತರೆ ಕಾಮಗಾರಿಗಳಿಗೆ ರೂ.150.00 ಲಕ್ಷಗಳ ಅಗತ್ಯವಿದ್ದು, ಹಾಲಿ ಕೈಗೆತ್ತಿಕೊಂಡು, ಪ್ರಗತಿಯಲ್ಲಿರುವ ಕಾಮಗಾರಿಗೆ ಒಟ್ಟಾರೆ ಅಂದಾಜು ವೆಚ್ಚ (ಆಡಳಿತ ಕಛೇರಿ ನಿರ್ಮಾಣ ಹೊರತುಪಡಿಸಿ) ರೂ.310.00 ಲಕ್ಷಗಳಾಗಲಿದೆ.
ಇ)	ಕ್ರೀಡಾಂಗಣದ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲು ಸರ್ಕಾರ ಉದ್ದೇಶಿಸಿದೆ ಹಾಗೂ ಪ್ರಸ್ತುತದ ಅಂದಾಜು ವೆಚ್ಚವನ್ನು ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ?	ಗೌರಿಬಿದನೂರು ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಗೆ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರು ದಿನಾಂಕ: 06-08-2016 ರಲ್ಲಿ ರೂ.150.00 ಲಕ್ಷಗಳಿಗೆ ಹಾಗೂ ದಿನಾಂಕ: 24-08-2018 ರಲ್ಲಿ ರೂ.10.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಪ್ರಸ್ತುತ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಒಟ್ಟಾರೆ ರೂ.310.00 ಲಕ್ಷಗಳ ವೆಚ್ಚ ತಗುಲಲಿದ್ದು, ಈಗಾಗಲೇ ನಿರ್ಮಾಣ ಸಂಸ್ಥೆಗೆ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರು ಬಿಡುಗಡೆ ಮಾಡಿರುವ ರೂ.130.00 ಲಕ್ಷ ಹೊರತುಪಡಿಸಿ, ಒಟ್ಟು ರೂ.180.00 ಲಕ್ಷ ನಿರ್ಮಾಣ ಸಂಸ್ಥೆಗೆ ಬಿಡುಗಡೆ ಮಾಡಬೇಕಾಗಿದೆ. ಜಿಲ್ಲಾಧಿಕಾರಿಗಳ ವಿಶೇಷ ಅಭಿವೃದ್ಧಿ ಅನುದಾನ / ಗೌರಿಬಿದನೂರು ನಗರ ಸಭೆಯ ಅನುದಾನ / ಶಾಸಕರ-ಸಂಸದರ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನಗಳನ್ನು ಕ್ರೋಢೀಕರಿಸಿ, ಶೀಘ್ರ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ವಹಿಸಲಾಗುವುದು.

ವೈಎಸ್‌ಡಿ-ಇಬಿಬಿ/39/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 1699
ಸದಸ್ಯರ ಹೆಸರು	: ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	: 16.03.2021

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ನಾರಾಯಣಪುರ ಬಲದಂಡೆ (ಎನ್‌ಆರ್‌ಬಿಸಿ) ಕಿ.ಮೀ.0.00 ರಿಂದ 95.00 ವರೆಗೆ ಕಾಲುವೆ ನವೀಕರಣ ಕಾಮಗಾರಿಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)	ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.0.00 ದಿಂದ 95.00ರ ರವರೆಗಿನ ಆಧುನೀಕರಣ ಕಾಮಗಾರಿಯ ಗುತ್ತಿಗೆಯನ್ನು ಕರಾರು ಒಡಂಬಡಿಕೆ ದಿನಾಂಕ:07.12.2019 ರನ್ವಯ ವಹಿಸಿಕೊಡಲಾಗಿರುತ್ತದೆ. ಟೆಂಡರ್ ನಿಯಮಾವಳಿಗಳ ಪ್ರಕಾರ ಕಾಮಗಾರಿಯನ್ನು ಪೂರ್ಣಗೊಳಿಸಲು 12 ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ. ದಿನಾಂಕ:13.11.2020 ರಂದು ನಡೆದ ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿಯ ಸಭೆಯಲ್ಲಿ 2019-20ನೇ ಸಾಲಿನ ಹಿಂಗಾರು ಹಂಗಾಮಿಗಾಗಿ ದಿನಾಂಕ:21.03.2020 ರವರೆಗೆ ನೀರನ್ನು ಹರಿಸಲು ನಿರ್ಧರಿಸಲಾಗಿತ್ತು. ಕಾಲುವೆಯಲ್ಲಿ ನೀರನ್ನು ದಿನಾಂಕ:31.03.2020 ರವರೆಗೆ ವಿಸ್ತರಿಸುವಂತೆ ಅಚ್ಚುಕಟ್ಟುದಾರರು ಮನವಿ ಮಾಡಿದ ಹಿನ್ನೆಲೆಯಲ್ಲಿ ಕಾಲುವೆಯಲ್ಲಿ ನೀರಿನ ಹರಿವನ್ನು ವಿಸ್ತರಿಸಲಾಗಿರುತ್ತದೆ. ತದನಂತರ ಕಾಲುವೆಯಲ್ಲಿ ನೀರಿನ ಹರಿವನ್ನು ಸ್ಥಗಿತಗೊಳಿಸಿದ ನಂತರ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿತ್ತು. ಆದರೆ 21ನೇ ಮಾರ್ಚ್ 2020 ರಿಂದ ಮೇ 2020 ರವರೆಗೆ ಕೋವಿಡ್-19 ರಿಂದಾಗಿ ಕೇಂದ್ರ ಸರ್ಕಾರದಿಂದ ಲಾಕ್ ಡೌನ್ ಘೋಷಣೆ ಆದ ಪ್ರಯುಕ್ತ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಲಾಕ್‌ಡೌನ್ ತೆರವುಗೊಳಿಸಿದ ನಂತರ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿ 3ನೇ ಆಗಸ್ಟ್ 2020 ರವರೆಗೆ ನಿರ್ವಹಿಸಲಾಗಿರುತ್ತದೆ. ಈ ಅವಧಿಯಲ್ಲಿ ಶೇಕಡ 57% ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿರುತ್ತದೆ. ಪ್ರಸ್ತುತ 2020-21ನೇ ಸಾಲಿನ ಮುಂಗಾರು ಹಂಗಾಮಿಗಾಗಿ ಅಧಿಸೂಚಿತ ಕ್ಷೇತ್ರಕ್ಕೆ ಕಾಲುವೆಯಲ್ಲಿ ದಿನಾಂಕ:03.08.2020 ರಿಂದ ನೀರಾವರಿಗಾಗಿ ನೀರನ್ನು ಹರಿಸಲಾಗುತ್ತಿರುವುದರಿಂದ ಕಾಲುವೆಯ ನೀರಿನ ಹರಿವಿನ ಭಾಗದ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕಾಮಗಾರಿಯ ನಿರ್ವಹಣೆಯಲ್ಲಿ ಯಾವುದೇ ಅನಗತ್ಯ ವಿಳಂಬವಾಗಿರುವುದಿಲ್ಲ. ಹಿಂಗಾರು ಹಂಗಾಮು ಮುಕ್ತಾಯಗೊಂಡ ನಂತರ ಕಾಲುವೆ ಕ್ಲೋಸರ್ ಅವಧಿಯಲ್ಲಿ ಬಾಕಿ ಕಾಮಗಾರಿಯನ್ನು ಯುದ್ಧೋಪಾದಿಯಲ್ಲಿ ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು.

ಆ)	ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಅತ್ಯಂತ ಕಳಪೆ ಮಟ್ಟದಲ್ಲಿ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)	ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 0.00 ರಿಂದ 95.00 ರವರೆಗಿನ ಕಾಲುವೆ ನವೀಕರಣ ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಲು ಇಲಾಖೆಯ ಗುಣನಿಯಂತ್ರಣ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಅವರ ಸಲಹೆ ಹಾಗೂ ನಿರ್ದೇಶನಗಳನ್ವಯ ಟೆಂಡರ್ ಸ್ಪೆಸಿಫೀಕೇಶನ್ ಪ್ರಕಾರ ಗುಣಮಟ್ಟ ಕಾಯ್ದುಕೊಳ್ಳುವ ಹಾಗೂ 3ನೇ ತಂಡದ ಸಮಾಲೋಚಕರಿಂದ ಗುತ್ತಿಗೆದಾರರು ನಿರ್ವಹಿಸಿದ ಪರಿಮಾಣಗಳನ್ನು ವಿವಿಧ ಪರೀಕ್ಷೆಗಳಿಗೆ ಒಳಪಡಿಸಿ ಕಾಮಗಾರಿಯನ್ನು ನಿರ್ವಹಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
ಇ)	ಸದರಿ ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವಿದ ನೀಡುವುದು)	

ಸಂಖ್ಯೆ: ಜಸಂಇ 22 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1708
2. ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಅಂಜಲಿ ಹೇಮಂತ ನಿಂಬಾಳ್ಕರ (ಖಾನಾಪುರ)
3. ಉತ್ತರಿಸಬೇಕಾದ ದಿನಾಂಕ : 16/3/2021
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೋವಿಡ್–19 ಲಾಕ್‌ಡೌನ್‌ನಿಂದ ಸಂಕಷ್ಟಕ್ಕೊಳಗಾಗಿದ್ದ ಚಾಲಕರು, ಕ್ಷೌರಿಕರು ಮತ್ತಿತರರಿಗೆ ಸರ್ಕಾರವು ಘೋಷಿಸಿದ್ದ ಪರಿಹಾರ ಧನವು ಅವರ ಖಾತೆಗಳಿಗೆ ಜಮೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	**ಹೌದು** ಕೋವಿಡ್–19ರ ಕಾರಣ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಘೋಷಣೆಯಂತೆ ಸಂಕಷ್ಟಕ್ಕೊಳಗಾದ ಅಗಸ ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರಿಗೆ ಸರ್ಕಾರದ ಪ್ರಮಾಣಿತ ಕಾರ್ಯವಿಧಾನ ಮಾರ್ಗಸೂಚಿಗಳನ್ವಯ ತಲಾ ರೂ.5,000/–ಗಳ ಒಂದು ಬಾರಿಯ ನೆರವಿನ ವಿಶೇಷ ಪ್ಯಾಕೇಜ್ ಅನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಜಾರಿಗೊಳಿಸಲಾಗುತ್ತಿದ್ದು, ನಿಗದಿತ ದಿನಾಂಕಕ್ಕೆ ಇದುವರೆಗೆ ಅರ್ಜಿ ಸಲ್ಲಿಸಿರುವ ಅಗಸ ವೃತ್ತಿಯಲ್ಲಿ ತೊಡಗಿಕೊಂಡ 74,782 ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿಕೊಂಡ 66,820 ಕಾರ್ಮಿಕರು ಸೇರಿದಂತೆ ಒಟ್ಟು 1,41,602 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಒಟ್ಟು 121760 ಅರ್ಜಿದಾರ ಫಲಾನುಭವಿಗಳಿಗೆ ರೂ.60.88 ಕೋಟಿ ಮೊತ್ತವನ್ನು ಅವರವರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ವರ್ಗಾಯಿಸಲಾಗಿದೆ. ಸದರಿ ವಿಶೇಷ ಪ್ಯಾಕೇಜ್ ಅಡಿ ನೆರವು ಕೋರಿ ಅರ್ಜಿ ಸಲ್ಲಿಸಿರುವ ಅಗಸ ಮತ್ತು ಕ್ಷೌರಿಕ ವೃತ್ತಿಯ ಕಾರ್ಮಿಕರು ಮಾರ್ಗಸೂಚಿಗಳನ್ವಯ ಮಾಹಿತಿ ಒದಗಿಸದ ಹಾಗೂ ಷರತ್ತುಗಳನ್ನು ಪೂರೈಸದಿರುವ 12,504 ಅರ್ಜಿಗಳು ಮಂಜೂರಾತಿಗೆ ಬಾಕಿಯಿದ್ದು, ಸದರಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಎಲ್ಲಾ ಅರ್ಹ ಕಾರ್ಮಿಕರಿಗೆ ಘೋಷಿತ ನೆರವಿನ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಟಿಡಿ 121 ಟಿಡಿಒ 2020, ದಿನಾಂಕ:29-05-2020 ರಲ್ಲಿ ರಾಜ್ಯದ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಮಾತ್ರ ಒಮ್ಮೆ ಪರಿಹಾರವಾಗಿ ರೂ.5,000/- ಗಳ ಪರಿಹಾರ ಧನವನ್ನು ಷರತ್ತಿಗೊಳಪಟ್ಟು ನೀಡಲು ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಆ)	ಸೇವಾ ಸಿಂಧು ತಂತ್ರಾಂಶದ ಮೂಲಕ ಈವರೆಗೆ ಪರಿಹಾರ ಕೋರಿ ಬಂದ ಅರ್ಜಿಗಳೆಷ್ಟು;	**ಕ್ಷೌರಿಕರು & ಮತ್ತಿತರರು:** ಸೇವಾ ಸಿಂಧು ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿರುವ ಅಗಸ ವೃತ್ತಿಯಲ್ಲಿ ತೊಡಗಿಕೊಂಡ 74,782 ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿಕೊಂಡ 66,820 ಕಾರ್ಮಿಕರು ಸೇರಿದಂತೆ ಒಟ್ಟು 1,41,602 ಅರ್ಜಿಗಳನ್ನು ಸ್ವೀಕರಿಸಲಾಗಿದೆ. **ಚಾಲಕರು:** ಸೇವಾ ಸಿಂಧು ವೆಬ್ ಪೋರ್ಟಲ್‌ನಲ್ಲಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ಪರಿಹಾರ ಧನ ಕೋರಿ ಒಟ್ಟು 2,45,904 ಫಲಾನುಭವಿಗಳ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಪೈಕಿ 2,15,669 ಫಲಾನುಭವಿಗಳಿಗೆ ಪರಿಹಾರ ಧನವನ್ನು ವಿತರಿಸಲಾಗಿರುತ್ತದೆ
ಇ)	ಈ ಪೈಕಿ ಎಷ್ಟು ಅರ್ಜಿಗಳಿಗೆ ಪರಿಹಾರ ವಿತರಿಸಲಾಗಿದೆ:	**ಕ್ಷೌರಿಕರು & ಮತ್ತಿತರರು:** ವಿಶೇಷ ಪ್ಯಾಕೇಜ್ ಅಡಿ ಅಗಸ ವೃತ್ತಿಯಲ್ಲಿ ತೊಡಗಿಕೊಂಡ 65046 ಹಾಗೂ ಅಗಸ ವೃತ್ತಿಯಲ್ಲಿ ತೊಡಗಿಕೊಂಡ 56714 ಸೇರಿದಂತೆ ಒಟ್ಟು 121760 ಅರ್ಜಿದಾರ ಫಲಾನುಭವಿಗಳಿಗೆ ತಲಾ ರೂ.5,000/-ಗಳಂತೆ ಪರಿಹಾರ ವಿತರಿಸಲಾಗಿದೆ. **ಚಾಲಕರು:** ID Validation ಅನುತ್ತೀರ್ಣ ತಾಂತ್ರಿಕ ಸಮಸ್ಯೆಯಿಂದ / ಫಲಾನುಭವಿಗಳ ಬ್ಯಾಂಕ್ ಖಾತೆಗಳು ಚಾಲ್ತಿಯಲ್ಲಿ ಇಲ್ಲದ ಕಾರಣ / ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆ ಜೋಡಣೆ ಆಗದಿರುವ ಕಾರಣ ಪರಿಹಾರ ಧನವನ್ನು ವಿತರಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಬಾಕಿ ಉಳಿದಿರುವ 27,728 ಅರ್ಜಿದಾರರಿಗೆ ಪರಿಹಾರ ಧನವನ್ನು ವಿತರಿಸುವ ಸಂಬಂಧ ಹೆಚ್ಚುವರಿ ಬ್ಯಾಂಕ್ ಖಾತೆಯ ಮಾಹಿತಿಗಳನ್ನು ದಾಖಲಿಸುವುದು ಅವಶ್ಯಕವಾಗಿದ್ದು, "ಸೇವಾ ಸಿಂಧು" ವೆಬ್ ಪೋರ್ಟಲ್‌ನಲ್ಲಿ ಹೆಚ್ಚುವರಿ ಬ್ಯಾಂಕ್ ಖಾತೆಯ ಮಾಹಿತಿಗಳನ್ನು ದಾಖಲಿಸುವ ಮೂಲಕ ಪರಿಹಾರ ಧನ ವಿತರಿಸಲು ಸಹಕರಿಸಬೇಕಾಗಿ ಕೋರಿ ಪತ್ರಿಕಾ ಪ್ರಕಟಣೆಯನ್ನು ಸಾರಿಗೆ ಇಲಾಖಾ ವತಿಯಿಂದ ಪ್ರಮುಖ ಪತ್ರಿಕೆಗಳಲ್ಲಿ ನೀಡಲಾಗಿರುತ್ತದೆ ಹಾಗೂ ಎಲ್ಲಾ ಅರ್ಜಿದಾರರಿಗೆ ಅವರ ಮೊಬೈಲ್‌ಗಳಿಗೆ ಹೆಚ್ಚುವರಿ ಬ್ಯಾಂಕ್ ಖಾತೆಗಳನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ದಾಖಲಿಸುವಂತೆ ಕೋರಿ ಎರಡು ಬಾರಿ ಸೇವಾ ಸಿಂಧು ಮೂಲಕ ದಿನಾಂಕ: 25-11-2020ರ ಗಡುವನ್ನು ನಿಗಧಿಪಡಿಸಿ ಎಸ್.ಎಂ.ಎಸ್., ಮುಖಾಂತರ ಸಂದೇಶಗಳನ್ನು ರವಾನಿಸಲಾಗಿರುತ್ತದೆ. ಅದಕ್ಕನುಗುಣವಾಗಿ ಸ್ವೀಕೃತವಾಗಿರುವ ಮಾಹಿತಿಯನ್ನು ಪರಿಶೀಲಿಸಿ ಪರಿಹಾರ ಧನ ವಿತರಿಸುವ ಕ್ರಮ ಚಾಲ್ತಿಯಲ್ಲಿರುತ್ತದೆ.
ಈ)	ಪರಿಹಾರ ವಿತರಣೆಗೆ ಈವರೆಗೆ ಸರ್ಕಾರವು ಭರಿಸಿದ ವೆಚ್ಚವೆಷ್ಟು?	**ಕ್ಷೌರಿಕರು & ಮತ್ತಿತರರು:** ಕಾರ್ಮಿಕ ಇಲಾಖೆಯಿಂದ ಪರಿಹಾರ ವಿತರಣೆಗೆ ಈವರೆಗೆ ಸರ್ಕಾರವು ಒಟ್ಟು ರೂ. 60.88 ಕೋಟಿಗಳನ್ನು ವೆಚ್ಚ ಮಾಡಿರುತ್ತದೆ. **ಚಾಲಕರು:** ಸಾರಿಗೆ ಇಲಾಖೆಗೆ ಸರ್ಕಾರದಿಂದ ಪರಿಹಾರ ಧನ ವಿತರಿಸುವ ಸಂಬಂಧ ರೂ.117.51 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. ಸದರಿ ಅನುದಾನದಲ್ಲಿ ರೂ.107.83 ಕೋಟಿಗಳನ್ನು ಪರಿಹಾರ ವಿತರಣೆಗೆ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗಿರುತ್ತದೆ.

ಸಂಖ್ಯೆ: ಕಾಇ 115 ಎಲ್‌ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2328
2	ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)
3	ಉತ್ತರಿಸುವ ದಿನಾಂಕ	:	16-03-2021
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗಾಂಧಿನಗರ, ಮಲ್ಲೇಶ್ವರಂ, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನಾಗಮೋಹನ್‌ದಾಸ್ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗಾಂಧಿನಗರ, ಮಲ್ಲೇಶ್ವರಂ, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ನಾಗಮೋಹನ್‌ದಾಸ್ ಸಮಿತಿಯು ಸರ್ಕಾರಕ್ಕೆ ವರದಿಯನ್ನು ದಿನಾಂಕ: 25-10-2018ರಂದು ಸಲ್ಲಿಸಿರುತ್ತದೆ.
ಆ)	ಹಾಗಿದ್ದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು)	• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವ್ಯಾಪ್ತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ನಾಗಮೋಹನ್‌ದಾಸ್ ಸಮಿತಿಯು ತನಿಖೆ ಕೈಗೊಂಡು, ಅಂತಿಮ ತನಿಖಾ ವರದಿಯನ್ನು ದಿನಾಂಕ: 25-10-2018 ರಂದು ಸಲ್ಲಿಸಿದ್ದು, ಸದರಿ ವರದಿಯಲ್ಲಿ ತಪ್ಪಿತಸ್ಥರೆಂದು ಗುರುತಿಸಿರುವ ಅಭಿಯಂತರರುಗಳ ಪೈಕಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಭಿಯಂತರರುಗಳನ್ನು ದಿನಾಂಕ: 07-11-2019 ಮತ್ತು 19-11-2019 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ ಹಾಗೂ ಇವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಮತ್ತು ಸದರಿಯರುಗಳನ್ನು Non Executive ಹುದ್ದೆಗಳಿಗೆ ನೇಮಿಸಲು ಕ್ರಮ ವಹಿಸಲಾಗಿರುತ್ತದೆ. • ತನಿಖಾ ವರದಿಯಲ್ಲಿ ನಮೂದಿಸಿರುವ ಆರೋಪಿತ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ (Black List)ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. • ಪಾಲಿಕೆಗೆ ಸದರಿ ಅವ್ಯವಹಾರದಲ್ಲಿ ಆಗಿರುವ ನಷ್ಟವನ್ನು ನಿಖರವಾಗಿ ಅಂದಾಜಿಸಲು ರಾಜ್ಯ ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಿದ್ದು, ಈ ಸಂಬಂಧ ವಿಶೇಷ ಲೆಕ್ಕಪರಿಶೋಧನಾ ತಂಡವು ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವಿಭಾಗಳನ್ನು ಒಳಗೊಂಡಂತೆ ಪಾಲಿಕೆಯ 198 ವಾರ್ಡ್‌ಗಳಲ್ಲಿ 2008 ರಿಂದ ನಡೆದಿದೆ ಎನ್ನಲಾದ ಅಕ್ರಮ ಮತ್ತು ಅವ್ಯವಹಾರಗಳ ಕುರಿತು ದಿನಾಂಕ: 21-08-2019ರಂದು ವಿಶೇಷ ಲೆಕ್ಕ ಪರಿಶೋಧನಾ ವರದಿಯನ್ನು ಹಾಗೂ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ವರದಿಯ ಮೇಲೆ ಕ್ರಮ ವಹಿಸಲಾಗುತ್ತಿದೆ.

. . .2.

45

		• ನಿವೃತ್ತ ನ್ಯಾಯಮೂರ್ತಿ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್ ತನಿಖಾ ಸಮಿತಿಯಲ್ಲಿ ಸೂಚಿಸಿರುವಂತೆ ಶಾಸನಾತ್ಮಕ ಕಡಿತಗಳ ಕಡಿಮೆ ಕಟಾವಣೆ ಹಾಗೂ ಮತ್ತಿತರೆ ವಸೂಲಾತಿಗಳ ಒಟ್ಟು ನಿವ್ವಳ ಮೊತ್ತ ರೂ. 7656.01 ಲಕ್ಷಗಳನ್ನು ಸಂಬಂಧಿತ ಗುತ್ತಿಗೆದಾರರಿಂದ ವಸೂಲಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ.
ಇ)	ಹಾಗಿದ್ದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಅಧಿಕಾರಿಗಳೇನಾದರೂ ತಪ್ಪಿತಸ್ಥರೆಂದು ವರದಿಯಾಗಿದೆಯೇ; ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವಲಯಗಳ ಇಂಜಿನಿಯರಿಂಗ್ ವಿಭಾಗಗಳು ಸೇರಿದಂತೆ, 198 ವಾರ್ಡ್‌ಗಳಲ್ಲಿನ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮ ಮತ್ತು ಅವ್ಯವಹಾರಗಳಿಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಹೆಚ್. ಎನ್. ನಾಗಮೋಹನ್‌ದಾಸ್‌ರವರ ತನಿಖಾ ಸಮಿತಿಯು ತನಿಖೆ ನಡೆಸಿ, ಸದರಿ ತನಿಖಾ ಸಮಿತಿಯು ದಿನಾಂಕ: 25-10-2018 ರಂದು ಸಲ್ಲಿಸಿರುವ ಅಂತಿಮ ತನಿಖಾ ವರದಿಯ ಆಧಾರದ ಮೇಲೆ ಕರ್ತವ್ಯಲೋಪ ಎಸಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸಂಬಂಧ ದಿ: 13-11-2019 ರಂದು ಕರಡು ದೋಷಾರೋಪಣಾ ಪಟ್ಟಿಯನ್ನು ಸಿದ್ಧಪಡಿಸಲು ಪ್ರಧಾನ ಅಭಿಯಂತರನ್ನೊಳಗೊಂಡ ತಂಡವನ್ನು ರಚಿಸಲಾಗಿದ್ದು, ಈ ಸಂಬಂಧ ಸದರಿ ತಂಡವು ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಕರಡು ದೋಷಾರೋಪಣಾ ಪಟ್ಟಿಗಳನ್ನು ತಯಾರಿಸಲು ಕ್ರಮ ವಹಿಸಲಾಗುತ್ತಿದೆ.

ನಅಇ 131 ಎಂಎನ್‌ಯು 2021

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2330
ಮಾನ್ಯ ಸದಸ್ಯರ ಹೆಸರು	ಶ್ರೀ ಸುಬ್ಬಾರೆಡ್ಡಿ ಎಸ್. ಎನ್. (ಬಾಗೇಪಲ್ಲಿ)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಮಾನ್ಯ ಅಬಕಾರಿ ಸಚಿವರು

*****

ಕ್ರಸಂ	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ಕ್ಷೇತ್ರದ ಜನಸಂಖ್ಯೆಯ ಆಧಾರದ ಮೇಲೆ ಎಷ್ಟು ಮದ್ಯದ ಅಂಗಡಿಗಳನ್ನು ಮಂಜೂರು ಮಾಡಬಹುದಾಗಿದೆ; ಪ್ರಸ್ತುತ ಎಷ್ಟು ಅಂಗಡಿಗಳು ಮಂಜೂರಾಗಿವೆ;	ಸರ್ಕಾರಿ ಆದೇಶ ಸಂ:ಹೆಚ್‌ಡಿ/152/ಇಎಫ್‌ಎಲ್/86, ದಿನಾಂಕ:30/06/1987 ರನ್ವಯ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ನಗರ ಪ್ರದೇಶಕ್ಕೆ 02 ಹಾಗೂ ಗ್ರಾಮಾಂತರ ಪ್ರದೇಶಕ್ಕೆ 11 ಸಿಎಲ್-2 ಸನ್ನದುಗಳ ಕೋಟಾವನ್ನು ನಿಗಧಿಪಡಿಸಿದ್ದು, ಈ ಪೈಕಿ ನಗರ ಪ್ರದೇಶದಲ್ಲಿ 02 ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 08 ಸನ್ನದುಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಸಿಎಲ್-9, ಸಿಎಲ್-7, ಸಿಎಲ್-11ಸಿ ಸನ್ನದುಗಳಿಗೆ ಸದರಿ ಕೋಟಾ ಅನ್ವಯವಾಗುವುದಿಲ್ಲ. ಬಾಗೇಪಲ್ಲಿ ವಿಧಾನಸಭಾ ವ್ಯಾಪ್ತಿಯಲ್ಲಿ ಪ್ರಸ್ತುತ 10 ಸಿಎಲ್-2, 01 ಸಿಎಲ್-7, 13 ಸಿಎಲ್-9, 07 ಸಿಎಲ್-11ಸಿ, 01 ವೈನ್ ಬುಟೀಕ್ ಸೇರಿ ಒಟ್ಟು 32 ಸನ್ನದುಗಳು ಕಾರ್ಯನಿರ್ವಹಿಸುತ್ತಿರುತ್ತವೆ.
ಆ)	ಪ್ರಸ್ತುತ ಹೊಸ ಅಂಗಡಿಗಳನ್ನು ತೆರೆಯುವ ಸಂಬಂಧ ಎಷ್ಟು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿರುತ್ತದೆ; (ಪೂರ್ಣ ವಿವರ ನೀಡುವುದು)	ಪ್ರಸ್ತುತ ಬಾಗೇಪಲ್ಲಿ ವಲಯ ವ್ಯಾಪ್ತಿಯಲ್ಲಿ ಮೆ॥ ಆರ್. ಆರ್. ಎಂಟರ್‌ಪ್ರೈಸಸ್ ಹಾಗೂ ಶ್ರೀ ವಿ. ವೆಂಕಟಶಿವಾರೆಡ್ಡಿ ಎಂಬ ಅರ್ಜಿದಾರರು ತಲಾ ಒಂದು ಸಿಎಲ್-7 ಸನ್ನದುಗಳನ್ನು ಮಂಜೂರು ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಗೌರಿಬಿದನೂರು ತಾಲ್ಲೂಕಿನ ಇಡಗೂರು ಗ್ರಾಮದಲ್ಲಿ ಸಿಎಲ್-11(ಸಿ) ಎಂ.ಎಸ್.ಐ.ಎಲ್. ಮದ್ಯ ಮಾರಾಟ ಮಳಿಗೆ ಸ್ಥಾಪಿಸುವ ಸಂಬಂಧ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.
ಇ)	ಹೊಸದಾಗಿ ಸಿಎಲ್-7 ಅಂಗಡಿಗಳಿಗೆ ಬಂದಿರುವ ಪ್ರಸ್ತಾವನೆಯು ನಿಯಮಾನುಸಾರ ಕ್ರಮಬದ್ಧವಾಹಿದೆಯೇ; (ವಿವರ ನೀಡುವುದು)	ಸಿಎಲ್-7 ಅಂಗಡಿಗಳಿಗೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಲಾಗಿ ಉದ್ದೇಶಿತ ಕಟ್ಟಡಗಳಲ್ಲಿ ಅಗತ್ಯ ಸೌಲಭ್ಯಗಳು ಒದಗಿಸದೇ ಇರುವುದರಿಂದ ಹಾಗೂ ಅರ್ಜಿಯೊಂದಿಗೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸದೇ ಇರುವ ಕಾರಣ, ಸೂಕ್ತ ದಾಖಲಾತಿಗಳನ್ನು ಸಲ್ಲಿಸಲು ಹಾಗೂ ಕಟ್ಟಡದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸೂಚಿಸಿ ಪ್ರಸ್ತಾವನೆಗಳನ್ನು ಅರ್ಜಿದಾರರಿಗೆ ಹಿಂದಿರುಗಿಸಲಾಗಿರುತ್ತದೆ.

ಈ)	ಸಿಎಲ್-7 ಅಂಗಡಿಗಳಿಗೆ ಪರವಾನಿಗೆ ಪಡೆಯಲು ಅನುಸರಿಸಬೇಕಾದ ನಿಯಮಗಳೇನು? (ವಿವರ ನೀಡುವುದು)	ಸಿಎಲ್-7 ಅಂಗಡಿಗಳಿಗೆ ಪರವಾನಿಗೆ ಪಡೆಯಲು ಸರ್ಕಾರದ ಅಧಿಸೂಚನೆ ಸಂ:ಎಫ್‌ಡಿ/16/ಪಿಇಎಸ್/2017, ದಿನಾಂಕ:05/02/2018 ರನ್ವಯ ಮಹಾನಗರ ಪಾಲಿಕೆ ಪ್ರದೇಶದಲ್ಲಿ 15 ಜೋಡಿ ಹಾಸಿಗೆ ಕೊಠಡಿಗಳು ಮತ್ತು ಇತರೆ ಪ್ರದೇಶಗಳಲ್ಲಿ 10 ಜೋಡಿ ಹಾಸಿಗೆ ಕೊಠಡಿಗಳು ಹೊಂದಿರಬೇಕಾಗಿರುತ್ತದೆ. ಸರ್ಕಾರಿ ಆದೇಶ ಸಂ:ಆಇ/36/ಇಡಬ್ಲ್ಯೂಪಿ/2018, ದಿನಾಂಕ:06/08/2020 ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯ್ತಿ / ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದುಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-7 ಸನ್ನದುಗಳಿಗೆ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5 ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ. ಮುಂದುವರೆದು, ಸಿಎಲ್-7 ಅಂಗಡಿಗಳಿಗೆ ಪರವಾನಿಗೆ ಪಡೆಯಲು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967 ರ ನಿಯಮಗಳು ಹಾಗೂ ಕರ್ನಾಟಕ ಅಬಕಾರಿ (ಸ್ವದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರಲ್ಲಿನ ಮಾನದಂಡಗಳನ್ನು ಅನುಸರಿಸಬೇಕಾಗಿರುತ್ತದೆ. ಮುಂದುವರೆದು, ಸಿಎಲ್-7 ಸನ್ನದನ್ನು ಮಂಜೂರು ಮಾಡುವಾಗ ಅರ್ಜಿದಾರರುಗಳು ಕರ್ನಾಟಕ ಅಬಕಾರಿ (ದೇಶೀ ಮತ್ತು ವಿದೇಶೀ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4(ಬಿ) ಪ್ರಕಾರ ಮತ್ತು ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಗಳು 1967 ರ ನಿಯಮ 5(ಬಿ) ರನ್ವಯ ಅನರ್ಹರಾಗದಿರುವ ಬಗ್ಗೆ ಸ್ವಯಂಘೋಷಿತ ಮುಚ್ಚಳಿಕೆಯನ್ನು ಪಡೆಯಲಾಗುತ್ತಿರುತ್ತದೆ.

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಆಇ 22 ಇಎಲ್‌ಕ್ಯೂ 2021

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2335
ಮಾನ್ಯ ಸದಸ್ಯರ ಹೆಸರು	ಶ್ರೀ ಸುರೇಶ್ ಗೌಡ (ನಾಗಮಂಗಲ)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಾಗಮಂಗಲ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಪರವಾನಗಿ ಇಲ್ಲದೆ ಸಣ್ಣ ಸಣ್ಣ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಾಗಮಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳದಲ್ಲಿ ಸೇವನೆಗಾಗಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, 2018 ರಿಂದ ಇಲ್ಲಿಯವರೆಗೆ ಎಷ್ಟು ಪ್ರಕರಣಗಳು ಪತ್ತೆಯಾಗಿದೆ; ಎಷ್ಟು ದಾಸ್ತಾನುಗಳನ್ನು ವಶಪಡಿಸಿಕೊಳ್ಳಲಾಗಿದೆ;	ನಾಗಮಂಗಲ ಮತ ಕ್ಷೇತ್ರ ವ್ಯಾಪ್ತಿಯಲ್ಲಿ 2018-19ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 333 ಪ್ರಕರಣಗಳನ್ನು ದಾಖಲಿಸಲಾಗಿದ್ದು, ವಶಪಡಿಸಿಕೊಂಡ ದಾಸ್ತಾನಿನ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡಲು ಸಹಕರಿಸುತ್ತಿರುವ ಪರವಾನಗಿದಾರರು ಯಾರು; (ವಿವರ ನೀಡುವುದು)	ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡಲು ಸನ್ನದುದಾರರು ಸಹಕರಿಸುತ್ತಿರುವ ಕುರಿತು ಯಾವುದೇ ವರದಿಯಾಗಿರುವುದಿಲ್ಲ.
ಈ)	ಇಂತಹ ಅಕ್ರಮಗಳಲ್ಲಿ ತೊಡಗಿಸಿಕೊಂಡವರ ವಿರುದ್ಧ ಸರ್ಕಾರ ಯಾವ ಕ್ರಮ ಜರುಗಿಸುವುದು?	ಉದ್ಭವಿಸುವುದಿಲ್ಲ.

ಆಇ 23 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಅನುಬಂಧ

ನಾಗಮಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿ 2018-19 ನೇ ಸಾಲಿನಿಂದ 2020-21ರವರೆಗೆ (ಫೆಬ್ರವರಿ ಅಂತ್ಯಕ್ಕೆ) ದಾಖಲಿಸಿರುವ ಪ್ರಕರಣಗಳು ಮತ್ತು ವಶಪಡಿಸಿಕೊಂಡ ದಾಸ್ತಾನಿನ ವಿವರ

ಕ್ರ ಸಂ	ಅಬಕಾರಿ ಸಾಲು (ಜುಲೈ ನಿಂದ ಜೂನ್ ವರೆಗೆ)	ದಾಖಲಿಸಿದ ಮೊಕದ್ದಮೆಗಳು				ವಶಪಡಿಸಿಕೊಂಡ ವಸ್ತುಗಳು		
		ಕಲಂ 32	ಕಲಂ 15(A)	ಒಟ್ಟು	ವಿಧಿಸಿದ ದಂಡ (ರೂ.ಗಳಲ್ಲಿ)	ಮದ್ಯ (ಲೀಟರ್ ಗಳಲ್ಲಿ)	ಬಿಯರ್ (ಲೀಟರ್ ಗಳಲ್ಲಿ)	ವಾಹನ
1	2018-19	12	111	123	1,84,000/-	279.990	23.320	07
2	2019-20	07	111	118	1,11,000/-	122.090	0.950	03
3	2020-21	13	79	92	73,000/-	186.160	17.800	10
ಒಟ್ಟು		32	301	333	3,68,000/-	588.240	42.070	20

ಆಇ 23 ಇಎಲ್‌ಕ್ಯೂ 2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2337
ಉತ್ತರಿಸಬೇಕಾದ ದಿನಾಂಕ	:	16/03/2021.
ಸದಸ್ಯರ ಹೆಸರು	:	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸುವ ಸಚಿವರು	:	ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಪುತ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ನೂತನ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡುವ ಸಲುವಾಗಿ ಜಾಗವನ್ನು ಗುರುತಿಸಲಾಗಿದೆಯೇ;	ಪುತ್ತೂರು ವಿಧಾನ ಸಭಾ ಕ್ಷೇತ್ರದ ಕಸಬಾ ಗ್ರಾಮದ ಕೊಂಬೆಟ್ಟು ಎಂಬಲ್ಲಿ ಸರ್ವೆ ನಂ-86.1ಎ, 87.1 ಮತ್ತು 87.2 ರಲ್ಲಿ ಒಟ್ಟು 7.55 ಎಕರೆ ನಿವೇಶನದಲ್ಲಿ ಪುತ್ತೂರು ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಸದರಿ ನಿವೇಶನದಲ್ಲಿ ನೆಲ ಸಮತಟ್ಟು ಕಾಮಗಾರಿ, ಕ್ರೀಡಾಂಗಣಗಳು, ಶೌಚಾಲಯ, ನೀರಿನ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಾರ್ವಜನಿಕರ ಬಳಕೆಯಲ್ಲಿದೆ. ಸದರಿ ತಾಲ್ಲೂಕು ಕ್ರೀಡಾಂಗಣದ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣವನ್ನು ನಿರ್ಮಿಸಲು ಅಗತ್ಯವಾದ ನಿವೇಶನವನ್ನು ಗುರುತಿಸಲಾಗಿದೆ. ರೂ.300.00 ಲಕ್ಷ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣವನ್ನು ನಿರ್ಮಿಸಲು ಸರ್ಕಾರವು 2017-18 ನೇ ಸಾಲಿನಲ್ಲಿ ತಾತ್ವಿಕ ಅನುಮೋದನೆ ನೀಡಿದ್ದು, ಅನುದಾನದ ಕೊರತೆ ಹಿನ್ನಲೆಯಲ್ಲಿ ಅನುದಾನ ಹಂಚಿಕೆ ಮಾಡಿ, ಆಡಳಿತಾತ್ಮಕ ಅನುಮೋದನೆ ನೀಡಿ, ಕಾಮಗಾರಿ ಆರಂಭಿಸಲು ಸಾಧ್ಯವಾಗಿರುವುದಿಲ್ಲ. ಪುತ್ತೂರು ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರ ನಿರ್ದೇಶನದಂತೆ ನೂತನ ಹೊರಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ ಪುತ್ತೂರು ಕಸಬಾ ಗ್ರಾಮ ಸೇರಿದಂತೆ ವಿವಿಧೆಡೆ ಸ್ಥಳಪರಿಶೀಲನೆ ಕೈಗೊಳ್ಳಲಾಗಿದ್ದು, ಸೂಕ್ತ ನಿವೇಶನ ಅಂತಿಮಗೊಳಿಸಿ, ಇಲಾಖೆಗೆ ಮಂಜೂರು ಮಾಡಿ, ಹಸ್ತಾಂತರಗೊಳಿಸಬೇಕಾಗಿದೆ.

--2)

ಆ)	ಜಾಗ ಗುರುತಿಸಿದ್ದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತ ಅನುದಾನ ಮೀಸಲಿಡಲಾಗಿದೆಯೇ;	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಗುರುತಿಸಿ, ಮಂಜೂರು ಮಾಡಿ, ಹಸ್ತಾಂತರಿಸಿದ ನಂತರ ಅನುದಾನದ ಲಭ್ಯತೆ ಆಧರಿಸಿ, ಕ್ರಿಯಾ ಯೋಜನೆಯಲ್ಲಿ ಅನುದಾನ ಮೀಸಲಿಡುವ ಬಗ್ಗೆ ಪರಿಗಣಿಸಲಾಗುವುದು.
ಇ)	ಮೀಸಲಿರಿಸದಿದ್ದಲ್ಲಿ ಯಾವಾಗ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು)	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವೈಎಸ್‌ಡಿ-ಇಬಿಬಿ/46/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2343

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಡಾ: ಅಜಯ್ ಧರ್ಮಸಿಂಗ್ (ಜೇವರ್ಗಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ಒಡೆತನದಲ್ಲಿರುವ ವೈಮಾನಿಕ ತರಬೇತಿ ಶಾಲೆಗಳ ಸಂಖ್ಯೆ ಎಷ್ಟು :	ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು, ಬೆಂಗಳೂರು ಇದು ರಾಜ್ಯ ಒಡೆತನದಲ್ಲಿರುವ ಏಕೈಕ ವೈಮಾನಿಕ ತರಬೇತಿ ಶಾಲೆಯಾಗಿರುತ್ತದೆ.
ಆ)	ಸದರಿ ಶಾಲೆಗಳು ಕಾರ್ಯಾಚರಣೆಯಲ್ಲಿವೆಯೇ ;	ಇಲ್ಲ; ಶಾಲೆಯ ತರಬೇತಿ ಹಾರಾಟ ಚಟುವಟಿಕೆಗಳು ನವೆಂಬರ್ 2019 ರಿಂದ ಮುಖ್ಯ ವಿಮಾನ ಬೋಧಕರ ಅಲಭ್ಯತೆಯಿಂದ ಸ್ಥಗಿತಗೊಂಡಿರುತ್ತದೆ.
ಇ)	ಹಾಗಿಲ್ಲದಿದ್ದಲ್ಲಿ, ಎಂದಿನಿಂದ ಕಾರ್ಯಾಚರಣೆ ಸ್ಥಗಿತಗೊಂಡಿದೆ ಹಾಗೂ ಇದಕ್ಕೆ ಕಾರಣಗಳೇನು ;	
ಈ)	ಸರ್ಕಾರ ಈ ಶಾಲೆಗಳನ್ನು ಪುನರಾರಂಭಕ್ಕೆ ಯಾವುದಾದರೂ ಕ್ರಮಗಳನ್ನು ಕೈಗೊಂಡಿದೆಯೇ ;	ನವದೆಹಲಿಯ ಡೈರೆಕ್ಟರ್ ಜನರಲ್ ಆಫ್ ಸೀವಿಲ್ ಏವಿಯೇಷನ್ ನಿಯಮದಂತೆ ವೈಮಾನಿಕ ತರಬೇತಿ ಶಾಲೆಯಲ್ಲಿ ಮುಖ್ಯ ವಿಮಾನ ಭೋಧಕರು, ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರು ಹಾಗೂ ಚೀಫ್ ಗ್ರೌಂಡ್ ಇನ್‌ಸ್ಟ್ರಕ್ಟರ್ ಹುದ್ದೆಗಳು ಭರ್ತಿಯಾದಲ್ಲಿ ಮಾತ್ರ ಶಾಲೆಯ ಹಾರಾಟ ತರಬೇತಿ ಚಟುವಟಿಯನ್ನು ನಡೆಸಬೇಕಾಗಿರುತ್ತದೆ. ಈ ಪೈಕಿ ಚೀಫ್ ಗ್ರೌಂಡ್ ಇನ್‌ಸ್ಟ್ರಕ್ಟರ್ ಹುದ್ದೆಯ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಸಹಮತಿ ನಿರೀಕ್ಷಿಸಲಾಗಿರುತ್ತದೆ. ಮುಖ್ಯ ವಿಮಾನ ಬೋಧಕರು ಮತ್ತು ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರ ಹುದ್ದೆಗಳಿಗೆ ಸರ್ಕಾರವು ನೇಮಕಾತಿ ಆದೇಶವನ್ನು ಹೊರಡಿಸಿದೆ. ಮುಖ್ಯ ವಿಮಾನ ಬೋಧಕರು ಮತ್ತು ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರ ನೇಮಕಾತಿಗೆ ನವದೆಹಲಿಯ ಡಿ.ಜಿ.ಸಿ.ಎ., ರವರಿಂದ ಪರವಾನಗಿಯನ್ನು ಪಡೆದು, ಶಾಲೆಯ ಹಾರಾಟ ತರಬೇತಿಯನ್ನು ಪುನರಾರಂಭಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ.
ಉ)	ಸದರಿ ತರಬೇತಿ ಶಾಲೆಯು ತರಬೇತಿಗಾಗಿ ಅವಶ್ಯವಿರುವ ಭೂ ಪ್ರದೇಶವನ್ನು ಹೊಂದಿದೆಯೇ ;	ಹೌದು.

--2)

ಊ)	ಹಾಗಿಲ್ಲದಿದ್ದಲ್ಲಿ, ಕೊರತೆಯಿರುವ ಭೂ ಪ್ರದೇಶ ಒದಗಿಸಲು ಕೈಗೊಂಡಿರುವ ಕ್ರಮಗಳೇನು ?	ತಾಂತ್ರಿಕ ಸಮಿತಿಯ ನಿರ್ಧಾರದಂತೆ ಶಾಲೆಯ ರನ್‌ವೇಯ ಪೂರ್ವ ದಿಕ್ಕಿನಲ್ಲಿ 170 ಮೀಟರ್‌ನಷ್ಟು ರನ್‌ವೇಯನ್ನು ಲಂಬೀಕರಿಸಲು ಸುಮಾರು 3 ಎಕರೆ 14 ಗುಂಟೆ ಖಾಸಗಿ ಜಮೀನನ್ನು ಭೂ ವಿನಿಮಯದ ಮೂಲಕ ಪಡೆಯಲು ಸರ್ಕಾರವು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 05/05/2016ರಂದು ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯು ಖಾಸಗಿ ಜಮೀನಿನ ಭೂ ಮಾಲೀಕರ ಜೊತೆಯಲ್ಲಿ ಹಲವು ಬಾರಿ ಸಭೆಯನ್ನು ನಡೆಸಿದ್ದು, ಭೂ ವಿನಿಮಯದ ಬಗ್ಗೆ ಒಮ್ಮತ ಮೂಡಿರುವುದಿಲ್ಲ. ತದನಂತರ, ಸರ್ಕಾರವು ಭೂ ವಿನಿಮಯದ ಪ್ರಕ್ರಿಯೆಯನ್ನು ಕೈಬಿಟ್ಟು ಅಗತ್ಯವಿರುವ ಭೂ ಖರೀದಿಗೆ ಅನುದಾನದ ಮೂಲವನ್ನು ಗುರುತಿಸಿ ಮುಂದುವರೆಯುವಂತೆ ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಇವರಿಗೆ ನಿರ್ದೇಶನ ನೀಡಿರುತ್ತದೆ.

ವೈಎಸ್‌ಡಿ-ಇಬಿಬಿ/47/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2358
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್. ಡಿ. (ಹೊಳೇನರಸೀಪುರ)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಹೊಳೇನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಮತ್ತು ಕಸಬಾ ಹೋಬಳಿ, ಹಾಸನ ತಾಲ್ಲೂಕು ದುದ್ದ ಮತ್ತು ಶಾಂತಿಗ್ರಾಮ ಹೋಬಳಿ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಚಿಲ್ಲರೆ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಳೇನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೇನರಸೀಪುರ ತಾಲ್ಲೂಕು ಹಳೇಕೋಟೆ ಮತ್ತು ಕಸಬಾ ಹೋಬಳಿ, ಹಾಸನ ತಾಲ್ಲೂಕು ದುದ್ದ ಮತ್ತು ಶಾಂತಿಗ್ರಾಮ ಹೋಬಳಿ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳದಲ್ಲಿ ಸೇವನೆಗಾಗಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಈ ರೀತಿ ಗ್ರಾಮಗಳಲ್ಲಿ ಅಬಕಾರಿ ಇಲಾಖಾಧಿಕಾರಿಗಳು ಶಾಮೀಲಾಗಿ ಚಿಲ್ಲರೆ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವುಂಟಾಗುತ್ತಿರುವುದು ನಿಜವೇ;	ಅಬಕಾರಿ ಇಲಾಖೆಯ ಯಾವುದೇ ಅಧಿಕಾರಿಗಳು ಅಕ್ರಮ ಮದ್ಯ ಮಾರಾಟದಲ್ಲಿ ಶಾಮೀಲಾಗಿರುವುದು ಕಂಡುಬಂದಿರುವುದಿಲ್ಲ. ಅಕ್ರಮವಾಗಿ ಅನಧಿಕೃತ ಸ್ಥಳದಲ್ಲಿ ಮದ್ಯ ಮಾರಾಟವಾಗುತ್ತಿರುವಂತಹ ಮದ್ಯವು ತೆರಿಗೆ ಪಾವತಿಸಲಾದ ಮದ್ಯವಾಗಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ರೀತಿ ಮೇಲ್ಕಂಡ ಹೋಬಳಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಚಿಲ್ಲರೆ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)?	ಇಲಾಖೆಯು ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ, ಈ ಕುರಿತು ಪೊಲೀಸ್ ಇಲಾಖೆಯೂ ಸಹ ನಿರಂತರ

		ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 2 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ಗಸ್ತು ಕಾರ್ಯ ನಡೆಸಿ, ಅಕ್ರಮವಾಗಿ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸಲು ನಿರ್ದೇಶಿಸಲಾಗಿದೆ.

ಆಇ 24 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2343

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಡಾ: ಅಜಯ್ ಧರ್ಮಸಿಂಗ್ (ಜೇವರ್ಗಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ಒಡೆತನದಲ್ಲಿರುವ ವೈಮಾನಿಕ ತರಬೇತಿ ಶಾಲೆಗಳ ಸಂಖ್ಯೆ ಎಷ್ಟು :	ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು, ಬೆಂಗಳೂರು ಇದು ರಾಜ್ಯ ಒಡೆತನದಲ್ಲಿರುವ ಏಕೈಕ ವೈಮಾನಿಕ ತರಬೇತಿ ಶಾಲೆಯಾಗಿರುತ್ತದೆ.
ಆ)	ಸದರಿ ಶಾಲೆಗಳು ಕಾರ್ಯಾಚರಣೆಯಲ್ಲಿವೆಯೇ ;	ಇಲ್ಲ; ಶಾಲೆಯ ತರಬೇತಿ ಹಾರಾಟ ಚಟುವಟಿಕೆಗಳು ನವೆಂಬರ್ 2019 ರಿಂದ ಮುಖ್ಯ ವಿಮಾನ ಬೋಧಕರ ಅಲಭ್ಯತೆಯಿಂದ ಸ್ಥಗಿತಗೊಂಡಿರುತ್ತದೆ.
ಇ)	ಹಾಗಿಲ್ಲದಿದ್ದಲ್ಲಿ, ಎಂದಿನಿಂದ ಕಾರ್ಯಾಚರಣೆ ಸ್ಥಗಿತಗೊಂಡಿದೆ ಹಾಗೂ ಇದಕ್ಕೆ ಕಾರಣಗಳೇನು ;	
ಈ)	ಸರ್ಕಾರ ಈ ಶಾಲೆಗಳನ್ನು ಪುನರಾರಂಭಕ್ಕೆ ಯಾವುದಾದರೂ ಕ್ರಮಗಳನ್ನು ಕೈಗೊಂಡಿದೆಯೇ ;	ನವದೆಹಲಿಯ ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್ ನಿಯಮದಂತೆ ವೈಮಾನಿಕ ತರಬೇತಿ ಶಾಲೆಯಲ್ಲಿ ಮುಖ್ಯ ವಿಮಾನ ಭೋಧಕರು, ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರು ಹಾಗೂ ಚೀಫ್ ಗ್ರೌಂಡ್ ಇನ್‌ಸ್ಟ್ರಕ್ಟರ್ ಹುದ್ದೆಗಳು ಭರ್ತಿಯಾದಲ್ಲಿ ಮಾತ್ರ ಶಾಲೆಯ ಹಾರಾಟ ತರಬೇತಿ ಚಟುವಟಿಯನ್ನು ನಡೆಸಬೇಕಾಗಿರುತ್ತದೆ. ಈ ಪೈಕಿ ಚೀಫ್ ಗ್ರೌಂಡ್ ಇನ್‌ಸ್ಟ್ರಕ್ಟರ್ ಹುದ್ದೆಯ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಸಹಮತಿ ನಿರೀಕ್ಷಿಸಲಾಗಿರುತ್ತದೆ. ಮುಖ್ಯ ವಿಮಾನ ಬೋಧಕರು ಮತ್ತು ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರ ಹುದ್ದೆಗಳಿಗೆ ಸರ್ಕಾರವು ನೇಮಕಾತಿ ಆದೇಶವನ್ನು ಹೊರಡಿಸಿದೆ. ಮುಖ್ಯ ವಿಮಾನ ಬೋಧಕರು ಮತ್ತು ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರ ನೇಮಕಾತಿಗೆ ನವದೆಹಲಿಯ ಡಿ.ಜಿ.ಸಿ.ಎ., ರವರಿಂದ ಪರವಾನಗಿಯನ್ನು ಪಡೆದು, ಶಾಲೆಯ ಹಾರಾಟ ತರಬೇತಿಯನ್ನು ಪುನರಾರಂಭಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ.
ಉ)	ಸದರಿ ತರಬೇತಿ ಶಾಲೆಯು ತರಬೇತಿಗಾಗಿ ಅವಶ್ಯವಿರುವ ಭೂ ಪ್ರದೇಶವನ್ನು ಹೊಂದಿದೆಯೇ ;	ಹೌದು.

--2)

ಊ)	ಹಾಗಿಲ್ಲದಿದ್ದಲ್ಲಿ, ಕೊರತೆಯಿರುವ ಭೂ ಪ್ರದೇಶ ಒದಗಿಸಲು ಕೈಗೊಂಡಿರುವ ಕ್ರಮಗಳೇನು ?	ತಾಂತ್ರಿಕ ಸಮಿತಿಯ ನಿರ್ಧಾರದಂತೆ ಶಾಲೆಯ ರನ್‌ವೇಯ ಪೂರ್ವ ದಿಕ್ಕಿನಲ್ಲಿ 170 ಮೀಟರ್‌ನಷ್ಟು ರನ್‌ವೇಯನ್ನು ಲಂಬೀಕರಿಸಲು ಸುಮಾರು 3 ಎಕರೆ 14 ಗುಂಟೆ ಖಾಸಗಿ ಜಮೀನನ್ನು ಭೂ ವಿನಿಮಯದ ಮೂಲಕ ಪಡೆಯಲು ಸರ್ಕಾರವು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 05/05/2016ರಂದು ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯು ಖಾಸಗಿ ಜಮೀನಿನ ಭೂ ಮಾಲೀಕರ ಜೊತೆಯಲ್ಲಿ ಹಲವು ಬಾರಿ ಸಭೆಯನ್ನು ನಡೆಸಿದ್ದು, ಭೂ ವಿನಿಮಯದ ಬಗ್ಗೆ ಒಮ್ಮತ ಮೂಡಿರುವುದಿಲ್ಲ. ತದನಂತರ, ಸರ್ಕಾರವು ಭೂ ವಿನಿಮಯದ ಪ್ರಕ್ರಿಯೆಯನ್ನು ಕೈಬಿಟ್ಟು ಅಗತ್ಯವಿರುವ ಭೂ ಖರೀದಿಗೆ ಅನುದಾನದ ಮೂಲವನ್ನು ಗುರುತಿಸಿ ಮುಂದುವರೆಯುವಂತೆ ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಇವರಿಗೆ ನಿರ್ದೇಶನ ನೀಡಿರುತ್ತದೆ.

ವೈಎಸ್‌ಡಿ-ಇಬಿಬಿ/47/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2346
ಸದಸ್ಯರ ಹೆಸರು: ಶ್ರೀ ಬಸನಗೌಡ.ಆರ್.ಪಾಟೀಲ್ (ಯತ್ನಾಳ್)
ಉತ್ತರಿಸಬೇಕಾದವರು: ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸಬೇಕಾದ ದಿನಾಂಕ: 16.03.2021

ಪ್ರಶ್ನೆ ಸಂಖ್ಯೆ	ಪ್ರಶ್ನೆ	ಉತ್ತರ
ಅ.	ಎ.ಸಿ.ಬಿ. ಅಸ್ತಿತ್ವಕ್ಕೆ ಬಂದಿದ್ದು ಯಾವಾಗ; ಎ.ಸಿ.ಬಿ. ಅಸ್ತಿತ್ವಕ್ಕೆ ಬರಲು ಕಾರಣಗಳೇನು; ಎ.ಸಿ.ಬಿ.ಗೆ ಸರ್ಕಾರ ನೀಡಿರುವ ಅಧಿಕಾರಗಳೇನು; (ವಿವರ ನೀಡುವುದು).	ಭ್ರಷ್ಟಾಚಾರ ನಿಗ್ರಹ ದಳವು ದಿನಾಂಕ:14.03.2016 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ರಾಜ್ಯದಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ಹಾಗೂ ಭ್ರಷ್ಟಾಚಾರ ತಡೆ ಅಧಿನಿಯಮ, 1988ನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಮತ್ತು ಪ್ರಕರಣಗಳನ್ನು ಸ್ವತಂತ್ರವಾಗಿ ತನಿಖೆ ನಡೆಸುವ ಉದ್ದೇಶದಿಂದ ಎಸಿಬಿಯನ್ನು ಅಸ್ತಿತ್ವಕ್ಕೆ ತರಲಾಗಿರುತ್ತದೆ. ಭ್ರಷ್ಟಾಚಾರ ನಿಗ್ರಹ ದಳದ ಸೃಜನೆ ಆದೇಶದಲ್ಲಿ ನೀಡಿರುವ ಅಧಿಕಾರಗಳೊಂದಿಗೆ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ-1988, ದಂಡ ಪ್ರಕ್ರಿಯಾ ಸಂಹಿತೆ-1973 ಹಾಗೂ ಇನ್ನಿತರ ತತ್ಸಂಭಂಧಿತ ಕಾನೂನುಗಳ ಪ್ರಕಾರ ಕ್ರಮ ಕೈಗೊಳ್ಳುವ ಅಧಿಕಾರವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ನೀಡಲಾಗಿದೆ.
ಆ.	ಎ.ಸಿ.ಬಿ. ವಿಸರ್ಜಿಸಿ ಪೂರ್ಣ ಅಧಿಕಾರವನ್ನು ಲೋಕಾಯುಕ್ತಕ್ಕೆ ಮರಳಿ ನೀಡುವ ಬಗ್ಗೆ ಸರ್ಕಾರದ ನಿಲುವೇನು?	ಭ್ರಷ್ಟಾಚಾರ ನಿಗ್ರಹ ದಳ ಸೃಜನೆ ಆದೇಶವನ್ನು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿರುವುದರಿಂದ ಪ್ರಕರಣವು ಇತ್ಯರ್ಥಗೊಂಡ ನಂತರ ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು.
ಇ.	ಎ.ಸಿ.ಬಿ. ಅಸ್ತಿತ್ವಕ್ಕೆ ಬಂದ ನಂತರ ಅಥವಾ ಕಳೆದ ಮೂರು ವರ್ಷಗಳಿಂದ ಈವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ; ಅವು ಯಾವುವು; (ದೂರುದಾರರ ಮತ್ತು ಫಿರ್ಯಾದುದಾರರ ಸಂಪೂರ್ಣ ವಿವರವನ್ನು ಪ್ರಕರಣವಾರು ನೀಡುವುದು)	ಕಳೆದ ಮೂರು ವರ್ಷಗಳಿಂದ ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಒಟ್ಟು 1134 ಪ್ರಕರಣಗಳು ದಾಖಲಾಗಿರುತ್ತವೆ. ಅವುಗಳ ಸಂಪೂರ್ಣ ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಲಾಗಿದೆ.

-- 2 -)

ಈ.	ಈ ಪೈಕಿ ಎಷ್ಟು ದೂರುಗಳಿಗೆ ಎ.ಸಿ.ಬಿ.(ಎಫ್.ಐ.ಆರ್) ದಾಖಲಿಸ ಲಾಗಿದೆ; ಈ ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ; ಬಿ ರಿಪೋರ್ಟ್ ಹಾಕಲಾದ ಪ್ರಕರಣಗಳು ಯಾವುವು; (ಕಳೆದ ಮೂರು ವರ್ಷಗಳ ಪ್ರಕರಣವಾರು ವಿವರ ಒದಗಿಸುವುದು).	ಕಳೆದ ಮೂರು ವರ್ಷಗಳಿಂದ ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಸ್ವೀಕೃತವಾಗಿರುವ ದೂರುಗಳನ್ನು ಪರಿಶೀಲಿಸಿ 1134 ಪ್ರಕರಣಗಳಲ್ಲಿ ಎಫ್.ಐ.ಆರ್. ಧಾಖಲಿಸಲಾಗಿದೆ. ಪ್ರಕರಣಗಳು ವಿವಿಧ ತನಿಖಾ ಹಂತದಲ್ಲಿವೆ. ಈ ಪೈಕಿ 31 ಪ್ರಕರಣಗಳಲ್ಲಿ ಬಿ ರಿಪೋರ್ಟ್ ಹಾಕಲಾಗಿದ್ದು, ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಉ.	ಎ.ಸಿ.ಬಿ.ಈವರೆಗೆ ಎಷ್ಟು ಸರ್ಕಾರಿ ಅಧಿಕಾರಿಗಳ/ಸಿಬ್ಬಂದಿಗಳ ಮನೆ ಹಾಗೂ ಕಛೇರಿ ಮೇಲೆ ದಾಳಿ ನಡೆಸಿದೆ; ದಾಳಿ ವೇಳೆ ವಶಪಡಿಸಿಕೊಳ್ಳಲಾದ ಹಣ ಹಾಗೂ ಇತರೆ ಆಸ್ತಿ-ಪಾಸ್ತಿ ಎಷ್ಟು; (ಅಧಿಕಾರಿಗಳ ಹುದ್ದೆ ಸಹಿತ ಕಳೆದ ಮೂರು ವರ್ಷಗಳ ಸಂಪೂರ್ಣ ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ಭ್ರಷ್ಟಾಚಾರ ನಿಗ್ರಹ ದಳವು ಈವರೆಗೆ 191 ಸರ್ಕಾರಿ ಅಧಿಕಾರಿಗಳ/ಸಿಬ್ಬಂದಿಗಳ ಮನೆ ಹಾಗೂ ಕಛೇರಿಗಳ ಮೇಲೆ ದಾಳಿ ನಡೆಸಿದೆ; ದಾಳಿ ನಡೆಸಿದ ಎಲ್ಲಾ 191 ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಎಫ್.ಐ.ಆರ್ ದಾಖಲಿಸಲಾಗಿದ್ದು, ಪ್ರಕರಣಗಳು ವಿವಿಧ ತನಿಖಾ ಹಂತದಲ್ಲಿವೆ. ದಾಳಿ ವೇಳೆ ವಶಪಡಿಸಿಕೊಳ್ಳಲಾದ ಹಣ ಹಾಗೂ ಇತರೆ ಆಸ್ತಿ-ಪಾಸ್ತಿ ಇತರೆ ಪ್ರಕರಣವಾರು ಸಂಪೂರ್ಣ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.
ಊ.	ಈ ಪೈಕಿ ಎಷ್ಟು ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಎಫ್.ಐ.ಆರ್ ದಾಖಲಾಗಿದೆ; ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ? (ಪ್ರಕರಣವಾರು ಕಳೆದ ಮೂರು ವರ್ಷಗಳ ಸಂಪೂರ್ಣ ವಿವರ ನೀಡುವುದು).	

ಕಡತ ಸಂಖ್ಯೆ.ಸಿಆಸುಇ 11 ಎಸಿಬಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2358
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್. ಡಿ. (ಹೊಳೇನರಸೀಪುರ)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಹೊಳೇನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಮತ್ತು ಕಸಬಾ ಹೋಬಳಿ, ಹಾಸನ ತಾಲ್ಲೂಕು ದುದ್ದ ಮತ್ತು ಶಾಂತಿಗ್ರಾಮ ಹೋಬಳಿ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಚಿಲ್ಲರೆ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಳೇನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೇನರಸೀಪುರ ತಾಲ್ಲೂಕು ಹಳೇಕೋಟೆ ಮತ್ತು ಕಸಬಾ ಹೋಬಳಿ, ಹಾಸನ ತಾಲ್ಲೂಕು ದುದ್ದ ಮತ್ತು ಶಾಂತಿಗ್ರಾಮ ಹೋಬಳಿ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳದಲ್ಲಿ ಸೇವನೆಗಾಗಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಈ ರೀತಿ ಗ್ರಾಮಗಳಲ್ಲಿ ಅಬಕಾರಿ ಇಲಾಖಾಧಿಕಾರಿಗಳು ಶಾಮೀಲಾಗಿ ಚಿಲ್ಲರೆ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವುಂಟಾಗುತ್ತಿರುವುದು ನಿಜವೇ;	ಅಬಕಾರಿ ಇಲಾಖೆಯ ಯಾವುದೇ ಅಧಿಕಾರಿಗಳು ಅಕ್ರಮ ಮದ್ಯ ಮಾರಾಟದಲ್ಲಿ ಶಾಮೀಲಾಗಿರುವುದು ಕಂಡುಬಂದಿರುವುದಿಲ್ಲ. ಅಕ್ರಮವಾಗಿ ಅನಧಿಕೃತ ಸ್ಥಳದಲ್ಲಿ ಮದ್ಯ ಮಾರಾಟವಾಗುತ್ತಿರುವಂತಹ ಮದ್ಯವು ತೆರಿಗೆ ಪಾವತಿಸಲಾದ ಮದ್ಯವಾಗಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ರೀತಿ ಮೇಲ್ಕಂಡ ಹೋಬಳಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಚಿಲ್ಲರೆ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)?	ಇಲಾಖೆಯು ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ, ಈ ಕುರಿತು ಪೊಲೀಸ್ ಇಲಾಖೆಯೂ ಸಹ ನಿರಂತರ

		ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 2 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ಗಸ್ತು ಕಾರ್ಯ ನಡೆಸಿ, ಅಕ್ರಮವಾಗಿ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸಲು ನಿರ್ದೇಶಿಸಲಾಗಿದೆ.

ಆಇ 24 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2359
2.	ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)
3.	ಉತ್ತರಿಸುವ ದಿನಾಂಕ	:	16-03-2021
4.	ಉತ್ತರಿಸುವವರು	:	ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದಲ್ಲಿ ವಾಹನಗಳ ದಟ್ಟ ಸಾಂದ್ರತೆಯನ್ನು ತಗ್ಗಿಸಲು 107.00 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಗಳನ್ನು ನಿರ್ಮಿಸಲು ಹಿಂದಿನ ಮೈತ್ರಿ ಸರ್ಕಾರಗಳಲ್ಲಿ ನಿರ್ಧರಿಸಿದ್ದು ನಿಜವೇ;	ಹೌದು.
ಆ	ಈ ಪೈಕಿ ನಾರ್ತ್-ಸೌತ್ ಕಾರಿಡಾರ್ ಉದ್ದ 27 ಕಿ.ಮೀ ಅಂದಾಜು ಮೊತ್ತ ರೂ.9,300.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ಟೆಂಡರ್ ಕರೆಯಲಾಗಿರುವುದು ನಿಜವೇ;	ಹೌದು. ಸರ್ಕಾರದ ಆದೇಶ ಸಂಖ್ಯೆ: ಲೋಇ/ಇಎಪಿ/2018(P1), ದಿನಾಂಕ: 02-03-2019 ರಂತೆ ಮೊದಲನೇ ಹಂತದಲ್ಲಿ ನಾರ್ತ್-ಸೌತ್ ಕಾರಿಡಾರ್ ಅನ್ನು ಮೂರು ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳಿಸಲು ಅಧಿಸೂಚನೆ ಸಂಖ್ಯೆ: KRDCL/IFB/2018-19/23 ದಿನಾಂಕ: 02-03-2019 ರಲ್ಲಿ ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ-ಕಂಟೋನ್‌ಮೆಂಟ್-ರಿಚ್‌ಮಂಡ್ ಸರ್ಕಲ್-ಶಾಂತಿನಗರ ಬಸ್‌ನಿಲ್ದಾಣ- ಬಾಷ್ ಆವರಣ ಮೂಲಕ ಹೊಸೂರು ರಸ್ತೆ ಮುಖಾಂತರ ಸಿಲ್ಕ್ ಬೋರ್ಡ್ ವರೆಗೆ 21.55 ಕಿ.ಮೀ ಉದ್ದಕ್ಕೆ ಎಲಿವೇಟೇಡ್ ಕಾರಿಡಾರ್ ನಿರ್ಮಿಸಲು ರೂ.6,855 ಕೋಟಿ ಮೊತ್ತಕ್ಕೆ (ಭೂಸ್ವಾಧೀನ ಮತ್ತು ಯುಟಿಲಿಟಿ ಸ್ಥಳಾಂತರ ಮೊತ್ತ ಸೇರಿ) 2019-20ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ನಿರ್ಮಾಣ ಮೊತ್ತ ರೂ.4612.49 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಪರಿಷ್ಕೃತ ಕೊನೆಯ ದಿನಾಂಕವು 24-06-2019 ಎಂದು ನಿಗದಿಪಡಿಸಲಾಗಿತ್ತು.
ಇ	ಟೆಕ್ನಿಕಲ್ ಬಿಡ್‌ಗಳನ್ನು ತೆರೆದು ಅರ್ಹ ಗುತ್ತಿಗೆದಾರರುಗಳ ಪಟ್ಟಿಯನ್ನು ಸಹ ತಯಾರಿಸಿದ್ದು ನಿಜವೇ;	ದಿನಾಂಕ 27-03-2019 ರಂದು ನಡೆದ ಬಿಡ್ ಪೂರ್ವ ಸಭೆಯಲ್ಲಿ ಪ್ರತಿಷ್ಠಿತ 16 ಸಂಸ್ಥೆಗಳು ಸ್ಪರ್ಧಾತ್ಮಕವಾಗಿ ಭಾಗವಹಿಸಿರುತ್ತಾರೆ. ಪೂರ್ವ ನಿಗದಿತ ದಿನಾಂಕದಂತೆ ತಾಂತ್ರಿಕ ಬಿಡ್‌ಗಳನ್ನು ತೆರೆಯಾಲಾಗಿದ್ದು, ಟೆಂಡರ್‌ನಲ್ಲಿ ಈ ಕೆಳಕಂಡ ಬಿಡ್‌ದಾರರು ಟೆಂಡರ್ ಸಲ್ಲಿಸಿದ್ದು, ಪ್ಯಾಕೇಜ್‌ವಾರು ವಿವರಗಳು ಈ ಕೆಳಕಂಡಂತಿವೆ;

. . .2/-

<table>
<tr><td></td><td>ಅದರಲ್ಲಿ ಎಷ್ಟು ಜನ ಅರ್ಹ ಬಿಡ್ಡುದಾರರು ಭಾಗವಹಿಸಿದ್ದರು; ಎಷ್ಟು ಜನ ಅರ್ಹತೆ ಹೊಂದಿದ್ದರು; (ಸಂಪೂರ್ಣ ಮಾಹಿತಿ ನೀಡುವುದು);</td><td>
<table>
<tr><th>Sl. No</th><th>Name of work</th><th>Name of Bidders participated</th></tr>
<tr><td>1</td><td>Package-1 (NSP-1): From Baptists Hospital to JC Nagar on Jayamahal Road via Mekhri circle.</td><td>a) M/s. Larsen and Toubro Limited
b) M/s Dilip Buildcon Ltd – Longjian Road and Bridge Co.Ltd., (JV)</td></tr>
<tr><td>2</td><td>Package-2 (NSP-2): From JC Nagar to Shanti Nagar Bus Station via Vittal Malya Road.</td><td>a) M/s. Larsen and Toubro Limited
b) M/s. Hindustan Construction Co Ltd. -KEC International Ltd. (JV)</td></tr>
<tr><td>3</td><td>Package-3 (NSP-3): From Shanthi Nagar Bus Station to Central Silk Board Junction via Adugodi.</td><td>a) M/s. Larsen and Toubro Limited
b) M/s. Hindustan Construction Co Ltd. -KEC International Ltd. (JV)</td></tr>
</table>
ಮೇಲೆ ವಿವರಿಸಿರುವ ಮೂರು ಪ್ಯಾಕೇಜ್‌ಗಳಲ್ಲಿ ಪ್ರತಿ ಪ್ಯಾಕೇಜ್‌ಗೆ ಇಬ್ಬರು ಬಿಡ್‌ದಾರರು ಟೆಂಡರ್ ಸಲ್ಲಿಸಿರುತ್ತಾರೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 48720/2014 (PIL) ದಾಖಲಾಗಿದ್ದು, ಸದರಿ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವುದರಿಂದ ನಂತರದ ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.
</td></tr>
<tr><td>ಈ</td><td>ಈ ಬಗ್ಗೆ ಪ್ರಸ್ತುತ ಸರ್ಕಾರವು ಈ ಕಾಮಗಾರಿಗಳನ್ನು ರದ್ದು ಗೊಳಿಸಿರುವುದು ನಿಜವೇ;</td><td>ಹೌದು.</td></tr>
</table>

ಸಂಖ್ಯೆ: ನಅಇ 71 ಎಂಎನ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2361
2. ಸದಸ್ಯರ ಹೆಸರು : ಶ್ರೀ ಶಿವಾನಂದ ಪಾಟೀಲ್
3. ಉತ್ತರಿಸಬೇಕಾದ ದಿನಾಂಕ : 16-03-2021
4. ಉತ್ತರಿಸುವವರು : ಸಣ್ಣ ನೀರಾವರಿ ಸಚಿವರು.

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ	ಸಣ್ಣ ನೀರಾವರಿ ಇಲಾಖೆಯಿಂದ ವಿಜಯಪುರ ಬೇಗಂ ತಲಾಬ ಅಭಿವೃದ್ಧಿಗಾಗಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ ಮತ್ತು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ವರ್ಷವಾರು ಒದಗಿಸಲಾದ ಅನುದಾನದ ಮಾಹಿತಿ ನೀಡುವುದು)	ವಿಜಯಪುರ ಬೇಗಂ ತಲಾಬ್ ಕೆರೆಯ ಅಭಿವೃದ್ಧಿಗಾಗಿ ವರ್ಷವಾರು ಮಂಜೂರು ಮಾಡಲಾದ ಅನುದಾನ. ಬಿಡುಗಡೆಯಾದ ಅನುದಾನ, ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ
ಆ	ಸಣ್ಣ ನೀರಾವರಿ ಇಲಾಖೆಯಿಂದ ಬೇಗಂ ತಲಾಬಿನಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ;	
ಇ	ಮಂಜೂರು ಮಾಡಲಾದ ಕಾಮಗಾರಿಗಳಲ್ಲಿ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ; ಯಾವ ಕಾಮಗಾರಿಗಳು ಪ್ರಗತಿಯಲ್ಲಿವೆ; ಯಾವ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ;	
ಈ	ಕಾಮಗಾರಿಗಳಲ್ಲಿ ಸಾಧಿಸಲಾಗಿರುವ ಆರ್ಥಿಕ ಮತ್ತು ಭೌತಿಕ ಪ್ರಗತಿ ಏನು;	
ಉ	ಕಾಮಗಾರಿಗಳ ಪ್ರಗತಿಯು ಕುಂಠಿತವಾಗಿದ್ದಲ್ಲಿ ಕಾರಣಗಳೇನು?	2020-21ನೇ ಸಾಲಿನಲ್ಲಿ ಬೇಗಂ ತಲಾಬ ಕೆರೆ ಅಭಿವೃದ್ಧಿ ಕಾಮಗಾರಿಯು ರೂ.50.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿರುತ್ತದೆ. ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಸಂಖ್ಯೆ:ಎಂಐಡಿ 153 ಎಲ್ಎಕ್ಯೂ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು

ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2361 ಕ್ಕೆ ಅನುಬಂಧ

ವಿಜಯಪುರ ನಗರದ ಬೇಗಂ ತಲಾಬ್ (ಕೆರೆ) ಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಅಭಿವೃದ್ಧಿಪಡಿಸಿರುವ ವಿವರ

ಕ್ರ. ಸಂ.	ವರ್ಷ	ಲೆಕ್ಕಶೀರ್ಷಿಕೆ	ಅಂದಾಜು ಮೊತ್ತ	ವೆಚ್ಚ	ಸಾಧಿಸಿದ ಭೌತಿಕ ಪ್ರಗತಿ	ಷರಾ
1	2008-09	ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ)	330.00	338.58	ಕೆರೆ ಒಡ್ಡಿನ (ಗೈಡ್ ಬಂಡ್) ಸಬಲೀಕರಣ, ಕೆರೆಯ ಕೋಡಿಯ ಸುಧಾರಣೆ, ಕೆರೆಯ ಸುತ್ತಲೂ ಮುಳ್ಳಿನ ತಂತಿಯ ಬೇಲಿ, ವಾಯು ವಿಹಾರ ಪಥ (ಜಾಗಿಂಗ್ ಟ್ರ್ಯಾಕ್), ಕೆರೆಯ ಹೂಳೆತ್ತುವುದು ಹಾಗೂ ಸಿಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.	ಪೂರ್ಣಗೊಂಡಿದೆ
2	2011-12	13ನೇ ಹಣಕಾಸು ಯೋಜನೆ	500.00	437.44	ಚೈನ್ ಲಿಂಕ್ ಫೆನ್ಸಿಂಗ್. ತೆರೆದ ಸಭಾಂಗಣ (Amphi Theatre), ಶೌಚಾಲಯ, ಪ್ರವೇಶ ದ್ವಾರ, ಅಪ್ರೋಚ್ ರಸ್ತೆ ಹಾಗೂ ಸಿಡಿ ನಿರ್ಮಾಣ, ಕೆರೆಯ ಸುತ್ತಲೂ ಏರಿ, ಸ್ಲೂಯಿಸ್ ಹತ್ತಿರದ ಏರಿ ನಿರ್ಮಾಣ, ಪಿಚ್ಚಿಂಗ್, ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.	ಪೂರ್ಣಗೊಂಡಿದೆ
				38.33	ಕಲಾಯಿ (galvanized) ಅಷ್ಟಭುಜಾಕೃತಿಯುಳ್ಳ 9 ಮೀ. ಮತ್ತು 10 ಮೀ. ಉದ್ದದ ಕಂಬಗಳನ್ನು, 150 ವ್ಯಾಟಿನ ಮತ್ತು 250 ವ್ಯಾಟಿನ ಹೈ ಪ್ರೆಶರ್‌ವುಳ್ಳ ಮೆಟಲ್ ಸ್ಟ್ರೀಟ್ ಲೈಟ್‌ಗಳನ್ನು, 20 ಮೀ. ಉದ್ದದ ಹೈಮಾಸ್ಟ್ ಲೈಟಗಳನ್ನು, 9ಮೀ. ಉದ್ದದ ಆರ್.ಸಿ.ಸಿ. ಕಂಬಗಳನ್ನು, ರ್‍ಯಾಬಿಟ್ ಕಂಡಕ್ಟರ್ ಹಾಗೂ 100 ಕೆ.ವ್ಹಿ.ಎ.ನ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾರ್ಯ ಕೈಗೊಳ್ಳಲಾಗಿದೆ.	ಪೂರ್ಣಗೊಂಡಿದೆ
3	2014-15	ಕೆರೆ ಅಭಿವೃದ್ಧಿ ನಾಡಿನ ಶ್ರೇಯೋಭಿವೃದ್ಧಿ	100.00	81.73	ಸಿಲ್ಟ್ ಟ್ರ್ಯಾಪ್, ಸಿಡಿ ನಿರ್ಮಾಣ, ಡ್ರೇನ್ ನಿರ್ಮಾಣ, ಕಾಬಲ್ ಸ್ಟೋನ್ ವಾಕಿಂಗ್ ಟ್ರ್ಯಾಕ್ ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.	ಪೂರ್ಣಗೊಂಡಿದೆ
4	2015-16	ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ)	54.48	54.19	ಸಿ.ಡಿ.ನಿರ್ಮಾಣ, ವಾಕ್-ವೇ ನಿರ್ಮಾಣ, ಚೈನ್ ಲಿಂಕ್ ಫೆನ್ಸಿಂಗ್‌ಗೆ ಬಣ್ಣ ಹಚ್ಚುವುದು, ಪ್ರವೇಶ ದ್ವಾರಕ್ಕೆ ಗೇಟ್ ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.	ಪೂರ್ಣಗೊಂಡಿದೆ
5	2020-21	4702-ಪ್ರಧಾನ ಕಾಮಗಾರಿಗಳು	50.00	0.00	-	ಮಣ್ಣಿನ ಏರಿ, ಪಿಚ್ಚಿಂಗ್ ಮತ್ತು ಕೋಡಿಯ ಪುನರುಜ್ಜೀವನ ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2381
2. ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ.
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ.	ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕೆರೆಗಳೆಷ್ಟು (ಗ್ರಾಮವಾರು, ಸರ್ವೆ ನಂಬರ್ ಹಾಗೂ ವಿಸ್ತೀರ್ಣದೊಂದಿಗೆ ಸಂಪೂರ್ಣ ವಿವರ ಒದಗಿಸುವುದು)	ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ. ಜನಪ್ರತಿನಿಧಿಗಳ ಶಿಫಾರಸ್ಸಿನ ಮೇರೆಗೆ ನೀರಾವರಿಯೇತರ (ದೇವಸ್ಥಾನದ ಕೆರೆ) "4702 ಕೆರೆಗಳ ಆಧುನೀಕರಣ" ಲೆಕ್ಕಶೀರ್ಷಿಕೆಯಡಿಯಲ್ಲಿ 2017-18ನೇ ಸಾಲಿನಲ್ಲಿ ರೂ.45.00 ಲಕ್ಷ ಅಂದಾಜು ಮೊತ್ತದಲ್ಲಿ ಒಂದು ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ. 2018-19ನೇ ಸಾಲಿನಲ್ಲಿ ರೂ.80.00 ಲಕ್ಷ ಅಂದಾಜು ಮೊತ್ತದಲ್ಲಿ ಒಂದು ಕಾಮಗಾರಿ ಮಂಜೂರಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ.	ಈ ಕೆರೆಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಿಂದ ಮಂಜೂರಾದ ಅನುದಾನವೆಷ್ಟು; ಮಂಜೂರಾದ ಅನುದಾನದಲ್ಲಿ ಯಾವ ಯಾವ ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ? (ಸಂಪೂರ್ಣ ವಿವರ ಒದಗಿಸುವುದು)	

ಸಂಖ್ಯೆ: MID 134LAQ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. ಇವರ ಪ್ರಶ್ನೆ ಸಂಖ್ಯೆ: 2381ಕ್ಕೆ ಅನುಬಂಧ

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವರ್ಷ	ಜಿಲ್ಲೆ	ತಾಲೂಕು	ವಿಧಾನ ಸಭಾ ಕ್ಷೇತ್ರ	ಲೆಕ್ಕ ಶೀರ್ಷಿಕೆ	ಅಭಿವೃದ್ಧಿಗೊಳಿಸಿದ ಕೆರೆಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ		ಷರಾ
									ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	2	3	4	5	6	7	8	9	10	11	
1	2017-18	ಉಡುಪಿ	ಕುಂದಾಪುರ	ಬೈಂದೂರು	4702-00-101-1-07-139 ಕೆರೆಗಳ ಆಧುನೀಕರಣ	ಬಿಜೂರು ಗ್ರಾಮದ ಕಂಚಿಕಾನ್ ವರಸಿದ್ಧಿ ವಿನಾಯಕ ದೇವಸ್ಥಾನದ ಹತ್ತಿರವಿರುವ ಕೆರೆ ಅಭಿವೃದ್ಧಿ ಕಾಮಗಾರಿ.	45.00	43.70	ಪೂರ್ಣಗೊಂಡಿದೆ	-	
							45.00	43.70			
2	2018-19	ಉಡುಪಿ	ಕುಂದಾಪುರ	ಬೈಂದೂರು	4702-00-101-1-07-139 ಕೆರೆಗಳ ಆಧುನೀಕರಣ	ಕನ್ಯಾನ ಗ್ರಾಮದ ಗುಬ್ಕೋಣು ಶ್ರೀ ವಾಸುಕೀ ದೇವಸ್ಥಾನದ ಹತ್ತಿರ ಇರುವ ಸಾರ್ವಜನಿಕ ಕೆರೆಯ ಅಭಿವೃದ್ಧಿ ಕಾಮಗಾರಿ.	80.00	-		ಪ್ರಗತಿಯಲ್ಲಿದೆ.	
							80.00	95.40			

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2401
ಸದಸ್ಯರ ಹೆಸರು	:	ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಹುಣಸೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ನಿಗಮಗಳ ವತಿಯಿಂದ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಕೆಲವು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಕೊಳವೆ ಬಾವಿಗಳಿಗೆ ಮೋಟರ್ ಅಳವಡಿಸದೆ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯ ಹುಣಸೂರು ವಿಧಾನ ಸಭಾ ಕ್ಷೇತ್ರವು ಹುಣಸೂರು ಹಾಗೂ ಬಿಳಿಕೆರೆ ಉಪವಿಭಾಗಗಳನ್ನು ಒಳಗೊಂಡಿದ್ದು, ಸದರಿ ವಿಧಾನ ಸಭಾ ಕ್ಷೇತ್ರದಲ್ಲಿ ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ದೇವರಾಜು ಅರಸು ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ವಿಶ್ವಕರ್ಮ ಅಭಿವೃದ್ಧಿ ನಿಗಮಗಳ ವತಿಯಿಂದ ಕೊರೆಯಲಾಗುತ್ತಿರುವ ಕೊಳವೆ ಬಾವಿಗಳಿಗೆ ಗಂಗಾಕಲ್ಯಾಣ ಯೋಜನೆಯಡಿ ಅರ್ಜಿ ನೋಂದಾಯಿಸಿದ ನಂತರ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ. ಈ ಕೊಳವೆ ಬಾವಿಗಳಿಗೆ ಸಂಬಂಧಿತ ಅಭಿವೃದ್ಧಿ ನಿಗಮದ ವತಿಯಿಂದಲೇ ಮೋಟಾರುಗಳನ್ನು ಅಳವಡಿಸಬೇಕಾಗಿರುತ್ತದೆ. ಸದರಿ ಯೋಜನೆಗಳಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಸಿ ಮೋಟಾರ್ ಅಳವಡಿಸಿದ ನಂತರ ವಿದ್ಯುತ್ ಸಂಪರ್ಕಕ್ಕಾಗಿ ಚಾವಿಸನಿನಿಗೆ ಸಂಬಂಧಿತ ಅಭಿವೃದ್ಧಿ ನಿಗಮಗಳು ಅರ್ಜಿ ನೊಂದಾಯಿಸುತ್ತಿದ್ದು, ಕಾಮಗಾರಿಗಳನ್ನು ಪೂರ್ಣಗುತ್ತಿಗೆ ಆಧಾರದಲ್ಲಿ ಕೈಗೊಂಡು ಶೀಘ್ರವಾಗಿ ಪೂರ್ಣಗೊಳಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.
ಆ)	ಬಂದಿದ್ದಲ್ಲಿ, ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿರುವ ಒಟ್ಟು ಕೊಳವೆ ಬಾವಿಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರ ನೀಡುವುದು)	ಹುಣಸೂರು ತಾಲ್ಲೂಕಿನಲ್ಲಿ ಪ್ರಸಕ್ತ 2020-21ನೇ ಸಾಲಿನಲ್ಲಿ (ಫೆಬ್ರವರಿ-21 ಅಂತ್ಯಕ್ಕೆ) ಇದುವರೆಗೂ ಒಟ್ಟು 88 ಸಂಖ್ಯೆ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಫೆಬ್ರವರಿ-21 ರ ಮಾಹೆಯಲ್ಲಿ ಒಟ್ಟು 13 ಸಂಖ್ಯೆ ಅರ್ಜಿಗಳು ನೊಂದಣಿಯಾಗಿದ್ದು, ಅವುಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

66

<table>
<tr><td></td><td></td><td>ವಿದ್ಯುತ್ ಸಂಪರ್ಕಕ್ಕಾಗಿ ಫೆಬ್ರವರಿ-21ರ ಅತ್ಯಂಕ್ಕೆ ಬಾಕಿ ಇರುವ 13 ಸಂಖ್ಯೆ ಅರ್ಜಿಗಳ ಗ್ರಾಮವಾರು ವಿವರ ಕೆಳಗಿನಂತಿದೆ.

<table>
<tr><th>ಕ್ರ ಸಂ</th><th>ಫಲಾನುಭವಿಯ ಹೆಸರು</th><th>ಗ್ರಾಮದ ಹೆಸರು</th></tr>
<tr><td>1</td><td>ಚಾಮಮ್ಮ ಕೋಂ ರಾಮಯ್ಯ</td><td>ಹೊನ್ನೇನಹಳ್ಳಿ</td></tr>
<tr><td>2</td><td>ಕಾಳಚಲುವಯ್ಯ ಬಿನ್ ಒಬಯ್ಯ</td><td>ಕೆ. ಎಂ ವಾಡಿ</td></tr>
<tr><td>3</td><td>ಕುಳ್ಳಯ್ಯ ಬಿನ್ ತಿಮ್ಮಯ್ಯ</td><td>ಉದ್ದೂರು</td></tr>
<tr><td>4</td><td>ರಾಚಯ್ಯ ಬಿನ್ ಪಾಪಯ್ಯ</td><td>ದೊಡ್ಡಹುಣಸೂರು</td></tr>
<tr><td>5</td><td>ರವಿ ಬಿನ್ ಮರಿಯಯ್ಯ</td><td>ಬೀರತಮ್ಮನಹಳ್ಳಿ</td></tr>
<tr><td>6</td><td>ಸಣ್ಣಶಿವಯ್ಯ ಬಿನ್ ಶಿವಣ್ಣ</td><td>ರತ್ನಪುರಿ</td></tr>
<tr><td>7</td><td>ಜಯಣ್ಣ ಬಿನ್ ಜವರಯ್ಯ</td><td>ಕೆ. ಎಂ ವಾಡಿ</td></tr>
<tr><td>8</td><td>ಅಂಕಯ್ಯ ಬಿನ್ ಮುದ್ದಯ್ಯ</td><td>ಕೆ. ಎಂ ವಾಡಿ</td></tr>
<tr><td>9</td><td>ಸಮೀವುಲ್ಲಾ ಬಿನ್ ಖಾಸಿಂ</td><td>ಮರೂರು</td></tr>
<tr><td>10</td><td>ದುಂಡಮ್ಮ ಕೋಂ ರಾಜಣ್ಣ</td><td>ಕಳ್ಳಬೆಟ್ಟ ಕಾಲೋನಿ</td></tr>
<tr><td>11</td><td>ಸಿದ್ದಯ್ಯ ಬಿನ್ ಪುರಸಯ್ಯ</td><td>ಚಿಲ್ಕುಂದ</td></tr>
<tr><td>12</td><td>ಚೌಡಮ್ಮ ಕೋಂ ಮರಿನಾಯಕ</td><td>ಕಾಳಬೂಚನಹಳ್ಳಿ</td></tr>
<tr><td>13</td><td>ಕುನ್ನನಾಯಕ ಬಿನ್ ದ್ಯಾವನಾಯಕ</td><td>ಕುಪ್ಪೆ</td></tr>
</table></td></tr>
<tr><td>ಇ)</td><td>ಕೊಳವೆ ಬಾವಿಗಳನ್ನು ಕೊರೆದು ವಿದ್ಯುತ್ ಸಂಪರ್ಕ ಕಲ್ಪಿಸದೇ ವಿಳಂಬ ಮಾಡಲು ಕಾರಣಗಳೇನು; (ವಿವರ ನೀಡುವುದು)</td><td rowspan="2">ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ವಿಳಂಬವಾಗಿರುವುದಿಲ್ಲ. ಬಾಕಿ ಇರುವ ಅರ್ಜಿಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.</td></tr>
<tr><td>ಈ)</td><td>ಇಂತಹ ಕೊಳವೆ ಬಾವಿಗಳಿಗೆ ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td></tr>
<tr><td>ಉ)</td><td>ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಕೊಳವೆ ಬಾವಿಗಳಿಗೆ ದಿನದಲ್ಲಿ ಎಷ್ಟು ಸಮಯದ ವರೆಗೆ ವಿದ್ಯುತ್ ಒದಗಿಸಲಾಗುತ್ತಿದೆ? (ವಿವರ ನೀಡುವುದು)</td><td>ಸರ್ಕಾರದ ಆದೇಶದಂತೆ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ದಿನವಹಿ 7 ಗಂಟೆಗಳ ಕಾಲ 2 ಬ್ಯಾಚ್‌ಗಳಲ್ಲಿ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ತಾಂತ್ರಿಕ ಸಾಧ್ಯತೆ ಇರುವ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆಯಲ್ಲಿಯೇ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.</td></tr>
</table>

ಸಂಖ್ಯೆ: ಎನರ್ಜಿ 84 ಪಿಪಿಎಂ 2021

(signature)

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2425
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ	:	16.03.2021

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಕಿತ್ತೂರು ವಿಧಾನಸಭಾ ಕ್ಷೇತ್ರದ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕುಗಳು ಹೆಚ್ಚಾಗಿ ಮಲಪ್ರಭಾ ಮತ್ತು ತಿಗಡಿ ಹರಿನಾಲಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಗೆ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ ಕೆ.ಎನ್.ಎನ್.ಎಲ್. ಮೂಲಕ ಮಲಪ್ರಭಾ ಮತ್ತು ತಿಗಡಿ ಹರಿನಾಲಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳ ರೈತರ ಹೊಲಗಳಿಗೆ ಹೋಗುವ ರಸ್ತೆಗಳು ಮತ್ತು ಸೇತುವೆಗಳ ಅಭಿವೃದ್ಧಿಗೆ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ; (2018 ರಿಂದ 2021ರವರೆಗೆ ಸಲ್ಲಿಸಿರುವ ಪ್ರಸ್ತಾವನೆಗಳು ಕಾಮಗಾರಿಗಳ ಹೆಸರು ಹಾಗೂ ಅಂದಾಜು ಮೊತ್ತದ ವಿವರ ನೀಡುವುದು)	ಕರ್ನಾಟಕ ನೀರಾವರಿ ನಿಗಮ ನಿಯಮಿತ ಮೂಲಕ ಮಲಪ್ರಭಾ ಮತ್ತು ತಿಗಡಿ ಹರಿನಾಲಾ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳ ರೈತರ ಹೊಲಗಳಿಗೆ ಹೋಗುವ ರಸ್ತೆಗಳು ಮತ್ತು ಸೇತುವೆಗಳ ಅಭಿವೃದ್ಧಿಗೆ ಒಟ್ಟಾರೆ ರೂ.785.00 ಲಕ್ಷಗಳ ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು, ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಇ)	ಈ ಪ್ರಸ್ತಾವನೆಗಳಿಗೆ ಅನುದಾನ ಮಂಜೂರು ಮಾಡಲು ಕರ್ನಾಟಕ ನೀರಾವರಿ ನಿಗಮ ನಿಯಮಿತ ಯಾವ ಕ್ರಮ ಕೈಗೊಂಡಿದೆ;	ಸದರಿ ಕಾಮಗಾರಿಗಳನ್ನು ಅನುದಾನದ ಲಭ್ಯತೆಯ ಅನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ನಿಯಮಾನುಸಾರ ಕ್ರಮ ಜರುಗಿಸಲಾಗುವುದು.
ಈ)	ಯಾವ ಕಾಲಮಿತಿಯೊಳಗೆ ಅನುದಾನ ಮಂಜೂರು ಮಾಡಲಾಗುವುದು?	

ಸಂಖ್ಯೆ: ಜಸಂಇ 34 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ವಿಧಾನ ಸಭೆಯ ಸದಸ್ಯರಾದ ಮಾನ್ಯಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ಇವರ ಪ್ರಶ್ನೆ ಸಂಖ್ಯೆ: 2425 ಕ್ಕೆ ಅನುಬಂಧ

ಕಿತ್ತೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆ ಕಾಮಗಾರಿಗಳ ವಿವರ

ಕ್ರ. ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	ನಾವಲಗಟ್ಟಿ ಪುನರ್ವಸತಿ ಕೇಂದ್ರದಿಂದ ಹೊಲಗಳಿಗೆ ಹೋಗುವ ರಸ್ತೆ ನಿರ್ಮಾಣ (0 ರಿಂದ 3.00 ಕಿ.ಮೀ.)	90.00
2.	ಹಿರೇಮೇಳೆಯಿಂದ ಸ್ಮಶಾನಕ್ಕೆ ಹೋಗುವ ರಸ್ತೆ ನಿರ್ಮಾಣ (0 ರಿಂದ 1.50 ಕಿ.ಮೀ.)	50.00
3.	ನಾವಲಗಟ್ಟಿಯಿಂದ ಮತ್ತಿಕೊಳ್ಳಕ್ಕೆ ಹೋಗುವ ರಸ್ತೆ ನಿರ್ಮಾಣ	50.00
4.	ಹಣ್ಣಿಕೇರಿಯಿಂದ ಕುಮಾರಕೊಳ್ಳಕ್ಕೆ ರಸ್ತೆ ನಿರ್ಮಾಣ	100.00
5.	ಸಂಪಗಾಂವದಿಂದ ಹಳೆ ಸರಕಾರಿ ರಸ್ತೆ ನಿರ್ಮಾಣ	50.00
6.	ಹಿರೇಮೇಳೆ ಸ್ಮಶಾನಕ್ಕೆ ವಿದ್ಯುತ್ತೀಕರಣ ಮತ್ತು ಮುಳ್ಳು ತಂತಿ ಬೇಲಿ ನಿರ್ಮಾಣ	10.00
7.	ಹಿರೇಮೇಳೆ (ವೀರಾಪೂರ ಗ್ರಾಮ) ಯಿಂದ ಸ್ಮಶಾನದವರೆಗೆ ರಸ್ತೆ ನಿರ್ಮಾಣ	60.00
8.	ವೀರಾಪುಖುದಿಂದ ಚಿಕ್ಕಹಟ್ಟಿಹೊಳಿ ರಸ್ತೆ ನಿರ್ಮಾಣ	60.00
9.	ಮದನಬಾವಿ ಮುತವಾಡ ರಸ್ತೆಯಿಂದ ಬಂಡೆಮ್ಮ ದೇವಸ್ಥಾನದವರೆಗೆ ರಸ್ತೆ ನಿರ್ಮಾಣ	50.00
10.	ಬೈಲಹೊಂಗಲ ನೇಸರಗಿ ರಸ್ತೆಯಿಂದ ಅಯ್ಯನಬಾವಿ ರಸ್ತೆ ನಿರ್ಮಾಣ	25.00
11.	ಸಂಪಗಾಂವದಿಂದ ಹೊಲಗಳಿಗೆ ಹೋಗುವ ರಸ್ತೆ ನಿರ್ಮಾಣ	90.00
12.	ತಿಗಡಿ ಚಿಕ್ಕಬಾಗೇವಾದಿ ರಸ್ತೆ ನಿರ್ಮಾಣ	90.00
13.	ಹರಿನಾಲಾ ಅಣೆಕಟ್ಟಿನಿಂದ ವೇಸ್ಟ್ ವೀಯರವರೆಗೆ ರಸ್ತೆ ನಿರ್ಮಾಣ (ಹೊಲಗಳಿಗೆ ಹೋಗುವ ರಸ್ತೆ)	60.00
	ಒಟ್ಟು:	785.00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2427
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	16.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2018-19 ಮತ್ತು 2019-20ನೇ ಸಾಲುಗಳಲ್ಲಿ ಬೆಳಗಾವಿ ಜಿಲ್ಲೆಯ ವ್ಯಾಪ್ತಿಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ಪ್ರತಿ ಶಾಸಕರುಗಳಿಗೆ ಕ್ರಮವಾಗಿ ರೂ.100.00 ಲಕ್ಷ ಮತ್ತು ರೂ.260.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆಯೇ;	ಇಲ್ಲ ಬೆಳಗಾವಿ ಜಿಲ್ಲೆಯ ವ್ಯಾಪ್ತಿಯ ಪ್ರತಿ ಶಾಸಕರುಗಳಿಗೆ 2018-19ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.159.15 ಲಕ್ಷಗಳು ಹಾಗೂ 2019-20ನೇ ಸಾಲಿನಲ್ಲಿ ರೂ.60.05 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ 2018-19ನೇ ಸಾಲಿನಲ್ಲಿ ಫೆಬ್ರುವರಿ-2019ರ ಅಂತ್ಯಕ್ಕೆ ಆರಂಭಿಕ ಶಿಲ್ಕು ಸೇರಿ ಒಟ್ಟು ರೂ.162.33 ಕೋಟಿಗಳ ಅನುದಾನ ಲಭ್ಯವಿದ್ದು, ಶೇಕಡ 6 ರಷ್ಟು ವೆಚ್ಚವಾಗಿರುವ ಕಾರಣದಿಂದ ಉಳಿದ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ 2019-20ನೇ ಸಾಲಿನಲ್ಲಿ ಫೆಬ್ರುವರಿ-2019ರ ಅಂತ್ಯಕ್ಕೆ ಆರಂಭಿಕ ಶಿಲ್ಕು ಸೇರಿ ಒಟ್ಟು ರೂ.163.63 ಕೋಟಿಗಳ ಅನುದಾನ ಲಭ್ಯವಿದ್ದು, ಶೇಕಡ 37 ರಷ್ಟು ವೆಚ್ಚವಾಗಿರುವ ಕಾರಣದಿಂದ ಉಳಿದ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಆರ್ಥಿಕ ಇಲಾಖೆಯ ಷರತ್ತುಗಳಂತೆ ಬಿಡುಗಡೆಯಾದ ಅನುದಾನ ಹಾಗೂ ಆರಂಭಿಕ ಶಿಲ್ಕು ಸೇರಿದಂತೆ ಒಟ್ಟು ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚ ಮಾಡಿದ ನಂತರ ಉಳಿಕೆ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.
ಆ)	2018-19ನೇ ಸಾಲಿನ ಬೆಳಗಾವಿ ಜಿಲ್ಲೆಯ ವ್ಯಾಪ್ತಿಯ ಶಾಸಕರು ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ರೂ.100.00 ಲಕ್ಷ ಅನುದಾನ ಲ್ಯಾಪ್ಸ್(Lapse) ಅಗಲು ಕಾರಣಗಳೇನು;	2018-19ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಬಿಡುಗಡೆಯಾದ ಮೊದಲನೆಯ ಹಾಗೂ ಎರಡನೆಯ ಕಂತಿನ ಅನುದಾನವನ್ನು ಪೂರ್ಣವಾಗಿ ಜಮೆ ಮಾಡಿಕೊಂಡಿರುತ್ತಾರೆ. ಆದರೆ, ಮೂರನೆಯ ಕಂತು ಪ್ರತಿ ಕ್ಷೇತ್ರಕ್ಕೆ ರೂ.50.00 ಲಕ್ಷಗಳು ಮತ್ತು ನಾಲ್ಕನೆಯ ಕಂತಿನ ಅನುದಾನ ಎಸ್.ಸಿ.ಪಿ/ಟಿಎಸ್.ಪಿ ಲೆಕ್ಕಶೀರ್ಷಿಕೆಯಡಿ ಪ್ರತಿ ಕ್ಷೇತ್ರಕ್ಕೆ ರೂ.9.15 ಲಕ್ಷಗಳನ್ನು ಸರ್ಕಾರದಿಂದ ಬಿಡುಗಡೆ ಆಗಿದ್ದರು ಸಹ, ಬೆಳಗಾವಿ ಜಿಲ್ಲೆಯ

ಕ್ರ. ಸಂ.	ಪ್ರಶ್ನೆ	ಉತ್ತರ
		ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಿಗದಿತ ಕಾಲವಧಿಯಲ್ಲಿ ಪಿ.ಡಿ.ಖಾತೆಗೆ ಜಮೆ ಮಾಡಿಕೊಳ್ಳದೆ ಲ್ಯಾಪ್ಸ್ ಮಾಡಿರುತ್ತಾರೆ.
ಇ)	2018-19ನೇ ಸಾಲಿನ ಬೆಳಗಾವಿ ಜಿಲ್ಲೆಯ ವ್ಯಾಪ್ತಿಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ರೂ.100.00 ಲಕ್ಷ ಲ್ಯಾಪ್ಸ್(Lapse) ಅಗಲು ಕಾರಣರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ;	ಸರ್ಕಾರ ಬಿಡುಗಡೆ ಮಾಡಿದ ಅನುದಾನವನ್ನು ನಿಗದಿತ ಕಾಲವಧಿಯಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಗೆ ಜಮಾ ಮಾಡಿಕೊಳ್ಳಲು ವಿಫಲರಾದ ಅಧಿಕಾರಿ/ನೌಕರರಿಂದ ವಿವರಣೆ ಪಡೆದು ಮುಂದಿನ ಕ್ರಮ ವಹಿಸಲಾಗುವುದು.
ಈ)	2018-19ನೇ ಸಾಲಿಗೆ ಸಂಬಂದಿಸಿದಂತೆ ಬೆಳಗಾವಿ ಜಿಲ್ಲೆಯ ವ್ಯಾಪ್ತಿಯ ಶಾಸಕರುಗಳಿಗೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಸದರಿ ಅನುದಾನವನ್ನು ಮಂಜೂರು ಮಾಡಲು ಸರ್ಕಾರದ ಕ್ರಮವೇನು? (ವಿವರ ನೀಡುವುದು)	ಆರ್ಥಿಕ ಇಲಾಖೆಯ ಹಿಂಬರಹದಂತೆ ಲ್ಯಾಪ್ಸ್ ಆಗಿರುವ ಅನುದಾನವನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಸಂಖ್ಯೆ:ಪಿಡಿಎಸ್ 24 ಕೆಎಲ್ ಎಸ್ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2429**

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ (ಶಿವಮೊಗ್ಗ ಗ್ರಾಮಾಂತರ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ, ಅಂತರರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಗ್ರಾಮೀಣ ಭಾಗದ ಕ್ರೀಡಾಪಟುಗಳು ಆಯ್ಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಗ್ರಾಮೀಣ ಭಾಗದ ಕ್ರೀಡಾಪಟುಗಳಿಗಾಗಿ ಗ್ರಾಮೀಣ ಭಾಗದಲ್ಲಿ ಕ್ರೀಡಾ ಸೌಲಭ್ಯಗಳು, ಒಳಾಂಗಣ ಕ್ರೀಡಾಂಗಣ ಮತ್ತು ಕ್ರೀಡಾಂಗಣಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಗ್ರಾಮೀಣ ಭಾಗದಲ್ಲಿ ಕ್ರೀಡಾ ಸೌಲಭ್ಯಗಳು, ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ, ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;	ಗ್ರಾಮೀಣ ಪ್ರದೇಶಗಳಲ್ಲಿ ಆಟದ ಮೈದಾನಗಳ ನಿರ್ಮಾಣಕ್ಕೆ ಕ್ರಮವಹಿಸಲಾಗಿದ್ದು, ಪ್ರಸ್ತುತ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಜಿಲ್ಲಾ ಕ್ರೀಡಾಂಗಣ ಹಾಗೂ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಹೋಬಳಿ ಕೇಂದ್ರಗಳಲ್ಲಿ ಸೂಕ್ತ ನಿವೇಶನಗಳನ್ನು ಗುರುತಿಸಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿದ್ದು, ನಿವೇಶನ ಇಲಾಖೆಗೆ ಹಸ್ತಾಂತರವಾದ ನಂತರ, ಅನುದಾನದ ಲಭ್ಯತೆ ಆಧರಿಸಿ, ಕ್ರೀಡಾ ಮೂಲ ಸೌಲಭ್ಯಗಳನ್ನು ಸೃಜಿಸಲು ಕ್ರಮವಹಿಸಲಾಗುವುದು.

..... 2)

ಈ)	ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕುಂಸಿ, ಹೊಳೇಹೊನ್ನೂರು, ಹಾರನಹಳ್ಳಿ, ಹೊಳಲೂರು ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದ ಕುಂಸಿಯಲ್ಲಿ 5.13 ಎಕರೆ ನಿವೇಶನವು ಲಭ್ಯವಿರುತ್ತದೆ. ಸದರಿ ಕ್ರೀಡಾಂಗಣದಲ್ಲಿ ಕ್ರೀಡಾಂಕಣಗಳನ್ನು ನಿರ್ಮಿಸಲು ಹಾಗೂ ಅಗತ್ಯ ಸೌಲಭ್ಯಗಳನ್ನು ಜಿಲ್ಲಾ ಪಂಚಾಯತ್ ವಲಯದ ಅನುದಾನದಿಂದ ಒದಗಿಸುವ ಕುರಿತು ಸೂಕ್ತ ಕ್ರಮವಹಿಸಲಾಗುವುದು. ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಹೊಳೇಹೊನ್ನೂರು, ಹಾರನಹಳ್ಳಿ, ಹೊಳಲೂರು ಪಟ್ಟಣಗಳಲ್ಲಿ ಸೂಕ್ತ ನಿವೇಶನವು ಇದುವರೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಮಂಜೂರಾಗಿ, ಹಸ್ತಾಂತರಗೊಂಡಿರುವುದಿಲ್ಲ.

ವೈಎಸ್‌ಡಿ-ಇಬಿಬಿ/55/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2432
ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ
ಉತ್ತರಿಸುವ ದಿನಾಂಕ	:	16.03.2021
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
1	ಅ) ಯೋಜನೆ, ಕಾರ್ಯಕ್ರಮ. ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಡಿ ಎಷ್ಟು ಅಭಿವೃದ್ಧಿ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ:	ಯೋಜನೆ, ಕಾರ್ಯಕ್ರಮ. ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಡಿ 3 ಮಂಡಳಿಗಳು ಮತ್ತು 1 ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತಿವೆ ವಿವರ ಈ ಕೆಳಕಂಡಂತಿದೆ. 1. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ 2. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ 3. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ 4. ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು
2	ಆ) ಈ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ 2018-19ನೇ ಸಾಲಿನಿಂದ ಇಲ್ಲಿಯವರೆಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಅನುದಾನ ಮಂಜೂರು ಮಾಡಲಾಗಿದೆ:	ಈ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ 2018-19ನೇ ಸಾಲಿನಿಂದ ಇಲ್ಲಿಯವರೆಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಈ ಕೆಳಕಂಡಂತೆ ಅನುದಾನ ಮಂಜೂರು ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಮಂಡಳಿ/ ಪ್ರಾಧಿಕಾರ	ವರ್ಷ	ಮಂಜೂರಾದ/ ಬಿಡುಗಡೆಯಾದ ಅನುದಾನ
1	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ	2018-19	100000.00
		2019-20	112500.00
		2020-21	113186.00
2	ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ *	2018-19	2722.80
		2019-20	3158.50
		2020-21	3964.50
3	ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ *	2018-19	2335.00
		2019-20	2254.00
		2020-21	2521.00
4	ಕರಾವಳಿ ಅಭಿವೃದ್ಧಿ ಪ್ರಾಧಿಕಾರ *	2018-19	885.00
		2019-20	885.00
		2020-21	885.00

* ವೇತನಕ್ಕಾಗಿ ನಿಗದಿಪಡಿಸಿರುವ ಸಹಾಯಾನುದಾನವನ್ನು ಹೊರತುಪಡಿಸಲಾಗಿದೆ.

3	ಇ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಅನುದಾನದಲ್ಲಿ ಕಳೆದ ಮೂರು ವರ್ಷಗಳಲ್ಲಿ ವೆಚ್ಚ ಮಾಡಿದ ಹಾಗೂ ಉಳಿಕೆಯಾದ ಅನುದಾನವೆಷ್ಟು:	ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಅನುದಾನದಲ್ಲಿ ಕಳೆದ ಮೂರು ವರ್ಷಗಳಲ್ಲಿ ವೆಚ್ಚ ಮಾಡಿದ ಹಾಗೂ ಉಳಿಕೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ (ರೂ.ಲಕ್ಷಗಳಲ್ಲಿ)

ಕ್ರ. ಸಂ	ಮಂಡಳಿ	ವರ್ಷ	ವೆಚ್ಚ	ಉಳಿಕೆ
1	ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ	2018-19	3135.29	2317.70
2		2019-20	2975.65	2654.67
3		2020-21	4190.80	2632.53

4	ಈ) ಉಳಿಕೆಯಾದ ಅನುದಾನವನ್ನು ವೆಚ್ಚ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	ಆಯಾ ವರ್ಷದ ಅಂತ್ಯಕ್ಕೆ ಉಳಿಕೆಯಾದ ಅನುದಾನವನ್ನು ಮುಂದುವರೆದ ಕಾಮಗಾರಿಗಳಿಗೆ ಮುಂಬರುವ ವರ್ಷಗಳಲ್ಲಿ ವಿನಿಯೋಗಿಸಲಾಗುತ್ತಿದೆ.

ಸಂಖ್ಯೆ: ಪಿಡಿಎಸ್ 17 ಪಿಎಂಎಸ್ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2441
2. ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3. ಉತ್ತರಿಸುವ ದಿನಾಂಕ : 16-03-2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ	ಬಿಬಿಎಂಪಿ ವ್ಯಾಪ್ತಿಯ ಪ್ರೌಢಶಾಲಾ ತರಗತಿಗಳ ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭಕ್ಕಾಗಿ ಅನುಸರಿಸಲಾದ ಮುಂಜಾಗ್ರತಾ ಕ್ರಮಗಳು ಯಾವುವು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರೌಢಶಾಲೆಗಳನ್ನು ಸರ್ಕಾರದ ಮಾರ್ಗಸೂಚಿಗಳನ್ವಯ ಶಾಲೆಗಳು ಪ್ರಾರಂಭವಾದ 72 ಗಂಟೆ ಪೂರ್ವದಲ್ಲಿ ಶಾಲಾ ಶಿಕ್ಷಕರಿಗೆ ಕೋವಿಡ್ ಪರೀಕ್ಷೆ ಮಾಡಿಸಲಾಗಿರುತ್ತದೆ. ಶಾಲೆಗಳು ಪ್ರಾರಂಭದ ಪೂರ್ವದಲ್ಲಿ ಎಲ್ಲಾ ಕೊಠಡಿಗಳು ಹಾಗೂ ಶಾಲಾ ಆವರಣವನ್ನು ಸ್ಯಾನಿಟೈಸ್ ಮಾಡಿಸಲಾಗಿರುತ್ತದೆ. ತರಗತಿಗೆ ಹಾಜರಾಗುವ ವಿದ್ಯಾರ್ಥಿಗಳ ದೇಹದ ಉಷ್ಣಾಂಶವನ್ನು ಥರ್ಮಲ್ ಸ್ಕ್ಯಾನರ್ ಸಾಧನದಿಂದ ಪರಿಶೀಲಿಸಲಾಗುತ್ತದೆ. ಉಷ್ಣಾಂಶ ಹೆಚ್ಚಿದ್ದಲ್ಲಿ ಕೂಡಲೇ ಆರೋಗ್ಯ ಕೇಂದ್ರಕ್ಕೆ ಸೇರಿಸುವಂತೆ ಪೋಷಕರಿಗೆ ಸೂಚಿಸಲಾಗುತ್ತಿದೆ. ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ಮಾಸ್ಕ್ ಧರಿಸಲು ಕ್ರಮವಹಿಸಲಾಗಿದ್ದು, ಸರ್ಕಾರದ ಮಾರ್ಗಸೂಚಿಯಂತೆ ಸಾಮಾಜಿಕ ಅಂತರ ಕಾಯ್ದುಕೊಂಡು ತರಗತಿಗಳನ್ನು ನಡೆಸಲಾಗುತ್ತಿದೆ.
ಆ	ಬಿಬಿಎಂಪಿಯವರು ಪ್ರೌಢಶಿಕ್ಷಣ ನೀಡಿಕೆಯ ರೀತಿ ನೀತಿಗಳು ಮತ್ತು ವಿದ್ಯಾರ್ಥಿಗಳ ಹಾಗೂ ಪೋಷಕರುಗಳ ಮನಸ್ಥಿತಿಗಳನ್ನು ಗಮನಿಸಿ ಶಾಲಾ ಪ್ರಾರಂಭದ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆಯೇ; ವಿದ್ಯಾರ್ಥಿಗಳ ಆರೋಗ್ಯ ಸುಸ್ಥಿತಿ ಸಂರಕ್ಷಣೆಗಾಗಿ ಯಾವ ರೀತಿ ನೀತಿಗಳನ್ನು ಅನುಸರಿಸಲಾಗುತ್ತಿದೆ;	ಶಾಲೆಗಳ ಪ್ರಾರಂಭದ ಪೂರ್ವದಲ್ಲಿ ಪೋಷಕರ ಜೊತೆ ಸಭೆಯನ್ನು ಏರ್ಪಡಿಸಿ ಅಭಿಪ್ರಾಯವನ್ನು ಸಂಗ್ರಹಿಸಲಾಗಿದ್ದು, ಪೋಷಕರಿಂದ ವಿದ್ಯಾರ್ಥಿಗಳ ಹಾಜರಾತಿಗೆ ಅನುಮತಿ ಪತ್ರವನ್ನು ಪಡೆದು, ಸರ್ಕಾರದ ಮಾರ್ಗಸೂಚಿಗಳನ್ವಯ ಶಾಲಾ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ.

54

		ಶಾಲೆಗಳು ಪ್ರಾರಂಭದ ಪೂರ್ವದಲ್ಲಿ ಎಲ್ಲಾ ಕೊಠಡಿಗಳು ಹಾಗೂ ಆವರಣವನ್ನು ಸ್ಯಾನಿಟೈಸ್ ಮಾಡಿಸಲಾಗಿರುತ್ತದೆ. ತರಗತಿಗೆ ಹಾಜರಾಗುವ ವಿದ್ಯಾರ್ಥಿಗಳ ದೇಹದ ಉಷ್ಣಾಂಶವನ್ನು ಥರ್ಮಲ್ ಸ್ಕ್ಯಾನರ್ ಸಾಧನದಿಂದ ಪರಿಶೀಲಿಸಲಾಗುತ್ತದೆ. ಬಿಬಿಎಂಪಿ ಶಾಲಾ ಆವರಣ ಹಾಗೂ ಕೊಠಡಿಗಳನ್ನು ಕಾಲಕಾಲಕ್ಕೆ ಶುಚಿಗೊಳಿಸಲಾಗುತ್ತಿದ್ದು, ವಿದ್ಯಾರ್ಥಿಗಳ ಹಾಗೂ ಶಿಕ್ಷಕರು / ಸಿಬ್ಬಂದಿ ವರ್ಗದವರಿಗೆ ಉಪಯೋಗಿಸಲು ಸ್ಯಾನಿಟೈಜರ್ಸ್ ಒದಗಿಸಲಾಗಿದೆ. ವಿದ್ಯಾರ್ಥಿಗಳ ಆರೋಗ್ಯದ ಸುಸ್ಥಿತಿ ಸುರಕ್ಷಣೆಗಾಗಿ ಕ್ರಮವಹಿಸಲಾಗಿದೆ.
ಇ	ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಬಿಬಿಎಂಪಿ ಶಾಲೆಗಳು ಸುರಕ್ಷತೆಗೆ ಆದ್ಯತೆ ನೀಡಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಸರ್ಕಾರದ ಪ್ರೋತ್ಸಾಹಕ ಕ್ರಮಗಳೇನು?	ಪಾಲಿಕೆಯ ಶಾಲಾ / ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಾಲಿಕೆ ವತಿಯಿಂದ ಸಮವಸ್ತ್ರ, ಸ್ವೆಟರ್, ನೋಟ್ ಪುಸ್ತಕ, ಪಠ್ಯಪುಸ್ತಕ, ಶೂ, ಕಾಲುಚೀಲ ಮತ್ತು ಬ್ಯಾಗ್‌ಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಗುಣಮಟ್ಟದ ಶಿಕ್ಷಣ ನೀಡುವ ಸಂಬಂಧ ಪಾಲಿಕೆಯ ಶಾಲೆಗಳಲ್ಲಿ ಸ್ಮಾರ್ಟ್ ಶಿಕ್ಷಣವನ್ನು ಹೊಸದಾಗಿ ಆರಂಭಿಸಲಾಗಿದ್ದು, ಗುಣಮಟ್ಟದ ಶಿಕ್ಷಣವನ್ನು ನೀಡುವ ಸಂಬಂಧ ಪ್ರತಿ ಮಾಹೆ ಶಿಕ್ಷಕರು ಮತ್ತು ಪೋಷಕರ ಸಭೆಯನ್ನು ನಡೆಸಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಗುತ್ತಿದೆ. ಶಿಕ್ಷಣ ಇಲಾಖೆಯ ಆದೇಶದನ್ವಯ 2020-21ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಕಡಿತಗೊಳಿಸಲಾಗಿರುವ ಪಠ್ಯಕ್ರಮಕ್ಕೆ ಅನುಗುಣವಾಗಿ ಶಾಲಾ ಶಿಕ್ಷಕರು/ ಶಿಕ್ಷಕಿಯರಿಗೆ ವಿಶೇಷ ತರಬೇತಿ ಕಾರ್ಯಕ್ರಮ ಆಯೋಜಿಸಿ ತರಬೇತಿ ನೀಡಲಾಗಿದೆ. ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು/ವಿದ್ಯಾರ್ಥಿನಿಯರಿಗೆ ಪಾಲಿಕೆಯ ವತಿಯಿಂದ ರೂ.25,000-00 ಮತ್ತು ರೂ.35,000-00 ಗಳನ್ನು ಕ್ರಮವಾಗಿ ಪ್ರೋತ್ಸಾಹ ಧನವಾಗಿ ನೀಡಲಾಗುತ್ತಿದೆ.

ನಅಇ 74 ಎಂಎನ್ ಜಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2460
2. ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ (ಬಂಗಾರಪೇಟೆ)
3. ಉತ್ತರಿಸಬೇಕಾದ ದಿನಾಂಕ : 16.03.2021

<table>
<tr><th>ಕ್ರಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗಾಗಿ ಮಂಜೂರು ಮಾಡಲಾದ ಮೊತ್ತ ಎಷ್ಟು; ಕಳೆದ ಮೂರು ವರ್ಷಗಳಿಂದ ಪ್ರಸ್ತುತ ಅವಧಿವರೆಗೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು;</td><td>ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ರೂ.12,912.36 ಕೋಟಿ ಮೊತ್ತದ ಯೋಜನಾ ವರದಿಗೆ ಸರ್ಕಾರದಿಂದ ದಿನಾಂಕ: 17.02.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಕಳೆದ ಮೂರು ವರ್ಷಗಳಿಂದ ಪ್ರಸ್ತುತ ಅವಧಿಯವರೆಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದಲ್ಲಿ ನಿಗಮವು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಮರುಹಂಚಿಕೆ ಮಾಡಿ, ಬಿಡುಗಡೆಗೊಳಿಸಿರುವ ಅನುದಾನದ ವಿವರಗಳು ಈ ಕೆಳಕಂಡಂತಿವೆ.
(ರೂ.ಕೋಟಿಗಳಲ್ಲಿ)
<table>
<tr><th>ಕ್ರಸಂ</th><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr>
<tr><td>1</td><td>2017–18</td><td>930.94</td></tr>
<tr><td>2</td><td>2018–19</td><td>1550.95</td></tr>
<tr><td>3</td><td>2019–20</td><td>1998.23</td></tr>
<tr><td>4</td><td>2020–21</td><td>1085.14</td></tr>
</table></td></tr>
<tr><td>ಆ)</td><td>ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ಕೋಲಾರ ಜಿಲ್ಲೆಗೆ ನೀರು ಒದಗಿಸಲು ನಿಗದಿಪಡಿಸಿದ ಕಾಲಮಿತಿ ಎಷ್ಟು; ಯಾವ ಕಾರಣಕ್ಕಾಗಿ ವಿಳಂಬವಾಗಿದೆ; ತಾಂತ್ರಿಕ ಆಡಚಣೆ ಅಥವಾ ಆರ್ಥಿಕ ಅಡಚಣೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು;</td><td>ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>ಇ)</td><td>ಎತ್ತಿನಹೊಳೆ ಯೋಜನೆಯಡಿಯಲ್ಲಿ ಮಂಜೂರಾದ ಒಟ್ಟು ಮೊತ್ತದಲ್ಲಿ ವಿಶೇಷ ಘಟಕ ಯೋಜನೆಯಡಿ ನಿಗದಿ ಪಡಿಸಿದ ಮತ್ತು ಖರ್ಚು ಮಾಡಲಾದ ಅನುದಾನ ಎಷ್ಟು? (ವಿಶ್ವೇಶ್ವರಯ್ಯ ಜಲನಿಗಮ ವತಿಯಿಂದ)</td><td>ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಎಸ್.ಸಿ.ಪಿ/ ಟಿ.ಎಸ್.ಪಿ ಅಡಿಯ ಮಂಜೂರಾದ ಒಟ್ಟು ಮೊತ್ತದಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಎಸ್.ಸಿ.ಪಿ/ ಟಿ.ಎಸ್.ಪಿ ಕಾಮಗಾರಿಗಳಿಗಾಗಿ ನಿಗದಿಪಡಿಸಿದ ಮತ್ತು ಖರ್ಚು ಮಾಡಲಾದ ಅನುದಾನದ ವಿವರ ಈ ಕೆಳಗಿನಂತಿದೆ.
(ರೂ.ಕೋಟಿಗಳಲ್ಲಿ)
<table>
<tr><th rowspan="2">ಕ್ರಸಂ</th><th rowspan="2">ವರ್ಷ</th><th colspan="2">ಎಸ್.ಸಿ.ಪಿ</th><th colspan="2">ಟಿ.ಎಸ್.ಪಿ</th><th rowspan="2">ಷರಾ</th></tr>
<tr><th>ಅನುದಾನ</th><th>ವೆಚ್ಚ</th><th>ಅನುದಾನ</th><th>ವೆಚ್ಚ</th></tr>
<tr><td>1</td><td>2017–18</td><td>251.19</td><td>227.26</td><td>95.87</td><td>102.87</td><td rowspan="4">ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಒಳಗೊಂಡಿರುತ್ತದೆ</td></tr>
<tr><td>2</td><td>2018–19</td><td>138.53</td><td>289.30</td><td>83.83</td><td>111.04</td></tr>
<tr><td>3</td><td>2019–20</td><td>170.00</td><td>126.13</td><td>102.00</td><td>64.14</td></tr>
<tr><td>4</td><td>2020–21</td><td>143.50</td><td>83.43</td><td>68.60</td><td>38.91</td></tr>
</table></td></tr>
</table>

ಸಂಖ್ಯೆ: ಜಸಂಇ 33 ಡಬ್ಲ್ಯೂಎಲ್ಎ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ (ಬಂಗಾರಪೇಟೆ) ಇವರ ಪ್ರಶ್ನೆ ಸಂಖ್ಯೆ: 2460ಕ್ಕೆ ಅನುಬಂಧ

- ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲನೇ ಹಂತದ ಲಿಫ್ಟ್ ಮತ್ತು ವಿದ್ಯುತ್ ಪೂರೈಕೆ ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿವೆ.

- ಯೋಜನೆಯ ಹಂತ-2 ರಡಿಯ 260 ಕಿ.ಮೀ ಉದ್ದದ ಗುರುತ್ವಾ ಕಾಲುವೆಯ ಪೂರ್ಣ ಉದ್ದಕ್ಕೆ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ಈ ಪೈಕಿ, ಸುಮಾರು 78 ಕಿ.ಮೀ ಉದ್ದದ ನಾಲಾ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

- ಭೈರಗೊಂಡ್ಲು ಜಲಾಶಯಕ್ಕಿಂತ ಮೊದಲು ಕವಲೊಡೆಯುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆ ಕಾಮಗಾರಿ, ತುಮಕೂರು, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕುಡಿಯುವ ನೀರು ಮತ್ತು ಈ ಭಾಗದ 79 ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ಒದಗಿಸುವ ಮಧುಗಿರಿ ಫೀಡರ್ ಕಾಲುವೆ ಕಾಮಗಾರಿ ಮತ್ತು ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ 107 ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ಒದಗಿಸುವ ಗೌರಿಬಿದನೂರು ಫೀಡರ್ ಕಾಲುವೆ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

- ಭೈರಗೊಂಡ್ಲು ಜಲಾಶಯದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಿಗೆ ನೀರೊದಗಿಸುವ ಕುಂದಾಣ ಲಿಫ್ಟ್ ಕಾಮಗಾರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಫೀಡರ್ ಕಾಲುವೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ವೆ ಸಮೀಕ್ಷೆ ಕಾರ್ಯ ಮತ್ತು ಯೋಜನಾ ವರದಿ ತಯಾರಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

- ಗುರುತ್ವ ಕಾಲುವೆ ಕೊನೆಯಲ್ಲಿ ಬರುವ ಕೊರಟಗೆರೆ ತಾಲ್ಲೂಕು ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆ ವಹಿಸಲಾಗಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಲು ಪೂರ್ವಸಿದ್ಧತಾ ಕೆಲಸ ಕಾರ್ಯಗಳನ್ನು ಕೈಗೊಂಡಾಗ, ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಾಪುರ ತಾಲ್ಲೂಕಿನ ರೈತರಿಗೆ ನೀಡುವ ಪರಿಹಾರ ದರದಂತೆ ಅವರಿಗೂ ಸಹಾ ಏಕರೂಪ ದರ ನೀಡಲು ಒತ್ತಾಯಿಸಿದ್ದರಿಂದ ಕಾಮಗಾರಿ ಪ್ರಾರಂಭಿಸುವಲ್ಲಿ ಅಡತಡೆ ಉಂಟಾಗಿದ್ದು, ದರ ನಿರ್ಧರಣೆಯ ಕುರಿತು ಪರಿಶೀಲನಾ ಹಂತದಲ್ಲಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಭೂಸ್ವಾಧೀನಕೊಳ್ಳಪಡುವ ಜಮೀನಿಗೆ 'ಏಕರೂಪ ಭೂಪರಿಹಾರ' ನಿಗದಿ ಪಡಿಸಬೇಕಾಗಿರುತ್ತದೆ. ಸದರಿ ಯೋಜನೆಯ ತೀವ್ರ ಅನುಷ್ಠಾನಕ್ಕಾಗಿ "ಉನ್ನತ ಅಧಿಕಾರಿ ಸಮಿತಿ" (High Power Committee) ರಚಿಸಲಾಗಿದ್ದು, ಸದರಿ ಸಮಿತಿಯಲ್ಲಿ 'ಏಕರೂಪ ಭೂಪರಿಹಾರ' (Uniform Rate of Land Compensation) ಕುರಿತಾಗಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದಾಗಿರುತ್ತದೆ. ಸದರಿ ಸಮಿತಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಭೈರಗೊಂಡ್ಲು ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗುವ ಜಮೀನುಗಳಿಗೆ ಏಕರೂಪ ಪರಿಹಾರ ಧರ ಕುರಿತಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿರುತ್ತದೆ.

- ಭೈರಗೊಂಡ್ಲು ಜಲಾಶಯ ನಿರ್ಮಾಣದ ಭೂಸ್ವಾಧೀನ ಸಮಸ್ಯೆಯು ಇತ್ಯರ್ಥಗೊಂಡ ನಂತರ ಜಲಾಶಯ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಹರಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು.

*****

ಕರ್ನಾಟಕ ವಿಧಾನ ಸಭೆ

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2479
02. ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)
03. ಉತ್ತರಿಸುವ ದಿನಾಂಕ : 16.03.2021
04. ಉತ್ತರಿಸುವ ಸಚಿವರು : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಎಷ್ಟು ಪೊಲೀಸ್ ಹುದ್ದೆಗಳು ಖಾಲಿ ಇವೆ;	ರಾಜ್ಯದ ಪೊಲೀಸ್ ಇಲಾಖೆಯಲ್ಲಿ ದಿನಾಂಕ:31.01.2021ರ ಅಂತ್ಯಕ್ಕೆ 'ಎ', 'ಬಿ' ಮತ್ತು 'ಸಿ' ವೃಂದಗಳಲ್ಲಿ ಒಟ್ಟಾರೆ 18,507 ಪೊಲೀಸ್ ಹುದ್ದೆಗಳು ಖಾಲಿ ಇರುತ್ತದೆ.
ಆ)	ಈ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಗೊಳಿಸಲಾಗುವುದು?	ಪ್ರಸ್ತುತ ಖಾಲಿ ಇರುವ ಪೊಲೀಸ್ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಒಇ/19/ಪಿಪಿಎಸ್/2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಖಾದರ್ ಯು ಟಿ (ಮಂಗಳೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2479ಕ್ಕೆ ಅನುಬಂಧ.

ಪ್ರಸ್ತುತ ಖಾಲಿ ಇರುವ ಪೊಲೀಸ್ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಳ್ಳಲಾದ ಕ್ರಮಗಳನ್ನು ಈ ಕೆಳಗೆ ವಿವರಿಸಿದೆ.

- ಗ್ರೂಪ್-'ಎ' & 'ಬಿ' ವೃಂದದಲ್ಲಿ ಖಾಲಿ ಇರುವ ಹುದ್ದೆಗಳನ್ನು ಅರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಅರ್ಹ ಅಧಿಕಾರಿಗಳನ್ನು ಪೂರಕ ವೃಂದದಿಂದ ಮುಂಬಡ್ತಿಯನ್ನು ನೀಡಿ ಭರ್ತಿ ಮಾಡಲಾಗುತ್ತಿದೆ.
- ಗ್ರೂಪ್ 'ಸಿ' ವೃಂದದ ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡುವ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಹಾಗೂ ನೇರ ನೇಮಕಾತಿ ಹುದ್ದೆಗಳಾದ ಪಿಎಸ್ಐ ಮತ್ತು ಪಿಸಿ ಹುದ್ದೆಗಳನ್ನು ಸರ್ಕಾರದಿಂದ ಮಂಜೂರಾತಿ ಪಡೆದು ನೇಮಕಾತಿ ಮಾಡಲಾಗುತ್ತಿರುವ ವಿವರ ಕೆಳಕಂಡಂತಿದೆ.

ಪೊಲೀಸ್ ಸಬ್-ಇನ್ಸ್‌ಪೆಕ್ಟರ್:-

2019-20ನೇ ಸಾಲಿನಲ್ಲಿ 603 ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿದ್ದು, ಆ ಪೈಕಿ 541 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದ್ದು, ಬೆಂಗಳೂರು ನಗರದ 20 ಅಭ್ಯರ್ಥಿಗಳಿಗೆ ನೇಮಕಾತಿ ಹೊರಡಿಸಬೇಕಾಗಿರುತ್ತದೆ. ಉಳಿದಂತೆ 02 ಅಭ್ಯರ್ಥಿಗಳಿಗೆ ದಾಖಲೆ ಪರಿಶೀಲನೆ ಪ್ರಗತಿಯಲ್ಲಿರುತ್ತದೆ.

- 23 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲು ಸಂಬಂಧಪಟ್ಟ ಘಟಕಗಳಿಗೆ ಕಳುಹಿಸಲಾಗಿರುತ್ತದೆ. ಉಳಿದಂತೆ 17 ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ಮತ್ತು ದಾಖಲಾತಿಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ.

2020-21ನೇ ಸಾಲಿನಲ್ಲಿ 718 ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಸರ್ಕಾರವು ಮಂಜೂರಾತಿ ನೀಡಿದ್ದು, ಸದರಿ ಹುದ್ದೆಗಳಲ್ಲಿ 545 ಸಂಖ್ಯೆ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅರ್ಜಿಯನ್ನು ಸ್ವೀಕರಿಸಲಾಗಿದೆ. ಹಾಗೂ 11 ಸಂಖ್ಯೆ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ.

- ಉಳಿದಂತೆ 162 ಸಂಖ್ಯೆಯ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಇ.ಟಿ/ಪಿ.ಎಸ್.ಟಿ ಪರೀಕ್ಷೆ ನಡೆಸಲು ಸಂಬಂಧಪಟ್ಟ ಘಟಕಗಳಿಗೆ ತಾತ್ಕಾಲಿಕ ಆಯ್ಕೆ ಪಟ್ಟಿ ಕಳುಹಿಸಲಾಗಿದೆ.

ಪೊಲೀಸ್ ಕಾನ್ಸ್‌ಟೇಬಲ್:-

2019-20ನೇ ಸಾಲಿನಲ್ಲಿ 3566 ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿದ್ದು, ಈ ಹುದ್ದೆಗಳ ಪೈಕಿ 218 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ.

- ಉಳಿದಂತೆ 3348 ಸಂಖ್ಯೆ ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಕೆಲವು ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ಮತ್ತು ದಾಖಲಾತಿಗಳ ಪರಿಶೀಲನೆ ಕಾರ್ಯಗಳು ಚಾಲ್ತಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದೆ.

2020-21ನೇ ಸಾಲಿನಲ್ಲಿ 6686 ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಸರ್ಕಾರದಿಂದ ಮಂಜೂರಾಗಿದ್ದು, ಈ ಹುದ್ದೆಗಳ ಪೈಕಿ 6434 ಅಭ್ಯರ್ಥಿಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

- ಉಳಿದಂತೆ 252 ಸಂಖ್ಯೆ ಪಿ.ಸಿ (ಬ್ಯಾಂಡ್ಸ್‌ಮೆನ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪಿಎಸ್‌ಟಿ/ಪಿಟಿ ಪರೀಕ್ಷೆ ಪೂರ್ಣಗೊಳಿಸಿದ್ದು, ಶೀಘ್ರವಾಗಿ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುವುದು.

* * *

ಕರ್ನಾಟಕ ವಿಧಾನ ಸಭೆ

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2485
02. ಸದಸ್ಯರ ಹೆಸರು : ಶ್ರೀ ರಾಜೀವ್ ಪಿ. (ಕುಡಚಿ)
03. ಉತ್ತರಿಸುವ ದಿನಾಂಕ : 16.03.2021
04. ಉತ್ತರಿಸುವ ಸಚಿವರು : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೆ.ಎಸ್.ಆರ್.ಪಿ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ 2003ರಲ್ಲಿ ನೇಮಕ ಮಾಡಲು ಎಷ್ಟು ಹುದ್ದೆಗಳಿಗೆ ಅರ್ಜಿಗಳನ್ನು ಅಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿತ್ತು;</td><td>ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಬೆಂಗಳೂರು, ರವರ ಅಧಿಸೂಚನೆ ಸಂಖ್ಯೆ: ಸಿಬ್ಬಂದಿ(2)33/2002-03 ರಂತೆ ಸರ್ಕಾರದ ದಿನಾಂಕ:01.05.2003ರಲ್ಲಿ ಹೊರಡಿಸಲಾದ ಅಧಿಸೂಚನೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಆಹ್ವಾನಿಸಲಾದ ಹುದ್ದೆಗಳ ವಿವರ ಹೀಗಿದೆ.
<table>
<tr><th>ಕ್ರ. ಸಂ</th><th>ಪಡೆ</th><th>ಹುದ್ದೆಗಳ ಸಂಖ್ಯೆ</th></tr>
<tr><td>1.</td><td>1ನೇ ಪಡೆ ಕೆ.ಎಸ್.ಆರ್.ಪಿ ಬೆಂಗಳೂರು</td><td>125</td></tr>
<tr><td>2.</td><td>3ನೇ ಪಡೆ ಕೆ.ಎಸ್.ಆರ್.ಪಿ ಬೆಂಗಳೂರು</td><td>113</td></tr>
<tr><td>3.</td><td>4ನೇ ಪಡೆ ಕೆ.ಎಸ್.ಆರ್.ಪಿ ಬೆಂಗಳೂರು</td><td>222</td></tr>
<tr><td>4.</td><td>7ನೇ ಪಡೆ ಕೆ.ಎಸ್.ಆರ್.ಪಿ ಮಂಗಳೂರು</td><td>173</td></tr>
<tr><td>5.</td><td>9ನೇ ಪಡೆ ಕೆ.ಎಸ್.ಆರ್.ಪಿ ಬೆಂಗಳೂರು</td><td>228</td></tr>
<tr><td></td><td>ಒಟ್ಟು</td><td>861</td></tr>
</table></td></tr>
<tr><td>ಆ)</td><td>ಸದರಿ ಅಧಿಸೂಚನೆಯನ್ವಯ ನಿಗದಿತ ಸಮಯದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆಯೇ; (ವಿವರ ನೀಡುವುದು)</td><td>ಶ್ರೀ ಈರಣ್ಣಗೌಡ ಕಲಗೇರಿ ಮತ್ತು ಇತರರು ಮಾನ್ಯ ಕೆ.ಎಸ್.ಎ.ಟಿಯ ಅರ್ಜಿ ಸಂಖ್ಯೆ:1537-1541/2004, 4134-4137/2004 ಮತ್ತು 5768-74/2004 ಮತ್ತು ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ :25532/2005, 25648/2005 ಪ್ರಕರಣಗಳ ದಾಖಲಾತಿಯಿಂದಾಗಿ ನಿಗಧಿತ ಸಮಯದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ.</td></tr>
<tr><td>ಇ)</td><td>ನಿಗದಿತ ಸಮಯದಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದಲ್ಲಿ (OPS) ಹಳೆಯ ಪಿಂಚಣಿ ಯೋಜನೆಯನ್ನು ಪರಿಗಣಿಸದೆ, (NPS) ನೂತನ ಪಿಂಚಣಿ ಯೋಜನೆಯನ್ನು ಯಾವ ಕಾರಣಕ್ಕಾಗಿ ಜಾರಿಗೊಳಿಸಲಾಗಿರುತ್ತದೆ; (ಸಂಪೂರ್ಣ ವಿವರ ನೀಡುವುದು)</td><td>ಮಾನ್ಯ ನ್ಯಾಯಾಲಯಗಳ ಅಂತಿಮ ಆದೇಶದ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 03.05.2006ರಂದು ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ:31.03.2006ರನ್ವಯ ನೂತನ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ಜಾರಿಗೊಳಿಸಲಾಗಿರುತ್ತದೆ.</td></tr>
</table>

ಈ)	ಕೇಂದ್ರ ಸರ್ಕಾರವು ನಿಗದಿತ ಸಮಯದಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದವರಿಗೆ (NPS) ರದ್ದುಪಡಿಸಿ, (OPS) ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಹೌದು
ಉ)	ಹಾಗಿದ್ದಲ್ಲಿ, ಇದೇ ಮಾದರಿಯಲ್ಲಿ ಈ ರಾಜ್ಯದಲ್ಲೂ ನಿಗದಿತ ಸಮಯದಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದವರಿಗೆ (NPS) ರದ್ದುಪಡಿಸಿ (OPS) ಹಳೆಯ ಪಿಂಚಣಿಯೋಜನೆಯನ್ನು ಜಾರಿಗೊಳಿಸಲು ಸರ್ಕಾರಕ್ಕೆ ಇವರು ತೊಂದರೆಗಳೇನು;	ಸರ್ಕಾರದ ಆದೇಶ ಸಂಖ್ಯೆ : ಆಇ 39 ಪಿಇಎನ್ 2020(ಭಾ), ದಿನಾಂಕ: 17.02.2021ರಲ್ಲಿ ದಿನಾಂಕ: 01.04.2006ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಯಡಿಯಲ್ಲಿನ ಹುದ್ದೆಗಳ ಸಂಬಂಧದಲ್ಲಿ ಆಯ್ಕೆ ಮತ್ತು ನೇಮಕಾತಿಗಳು ನಡೆದಿದ್ದು, ಆದರೆ ಸದರಿ ದಿನಾಂಕದ ತದನಂತರದಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳ ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಡಿಫೈನ್ಡ್ ಪಿಂಚಣಿಯ ಸೌಲಭ್ಯವನ್ನು ಪರಿಗಣಿಸುವ ಬಗ್ಗೆ ಆದೇಶಿಸಲಾಗಿದೆ.
ಊ)	ಸದರಿ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗಾಗಿ ಅನುಮತಿ ನೀಡಲಾಗುವುದು?	ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಒಇ/18/ಪಿಪಿಎಸ್/2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2486
2. ಸದಸ್ಯರ ಹೆಸರು : ಶ್ರೀ ರಾಜೀವ್. ಪಿ. (ಕುಡಚಿ)
3. ಉತ್ತರಿಸುವ ದಿನಾಂಕ : 16-03-2021
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಭಾರತೀಯ ಸೇನಾ ಪಡೆಯಿಂದ ನಿವೃತ್ತಿ ಹೊಂದಿದ ಭೂದಳ, ನೌಕಾದಳ ಹಾಗೂ ವಾಯುದಳದ ಯೋಧರಿಗೆ ಮಾತ್ರ ರಾಜ್ಯ ಸರ್ಕಾರದ ಉದ್ಯೋಗದಲ್ಲಿ ಮೀಸಲಾತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಭಾರತೀಯ ಅರೆ ಸೇನಾ ಪಡೆಗಳಾದ ಸಿ.ಆರ್.ಪಿ.ಎಫ್, ಬಿ.ಎಸ್.ಎಫ್, ಐ.ಟಿ.ಬಿ.ಪಿ, ಸಿ.ಐ.ಎಸ್.ಎಫ್, ಎಸ್ .ಎಸ್.ಬಿ. ಅಸ್ಸಾಂ ರೈಫಲ್‌ಗಳಿಂದ ನಿವೃತ್ತಿ ಹೊಂದಿದ ಯೋಧರಿಗೆ ಸರ್ಕಾರದಿಂದ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯವವನ್ನು ನೀಡಲಾಗುತ್ತಿದೆಯೇ;	ಇಲ್ಲ
ಇ)	ಭಾರತೀಯ ಅರೆ ಸೇನಾ ಪಡೆಯಿಂದ ನಿವೃತ್ತಿ ಹೊಂದಿದ ಯೋಧರುಗಳಿಗೆ ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಕಾರಣಕ್ಕೆ ಇಲ್ಲಿಯವರೆಗೂ ಅನುಮತಿ ನೀಡಲಾಗಿರುವುದಿಲ್ಲ; (ವಿವರವನ್ನು ನೀಡುವುದು)	ಭಾರತೀಯ ಅರೆ ಸೈನಿಕ ಪಡೆಗಳ ಯೋಧರು ಕೇಂದ್ರ ಸೈನಿಕ ಮಂಡಳಿಯ ಜಾರಿಯಲ್ಲಿರುವ ನಿಯಮಗಳಂತೆ ಮಾಜಿ ಸೈನಿಕರ ಪರಿಭಾಷೆಯಲ್ಲಿ ಬರುವುದಿಲ್ಲ. ಸಶಸ್ತ್ರ ಪಡೆಗಳು ಕೇಂದ್ರ ರಕ್ಷಣಾ ಮಂತ್ರಾಲಯದಡಿ ಹಾಗೂ ಅರೆ ಸಶಸ್ತ್ರ ಪಡೆಗಳು ಗೃಹ ಮಂತ್ರಾಲಯದಡಿ ಕಾರ್ಯ ನಿರ್ವಹಿಸುತ್ತಿದ್ದು, ಎರಡು ಪಡೆಗಳ ಸೇವಾ ನಿಯಮಗಳು ಬೇರೆ ಬೇರೆಯಾಗಿವೆ. ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸೈನಿಕರುಗಳಿಗೆ ನಿಯಮಿತ ಅವಧಿಯವರೆಗೆ ಮಾತ್ರ ಸೇವೆ ಸಲ್ಲಿಸುವ ಪ್ರಾವಧಾನವಿದ್ದುದರಿಂದ, ಅವರು 35 ರಿಂದ 50 ವರ್ಷಗಳ ವಯಸ್ಸಿನಲ್ಲಿ ನಿವೃತ್ತಿ ಹೊಂದಬೇಕಾದ ಅನಿವಾರ್ಯತೆ ಇರುತ್ತದೆ. ಆದರೆ ಅರೆ ಸೇನಾ ಪಡೆಗಳಲ್ಲಿ ಸೇವೆ ಸಲ್ಲಿಸುವ ಸೈನಿಕರುಗಳಿಗೆ 60 ವಯಸ್ಸಿನವರೆಗೆ ಸೇವೆ ಸಲ್ಲಿಸಬಹುದಾದ ಪ್ರಾವಧಾನ ಕಲ್ಪಿಸಲಾಗಿದೆ. ಈ ಕಾರಣದಿಂದಾಗಿ ಸಶಸ್ತ್ರ ಪಡೆಗಳಿಂದ ನಿವೃತ್ತರಾದ ಮಾಜಿ ಸೈನಿಕರಿಗಾಗಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಮೊದಲಿನಿಂದಲೂ ಕಲ್ಪಿಸಲಾಗಿದೆ. ಈ ಹಿನ್ನಲೆಯಲ್ಲಿ ಅರೆ ಸೇನಾ ಪಡೆಯ ನಿವೃತ್ತ ಯೋಧರಿಗೆ ಮಾಜಿ ಸೈನಿಕರಿಗೆ ನೀಡಲಾಗುತ್ತಿರುವ ಮೀಸಲಾತಿಯನ್ನು ವಿಸ್ತರಿಸುವುದು ಸೂಕ್ತವಲ್ಲವೆಂಬ
ಈ)	ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿ ಇದೆ; ಈ ಪ್ರಸ್ತಾವನೆಗೆ ಯಾವ ಕಾಲಮಿತಿಯೊಳಗೆ ಅನುಮತಿ ನೀಡಲಾಗುವುದು;	
ಉ)	ನೆರೆ ರಾಜ್ಯಗಳಾದ ತಮಿಳುನಾಡು, ಗೋವಾ, ಹರಿಯಾಣ ರಾಜ್ಯ ಸರ್ಕಾರವು, ಭಾರತೀಯ ಅರೆ ಸೇನಾ ಪಡೆಯಿಂದ ನಿವೃತ್ತಿ ಹೊಂದಿದ ಯೋಧರುಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡುತ್ತಿರುವ ಮಾದರಿಯಲ್ಲಿ ಈ ರಾಜ್ಯದಲ್ಲಿಯೂ ಸರ್ಕಾರಿ	

	ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲು ವಿಳಂಬವಾಗಲು ಕಾರಣವೇನು? (ವಿವರವನ್ನು ನೀಡುವುದು).	ಅಭಿಪ್ರಾಯದೊಂದಿಗೆ ಸ್ವೀಕೃತವಾದ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ ಎಂದು ಒಳಾಡಳಿತ ಇಲಾಖೆಯು ತಿಳಿಸಿರುತ್ತದೆ.

ಸಂಖ್ಯೆ: ಸಿಆಸುಇ 53 ಎಸ್‌ಆರ್‌ಆರ್ 2021

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2489

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಶ್ರೀ ರಘುಪತಿ ಭಟ್. ಕೆ(ಉಡುಪಿ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ವಿವಿಧ ವಿಭಾಗಗಳ ಕ್ರೀಡೆಗಳಿಗೆ ಸಂಬಂಧಿಸಿದಂತೆ ತರಬೇತುದಾರರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ ಯಾವ ಯಾವ ವಿಭಾಗಗಳ ಕ್ರೀಡೆಗಳಿಗೆ ಸೂಕ್ತ ತರಬೇತುದಾರರನ್ನು ನೇಮಿಸಲಾಗಿರುತ್ತದೆ; (ಹೆಸರು ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು).	ಉಡುಪಿ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕ್ರೀಡಾವಾರು ತರಬೇತುದಾರರ ವಿವರ ಕೆಳಕಂಡಂತಿದೆ:-

ಕ್ರ ಸ	ಕ್ರೀಡೆ	ತರಬೇತು ದಾರರ ಹೆಸರು ಶ್ರೀ/ಶ್ರೀಮತಿ/ ಕುಮಾರಿ	ಷರಾ
01	ಅಥ್ಲೆಟಿಕ್ಸ್	ಕೆ. ಅನಂತ ರಾಮ್	ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರು
02	ಟೆನ್ನಿಸ್	ಸುಚಿನ್ ಶೆಟ್ಟಿ ಮತ್ತು ಸಹನಾ ಶೆಟ್ಟಿ	ಜಿಲ್ಲಾ ಕ್ರೀಡಾಂಗಣ ಸಮಿತಿಯಿಂದ ಗೌರವ ಧನದ ಆಧಾರದಲ್ಲಿ ಸೇವೆ ಪಡೆಯಲಾಗಿದೆ
03	ಬ್ಯಾಡ್ ಮಿಂಟನ್	ರೆಜಿನೋಲ್ಡ್ ಮತ್ತು ವಿವೇಕ್ ಜಾನ್	
04	ಈಜು	ಜಗದೀಶ್ ಶೆಟ್ಟರ್	
05	ಬ್ಯಾಡ್ ಮಿಂಟನ್	ಅಕ್ಷಯ್ ಕುಮಾರ್	ಸಹಾಯಕ ಬ್ಯಾಡ್ಮಿಂಟನ್ ತರಬೇತುದಾರರಾಗಿ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಪಡೆಯಲಾಗಿದೆ.
06	ಜಿಮ್ ಪ್ರಶಿಕ್ಷಕರು	ಉಮೇಶ್ ಕೊಟ್ಯಾನ್	ಹೊರಗುತ್ತಿಗೆ ಆಧಾರದಲ್ಲಿ ಸೇವೆ ಪಡೆಯಲಾಗಿದೆ.

ಇ)	ಜಿಲ್ಲಾ ಕೇಂದ್ರಗಳಲ್ಲಿ ವಿವಿಧ ವಿಭಾಗಗಳ ಕ್ರೀಡೆಗಳಿಗೆ ಸಂಬಂಧಿಸಿದಂತೆ ತರಬೇತುದಾರರ ನೇಮಕಕ್ಕೆ ಕೈಗೊಂಡ ಕ್ರಮಗಳೇನು?	ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಒಟ್ಟು 78 ಕ್ರೀಡಾ ತರಬೇತುದಾರರು ಕಾರ್ಯ ನಿರ್ವಹಿಸುತ್ತಿದ್ದು, ಇವರನ್ನು ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯಗಳಿಗೆ ಹೆಚ್ಚುವರಿಯಾಗಿ ಅಗತ್ಯವಿರುವ ತರಬೇತುದಾರರ ಸೇವೆಯನ್ನು ಗುತ್ತಿಗೆ ಆಧಾರದಲ್ಲಿ ಪಡೆದು ನೇಮಕ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೀಘ್ರ ತರಬೇತುದಾರರ ಸೇವೆ ಒದಗಿಸಲಾಗುವುದು.

ಕಡತ ಸಂಖ್ಯೆ:ವೈಎಸ್ ಡಿ –ಇವೈಡಬ್ಲ್ಯೂ/40/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2491
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ.(ಉಡುಪಿ)
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	16.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಹಣ ಬಿಡುಗಡೆಗೊಳಿಸದೇ ಬಾಕಿ ಇಡಲು ಕಾರಣವೇನು;	ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಪ್ರತಿ ಕ್ಷೇತ್ರಕ್ಕೆ ಪ್ರತಿ ವರ್ಷ ರೂ.2.00 ಕೋಟಿಗಳನ್ನು ನಿಗದಿ ಪಡಿಸಲಾಗುತ್ತಿದ್ದು, ಬಿಡುಗಡೆಯಾದ ಅನುದಾನ ಹಾಗೂ ಆರಂಭಿಕ ಶಿಲ್ಕು ಸೇರಿ ಒಟ್ಟು ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚವಾದರೆ ಮಾತ್ರ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡಲಾಗುತ್ತದೆ. 2018-19ನೇ ಸಾಲಿನಲ್ಲಿ ಮೂರು ಕಂತುಗಳನ್ನು ಪೂರ್ಣವಾಗಿ ಬಿಡುಗಡೆಗೊಳಿಸಲಾಗಿದ್ದು, ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ.830.67 ಕೋಟಿಗಳ ಅನುದಾನ ಫೆಬ್ರುವರಿ-2019ರ ಅಂತ್ಯದವರೆಗೆ ಇರುವ ಕಾರಣ ನಾಲ್ಕನೆಯ ಕಂತಿನ ಅನುದಾನದಲ್ಲಿ ರೂ.32.02 ಕೋಟಿಗಳನ್ನು ಮಾತ್ರ SCP/TSP ಬಾಬ್ತು ಬಿಡುಗಡೆಮಾಡಲಾಗಿದೆ. ಉಳಿದ ರೂ.127.69 ಕೋಟಿಗಳನ್ನು ಬಿಡುಗಡೆಯಾಗಿರುವುದಿಲ್ಲ. 2019-20ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.751.16 ಕೋಟಿಗಳ ಅನುದಾನ ಫೆಬ್ರುವರಿ-2020ರ ಅಂತ್ಯದವರೆಗೆ ಇರುವ ಕಾರಣ ಮೂರು ಮತ್ತು ನಾಲ್ಕನೆಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. 2020-21ನೇ ಸಾಲಿನಲ್ಲಿ ಎಲ್ಲಾ ಕಂತುಗಳನ್ನು ಪೂರ್ಣವಾಗಿ ಬಿಡುಗಡೆಗೊಳಿಸಲಾಗಿದೆ.
ಆ)	2018-19, 2019-20 ಮತ್ತು 2020-21ನೇ ಸಾಲಿನ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಬಿಡುಗಡೆಗೊಳಿಸಲಾದ ಮೊತ್ತ ಎಷ್ಟು; ಎಷ್ಟು ಬಾಕಿ ಇದೆ; ಬಾಕಿ ಇಡಲು ಕಾರಣಗಳೇನು; (ಸಂಪೂರ್ಣ ವಿವರವನ್ನು ಒದಗಿಸುವುದು)	ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಬಿಡುಗಡೆಯಾದ ಹಾಗೂ ಬಾಕಿ ಇರುವ ಅನುದಾನದ ವಿವರಗಳು ಈ ಕೆಳಗಿನಂತಿವೆ:- (ರೂ.ಕೋಟಿಗಳಲ್ಲಿ) **ಕ್ರ.ಸಂ** / **ವರ್ಷ** / **ಬಿಡುಗಡೆಯಾದ ಅನುದಾನ** / **ಬಾಕಿ ಇರುವ ಅನುದಾನ** 1 / 2018-19 / 481.69 / 127.69 2 / 2019-20 / 299.67 / 303.91 3 / 2020-21 / 597.00 / 0.00 ಒಟ್ಟು / 1378.36 / 431.60 ಆರ್ಥಿಕ ಇಲಾಖೆಯ ಷರತ್ತುಗಳಂತೆ ಬಿಡುಗಡೆಯಾದ ಅನುದಾನ ಹಾಗೂ ಆರಂಭಿಕ ಶಿಲ್ಕು ಸೇರಿದಂತೆ ಒಟ್ಟು ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚ ಮಾಡಿದ ನಂತರ ಉಳಿಕೆ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.
ಇ)	ಬಾಕಿ ಇರುವ ಮೊತ್ತವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು?	ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ ಬಿಡುಗಡೆಯಾಗಿರುವ ಅನುದಾನ ಹಾಗೂ

		ಆರಂಭಿಕ ಶಿಲ್ಕು ಸೇರಿ ಒಟ್ಟಾರೆ ಲಭ್ಯವಿರುವ ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚ ಭರಿಸಿದ ನಂತರ ಉಳಿದ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತದೆ.

ಸಂಖ್ಯೆ:ಪಿಡಿಎಸ್ 25 ಕೆಎಲ್ ಎಸ್ 2021

(ಡಾ|| ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನಸಭೆ

1. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 2516
2. **ಸದಸ್ಯರ ಹೆಸರು** : ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)

3. ಉತ್ತರಿಸ ಬೇಕಾದ ದಿನಾಂಕ : 16.03.2021

4. ಉತ್ತರಿಸುವ ಸಚಿವರು : ಮುಖ್ಯ ಮಂತ್ರಿ

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಸರ್ಕಾರಿ ನೌಕರರು ಚಲನಚಿತ್ರ/ಧಾರವಾಹಿಗಳಲ್ಲಿ ನಟಿಸಲು ಹಾಗೂ ಧಾರವಾಹಿಗಳನ್ನು/ಚಲನಚಿತ್ರಗಳನ್ನು ನಿರ್ಮಿಸಲು ಅವಕಾಶವಿದೆಯೇ; ಇದಕ್ಕಿರುವ ಮಾನದಂಡಗಳೇನು;	ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 10 (2) (b) ರನ್ವಯ ಯಾರೇ ಸರ್ಕಾರಿ ನೌಕರನು ನಿಯಮಿಸಲಾದ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆದ ಹೊರತು ಚಲನಚಿತ್ರ ಅಥವಾ ದೂರದರ್ಶನ, ಧಾರವಾಹಿಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಆದರೆ, ಅಂತಹ ಚಲನಚಿತ್ರ, ದೂರದರ್ಶನ ಪ್ರಸಾರವು ಸಂಪೂರ್ಣವಾಗಿ ಸಾಹಿತ್ಯಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿದ್ದರೆ ಅಂತಹ ಯಾವುದೇ ಅನುಮತಿ ಅಗತ್ಯವಿರುವುದಿಲ್ಲ. ಧಾರವಾಹಿ/ಚಲನಚಿತ್ರಗಳ ನಿರ್ಮಾಣವು ವ್ಯಾಪಾರ-ವ್ಯವಹಾರದ ವ್ಯಾಪ್ತಿಗೆ ಒಳಪಟ್ಟಿದ್ದು ಇದೇ ನಿಯಮಗಳ ನಿಯಮ 18ರಂತೆ ನಿಯಮಿಸಲಾದ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಅಂತಹ ವ್ಯಾಪಾರ-ವ್ಯವಹಾರಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.
ಆ)	ಒಬ್ಬ ಸರ್ಕಾರಿ ನೌಕರನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ವ್ಯಾಪಾರ ವಹಿವಾಟನ್ನು ನಡೆಸಲು ಅವಕಾಶವಿದೆಯೇ; ಹಾಗಿದ್ದಲ್ಲಿ ಅದಕ್ಕಿರುವ ನಿಯಮಗಳೇನು;	ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 18ರನ್ವಯ ಯಾರೇ ಸರ್ಕಾರಿ ನೌಕರನು, ನಿಯಮಿಸಲಾದ ಪ್ರಾಧಿಕಾರದಿಂದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ರೀತಿಯ ವ್ಯಾಪಾರದಲ್ಲಿ ಅಥವಾ ವ್ಯವಹಾರದಲ್ಲಿ ತೊಡಗುವಂತಿಲ್ಲ ಅಥವಾ ಯಾವುದೇ ಇತರ ಉದ್ಯೋಗಕ್ಕಾಗಿ ಮಾತುಕತೆ ನಡೆಸುವಂತಿಲ್ಲ. ಅಥವಾ ಯಾವುದೇ ಇತರ ಉದ್ಯೋಗವನ್ನು ಕೈಗೊಳ್ಳುವಂತಿಲ್ಲ.
ಇ)	ವ್ಯಾಪಾರ-ವಹಿವಾಟನ್ನು ನಡೆಸುತ್ತಿರುವ ವ್ಯಕ್ತಿಯು ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆದು ಸರ್ಕಾರಿ ಹುದ್ದೆಗೆ ಆಯ್ಕೆಯಾದ ನಂತರ ತನ್ನ ವ್ಯಾಪಾರ ವಹಿವಾಟನ್ನು	(ಆ) ರಲ್ಲಿ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರು ಅಂತಹ ವ್ಯಾಪಾರ ವಹಿವಾಟನ್ನು ಮುಂದುವರೆಸಬೇಕಾದರೆ ನಿಯಮಿಸಲಾದ ಪ್ರಾಧಿಕಾರಿಯ ಮಂಜೂರಾತಿ ಅಗತ್ಯ.

	ಮುಂದುವರೆಸಬಹುದೇ; ಇದಕ್ಕೆ ಇರುವ ನಿಯಮಗಳು ಹಾಗೂ ಮಾನದಂಡಗಳೇನು? (ಸಂಪೂರ್ಣ ಮಾಹಿತಿಯನ್ನು ನೀಡುವುದು)	

ಸಂಖ್ಯೆ: ಸಿಆಸುಇ 13 ಸೇನಿಸಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯ ಮಂತ್ರಿ

ಕರ್ನಾಟಕ ವಿಧಾನಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2517

2 ಸದಸ್ಯರ ಹೆಸರು : ಶ್ರೀಮತಿ ಲಕ್ಷ್ಮೀ ಆರ್ ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)

3 ಉತ್ತರಿಸುವ ದಿನಾಂಕ : 16-03-2021

4 ಉತ್ತರಿಸುವ ಸಚಿವರು : ಗೃಹ ಸಚಿವರು

ಪ್ರ. ಸಂ.	ಪ್ರಶ್ನೆ	ಉತ್ತರ
ಅ)	545 ಸಿವಿಲ್ ಪಿ.ಎಸ್.ಐ ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ನೇಮಕಾತಿ ಪ್ರಕ್ರಿಯೆಯು ಯಾವಾಗ ಪೂರ್ಣಗೊಳ್ಳುವುದು.	ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್)-545 ಹುದ್ದೆಗಳ ನೇಮಕಾತಿ ಸಲುವಾಗಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 21.01.2021 ರಂದು ಪ್ರಕಟಿಸಲಾಗಿದ್ದು, ಸದರಿ ಅಧಿಸೂಚನೆಯನ್ವಯ ಅರ್ಹ ಅಭ್ಯರ್ಥಿಗಳಿಂದ ದಿನಾಂಕ: 22.01.2021 ರಿಂದ22.02.2021 ರವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಸದರಿ ಅರ್ಜಿಗಳ ಪರಿಶೀಲನಾ ಕಾರ್ಯ ಪೂರ್ಣಗೊಂಡ ನಂತರ ಅರ್ಹ ಅಭ್ಯರ್ಥಿಗಳಿಗೆ ನಿಯಮಾನುಸಾರ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳನ್ನು ಮೇ ತಿಂಗಳಿನಲ್ಲಿ ನಡೆಸಲು ನಿರ್ಧರಿಸಲಾಗಿರುತ್ತದೆ. ಸದರಿ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ಜುಲೈ ತಿಂಗಳಿನಲ್ಲಿ ನಡೆಸಲಾಗುವುದು, ತದನಂತರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆಗಸ್ಟ್ ತಿಂಗಳಿನಲ್ಲಿ ಪ್ರಕಟಿಸಲಾಗುವುದು. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ಮತ್ತು ದಾಖಲೆಗಳ ಪರಿಶೀಲನೆ ಕಾರ್ಯವನ್ನು ಸಂಬಂಧಪಟ್ಟ ಘಟಕಗಳಿಂದ ಕೈಗೊಳ್ಳಲಾಗುವುದು. ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಅಕ್ಟೋಬರ್ ತಿಂಗಳಿನಲ್ಲಿ ಪ್ರಕಟಿಸಿ ಆಯ್ಕೆಯಾದ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗುವುದು. ಇದು ಸಂಭಾವನೀಯ ವೇಳಾಪಟ್ಟಿಯಾಗಿರುತ್ತದೆ, ಅನಿವಾರ್ಯತೆ ಮತ್ತು ಆಡಳಿತಾತ್ಮಕ ಕಾರಣಗಳ ಷರತ್ತಿಗೊಳಪಟ್ಟಿರುತ್ತದೆ.
ಆ)	ಈ ಹುದ್ದೆಗಳ ನೇಮಕಾತಿಗಾಗಿ ದೇಹದಾರ್ಢ್ಯ ಪರೀಕ್ಷೆಯನ್ನು ಯಾವಾಗ ಆರಂಭಿಸಲಾಗುವುದು.	
ಇ)	ಈ ಹುದ್ದೆಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆಯನ್ನು ಯಾವಾಗ ನಡೆಸಲಾಗುವುದು.	
ಈ)	ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಎಷ್ಟು; ಹಾಗೂ ಈ ಬಗ್ಗೆ ಶುಲ್ಕದ ಒಟ್ಟು ಮೊತ್ತವೆಷ್ಟು;	ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಸಂಖ್ಯೆ: 1,29,631 ಅರ್ಜಿ ಶುಲ್ಕದ ಒಟ್ಟು ಮೊತ್ತ :ರೂ. 5,20,36,750.00

<table>
<tr><td>ಉ)</td><td>ಪ್ರತಿ ಒಬ್ಬ ಅಭ್ಯರ್ಥಿಯ ಪರೀಕ್ಷೆಗೆ (ದೇಹದಾರ್ಢ್ಯ ಹಾಗೂ ಲಿಖಿತ) ತಗಲುವ ಒಟ್ಟು ವೆಚ್ಚ ಎಷ್ಟು? (ಪೂರ್ಣ ವಿವರವನ್ನ ನೀಡುವುದು)</td><td>ಪ್ರತಿ ಒಬ್ಬ ಅಭ್ಯರ್ಥಿಗೆ ದೇಹದಾರ್ಢ್ಯತೆ ಮತ್ತು ಲಿಖಿತ ಪರೀಕ್ಷೆಗಳನ್ನು ನಡೆಸಲು ಒಟ್ಟು ರೂ 400/- ವೆಚ್ಚವಾಗುತ್ತಿದ್ದು, ಸದರಿ ವೆಚ್ಚದ ಪೂರ್ಣ ವಿವರ ಕೆಳಕಂಡಂತಿದೆ.

<table>
<tr><th>ಕ್ರಮ ಸಂಖ್ಯೆ</th><th>ನೇಮಕಾತಿ ಪ್ರಕ್ರಿಯೆಗಳ ವಿವರ</th><th>ವೆಚ್ಚ</th></tr>
<tr><td>1</td><td>ಆನ್ ಲೈನ್ ಶುಲ್ಕ</td><td>54.00</td></tr>
<tr><td>2</td><td>ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆ</td><td>19.00</td></tr>
<tr><td>3</td><td>ಲಿಖಿತ ಪರೀಕ್ಷೆ ನಡೆಸಲು</td><td>133.00</td></tr>
<tr><td>4</td><td>ಲಿಖಿತ ಪರೀಕ್ಷೆಯ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳ ಮುದ್ರಣ ಶುಲ್ಕ</td><td>143.00</td></tr>
<tr><td>5</td><td>ನೇಮಕಾತಿ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಅಧಿಕಾರಿ ಸಿಬ್ಬಂದಿಗಳಿಗೆ ನೀಡಲಾಗುವ ಸಂಭಾವನೆಯ ಮೊತ್ತ</td><td>51.00</td></tr>
<tr><td>ಒಟ್ಟು</td><td></td><td>400.00</td></tr>
</table></td></tr>
</table>

ಸಂಖ್ಯೆ: ಒಇ 28 ಪಿಇಬಿ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1683
2. ಸದಸ್ಯರ ಹೆಸರು : ಶ್ರೀ ಪುಟ್ಟರಂಗಶೆಟ್ಟಿ ಸಿ.
3. ಉತ್ತರಿಸಬೇಕಾದ ದಿನಾಂಕ : 16.03.2021.
4. ಉತ್ತರಿಸುವವರು : ಸಣ್ಣ ನೀರಾವರಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಬರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು; (ಗ್ರಾಮಾವಾರು ವಿವರ ನೀಡುವುದು)	ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಒಟ್ಟು 20 ಕೆರೆಗಳು ಒಳಪಟ್ಟಿದ್ದು, ಅವುಗಳ ಗ್ರಾಮಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.
ಆ	ಈ ಕೆರೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು;	ಕೆರೆಗಳ ಅಭಿವೃದ್ಧಿಗಾಗಿ ವರ್ಷಾವಾರು ಇಲಾಖೆಗೆ ಒದಗಿಸಲಾಗುವ ಅನುದಾನಕ್ಕನುಗುಣವಾಗಿ ಕೆರೆಯಂಗಳದಲ್ಲಿ ಹೂಳು ತೆಗೆಯುವುದು, ಕೋಡಿ ಮತ್ತು ತೂಬು ದುರಸ್ತಿ ಏರಿ ಹಾಗೂ ನಾಲೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.
ಇ	2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಹಾಗೂ ಯಾವ ಯಾವ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲಾಗಿದೆ;	2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಚಾಮರಾಜನಗರ ವಿಧಾನ ಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡಿರುವ ಅನುದಾನ ವಿವರ ಈ ಕೆಳಗಿನಂತಿದೆ. (ರೂ.ಲಕ್ಷಗಳಲ್ಲಿ) [ಕೋಷ್ಟಕ ಕೆಳಗೆ] ಕಾಮಗಾರಿಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಈ	ಈ ಎಲ್ಲಾ ಕೆರೆಗಳ ಅಭಿವೃದ್ಧಿ ಮಾಡಲು ಸರ್ಕಾರಕ್ಕೆ ಇಚ್ಛಾಶಕ್ತಿ ಇದೆಯೇ; ಹಾಗಿದ್ದಲ್ಲಿ, ಯಾವಾಗ ಅಭಿವೃದ್ಧಿಪಡಿಸಲಾಗುವುದು?	ಪ್ರಸ್ತುತ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅನುದಾನದ ಲಭ್ಯತೆ ಆಧಾರದ ಮೇಲೆ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಅನುದಾನ
1.	2018-19	348.04
2.	2019-20	118.44
3.	2020-21	-
	ಒಟ್ಟು	466.48

ಸಂಖ್ಯೆ: ಎಂ ಐ ಡಿ 151 ಎಲ್ ಎ ಕ್ಯೂ 2021

(ಜೆ.ಸಿ ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು

ಅನುಬಂಧ-1

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1683 ಕ್ಕೆ ಉತ್ತರಗಳು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಬರುವ ಒಟ್ಟು ಕೆರೆಗಳ ವಿವರಗಳು

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಕೆರೆಯ ಹೆಸರು	ಗ್ರಾಮ	ವಿಸ್ತೀರ್ಣ ಹೆ.ಗಳಲ್ಲಿ	ಅಚ್ಚುಕಟ್ಟು ಹೆ.ಗಳಲ್ಲಿ	ಷರಾ
1	2	3	4	5	6	7	8
1	ಚಾಮರಾಜನಗರ	ಚಾಮರಾಜನಗರ	ಬೆಲ್ಲತ್ತಸಾನೆ ಕೆರೆ	ಹೊಂಗನೂರು	66.85	971.00	-
2	ಚಾಮರಾಜನಗರ	ಚಾಮರಾಜನಗರ	ಮೂಕನಪಾಳ್ಯ ಕೆರೆ	ಮೂಕನಪಾಳ್ಯ	11.84	116.00	-
3	ಚಾಮರಾಜನಗರ	ಚಾಮರಾಜನಗರ	ಹೊಂಡರಬಾಳು ಕೆರೆ	ಹೊಂಡರಬಾಳು	72.00	122.00	-
4	ಚಾಮರಾಜನಗರ	ಚಾಮರಾಜನಗರ	ಮರಗದಕೆರೆ	ಹರದನಹಳ್ಳಿ	87.00	153.30	-
5	ಚಾಮರಾಜನಗರ	ಚಾಮರಾಜನಗರ	ಅಮಚವಾಡಿ ಕೆರೆ	ಅಮಚವಾಡಿ	56.70	610.00	-
6	ಚಾಮರಾಜನಗರ	ಚಾಮರಾಜನಗರ	ಯಡಿಯೂರು ಅಡ್ಡಹಳ್ಳ	ಯಡಿಯೂರು	51.41	372.00	-
7	ಚಾಮರಾಜನಗರ	ಚಾಮರಾಜನಗರ	ಕೆರೆಹಳ್ಳ ಕೆರೆ	ಕೆರೆಹಳ್ಳ	108.70	207.00	-
8	ಚಾಮರಾಜನಗರ	ಚಾಮರಾಜನಗರ	ಮಾಲಗೆರೆ ಕೆರೆ	ಹರದನಹಳ್ಳಿ	88.00	271.50	-
9	ಚಾಮರಾಜನಗರ	ಚಾಮರಾಜನಗರ	ದೊಡ್ಡರಾಯಪೇಟೆ ಕೆರೆ	ಕುದೇರು	68.00	138.20	-
10	ಚಾಮರಾಜನಗರ	ಚಾಮರಾಜನಗರ	ಕಥಾನಾಯಕನ ಕೆರೆ	ಜಜ್ಯೋತಿಗೌಡನಪುರ	32.00	94.30	-
11	ಚಾಮರಾಜನಗರ	ಚಾಮರಾಜನಗರ	ಕೋಡಿ ಉಗನಿಯ ಕೆರೆ	ಕೋಡಿ ಉಗನಿಯ	4.65	44.00	-
12	ಚಾಮರಾಜನಗರ	ಚಾಮರಾಜನಗರ	ಕೋಡಿ ಮೊಳೆ ಕೆರೆ	ಕೋಡಿ ಮೊಳೆ ಕೆರೆ	36.00	53.44	-
13	ಚಾಮರಾಜನಗರ	ಚಾಮರಾಜನಗರ	ಆನೆಮಡುವಿನ ಕೆರೆ	ನಂಜದೇವನಪುರ	62.02	51.72	-
14	ಚಾಮರಾಜನಗರ	ಚಾಮರಾಜನಗರ	ನರಸಮಂಗಲ ಕೆರೆ	ನರಸಮಂಗಲ	32.30	47.60	-
15	ಚಾಮರಾಜನಗರ	ಚಾಮರಾಜನಗರ	ಚೆನ್ನಪ್ಪನಪುರ ಕೆರೆ	ಚೆನ್ನಪ್ಪನಪುರ	17.24	93.20	-
16	ಚಾಮರಾಜನಗರ	ಚಾಮರಾಜನಗರ	ಮೂರು ತೂಬಿನ ಕೆರೆ	ಬಂಕಾಪುರ	20.00	52.63	-
17	ಚಾಮರಾಜನಗರ	ಚಾಮರಾಜನಗರ	ಕೆಂಪನಪುರ ಕೆರೆ	ಕೆಂಪನಪುರ	85.02	110.52	-
18	ಚಾಮರಾಜನಗರ	ಚಾಮರಾಜನಗರ	ಉಮ್ಮತ್ತೂರು ಕೆರೆ	ಉಮ್ಮತ್ತೂರು	62.70	92.70	-
19	ಚಾಮರಾಜನಗರ	ಚಾಮರಾಜನಗರ	ಹೊಂಗನೂರು ಹಿರಿಕೆರೆ	ಹೊಂಗನೂರು	128.17	732.00	-
20	ಚಾಮರಾಜನಗರ	ಚಾಮರಾಜನಗರ	ಯರಗನಹಳ್ಳಿ ಕೆರೆ	ಯರಗನಹಳ್ಳಿ	16.00	80.00	-

10

ಅನುಬಂಧ-2

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1683 ಕ್ಕೆ ಉತ್ತರಗಳು.

2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಹಾಗೂ ಯಾವ ಯಾವ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲಾಗಿದೆ;

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ವಿಧಾನಸಭಾ ಕ್ಷೇತ್ರ	ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ
1	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-00-101-1-07-139 - ಕೆರೆಗಳ ಆಧುನೀಕರಣ	ಅಮಚವಾಡಿ ಗ್ರಾಮದ ಮೂಲಕ ಎಣ್ಣೆಹೊಳೆ ಸೇರುವ ನೀರು ಗಾಲುವೆ ಅಭಿವೃದ್ಧಿ ಮತ್ತು ಗ್ರಾಮದ ವ್ಯಾಪ್ತಿಯಲ್ಲಿ ಕಾಲುವೆಗೆ ರಕ್ಷಣಾತ್ಮಕ ಕಾಮಗಾರಿ	100.00	-	ಕಾಮಗಾರಿ ಪ್ರಗತಿಯಲ್ಲಿದೆ
2	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ನಬಾರ್ಡ-23 ಕೆರೆಗಳ ಆಧುನೀಕರಣ	ಬೆಲ್ಲತ್ತಸಾನೆ ಕೆರೆಯ ಎಡದಂಡೆ ನಾಲೆ ಅಭಿವೃದ್ಧಿ ಕಾಮಗಾರಿ	50.00	49.86	ಪೂರ್ಣಗೊಂಡಿದೆ
3	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ನಬಾರ್ಡ-23 ಕೆರೆಗಳ ಆಧುನೀಕರಣ	ಹೊಂಗನೂರು ಹಿರೇಕೆರೆಯ ಬಲದಂಡೆ ನಾಲೆ ಅಭಿವೃದ್ಧಿ ಕಾಮಗಾರಿ	30.00	29.91	ಪೂರ್ಣಗೊಂಡಿದೆ
4	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ನಬಾರ್ಡ-23 ಕೆರೆಗಳ ಆಧುನೀಕರಣ	ಅಮಚವಾಡಿ ಕೆರೆಯ ನಾಲೆ ಅಭಿವೃದ್ಧಿ ಕಾಮಗಾರಿ.	40.00	39.86	ಪೂರ್ಣಗೊಂಡಿದೆ
5	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಚಾಮರಾಜನಗರ ತಾಲ್ಲೂಕಿನ ಸಂತೇಮರಹಳ್ಳಿ ಹೋಬಳಿಯ ಬಾಣಹಳ್ಳ ಅಡ್ಡಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	25.00	24.77	ಕಾಮಗಾರಿ ಪೂರ್ಣಗೊಂಡಿದೆ
6	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಚಾಮರಾಜನಗರ ತಾಲ್ಲೂಕಿನ ಸಂತೇಮರಹಳ್ಳಿ ಹೋಬಳಿಯ ಮೂಡಲ ಅಗ್ರಹಾರ ಅಡ್ಡಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	25.00	24.91	ಕಾಮಗಾರಿ ಪೂರ್ಣಗೊಂಡಿದೆ
7	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಚಾಮರಾಜನಗರ ತಾಲ್ಲೂಕಿನ ಸಂತೇಮರಹಳ್ಳಿ ಹೋಬಳಿಯ ಉಮ್ಮತ್ತೂರಿನಿಂದ ಬರುವ ಅಡ್ಡಹಳ್ಳಕ್ಕೆ ಬಾಗಿಳ ಗ್ರಾಮದ ಬಳಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	25.00	24.7	ಕಾಮಗಾರಿ ಪೂರ್ಣಗೊಂಡಿದೆ
8	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಚಾಮರಾಜನಗರ ತಾಲ್ಲೂಕಿನ ಸಂತೇಮರಹಳ್ಳಿ ಹೋಬಳಿಯ ಸೊತ್ತನಹುಂಡಿ ಅಡ್ಡಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	25.00	24.32	ಕಾಮಗಾರಿ ಪೂರ್ಣಗೊಂಡಿದೆ
9	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಮಲ್ಲದೇವನಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರ ಜಮೀನಿನ ಹತ್ತಿರ ಮರಿಗುಂಟೆಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	25.00	27.1	ಕಾಮಗಾರಿ ಪೂರ್ಣಗೊಂಡಿದೆ
10	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಉತ್ತುವಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರ ಜಮೀನಿನ ಹತ್ತಿರ ಮೂಡಲ ಹೆಬ್ಬಳ್ಳ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	20.00	19.95	ಕಾಮಗಾರಿ ಪೂರ್ಣಗೊಂಡಿದೆ
11	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಬಡಗಲಪುರ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರ ಜಮೀನಿನ ಹತ್ತಿರ ಮೂಡಲ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	25.00	24.93	ಕಾಮಗಾರಿ ಪೂರ್ಣಗೊಂಡಿದೆ
12	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಅರಕಲವಾಡಿ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರ ಜಮೀನಿನ ಹತ್ತಿರ ರಂಗಮ್ಮನ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	30.00	33.55	ಕಾಮಗಾರಿ ಪೂರ್ಣಗೊಂಡಿದೆ
13	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2018-19	4702-ಗಿರಿಜನ ಉಪ ಯೋಜನೆ ಚೆಕ್‌ಡ್ಯಾಂ	ಬೂದಿಪಡಗ ಗ್ರಾಮದ ಪರಿಶಿಷ್ಟ ವರ್ಗ ಜನಾಂಗದವರ ಜಮೀನಿನ ಹತ್ತಿರ ರಂಗಮ್ಮನಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	25.00	24.18	ಕಾಮಗಾರಿ ಪೂರ್ಣಗೊಂಡಿದೆ
						ಒಟ್ಟು	445.00	348.04	

ಅನುಬಂಧ-2

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1683 ಕ್ಕೆ ಉತ್ತರಗಳು.

2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಹಾಗೂ ಯಾವ ಯಾವ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲಾಗಿದೆ:

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ವಿಧಾನಸಭಾ ಕ್ಷೇತ್ರ	ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ
1	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2019-20	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ದೇಮಹಳ್ಳಿ ಗ್ರಾಮದ ಪರಿಶಿಷ್ಟ ಜನಾಂಗದವರ ಜಮೀನುಗಳ ಬಳಿ ಹರಿಯುವ ದೊಡ್ಡಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	100.00	68.68	ಕಾಮಗಾರಿ ಪ್ರಗತಿಯಲ್ಲಿದೆ
2	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2019-20	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಕುದೇರು ಗ್ರಾಮದ ವಿವೇಕಾನಂದ ಕಾಲೋನಿ ಹತ್ತಿರ ಪರಿಶಿಷ್ಟ ಜನಾಂಗದವರ ಜಮೀನುಗಳ ಬಳಿ ಹರಿಯುವ ದೊಡ್ಡಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	40.00	23.32	ಕಾಮಗಾರಿ ಪ್ರಗತಿಯಲ್ಲಿದೆ
3	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2019-20	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಅರಕಲವಾಡಿ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರ ಜಮೀನಿನ ಹತ್ತಿರ ದೊಡ್ಡ ಹಳ್ಳ ನಾಲೆಗೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	40.00	0.00	ಕಾಮಗಾರಿ ಪ್ರಗತಿಯಲ್ಲಿದೆ
4	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2019-20	4702-ವಿಶೇಷ ಘಟಕ ಯೋಜನೆ ಚೆಕ್‌ಡ್ಯಾಂ	ಚನ್ನಪ್ಪನಪುರ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರ ಜಮೀನಿನ ಹತ್ತಿರ ಹೆಬ್ಬಳ್ಳ ನಾಲೆಗೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	60.00	1.10	ಕಾಮಗಾರಿ ಪೂರ್ಣಗೊಂಡಿದೆ
5	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2019-20	4702-ಗಿರಿಜನ ಉಪ ಯೋಜನೆ ಚೆಕ್‌ಡ್ಯಾಂ	ಬೂದಿಪಡಗ ಗ್ರಾಮದ ಪರಿಶಿಷ್ಟ ವರ್ಗ ಜನಾಂಗದವರ ಜಮೀನಿನ ಹತ್ತಿರ ಪಾಲದಾರೆ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	20.00	13.72	ಪ್ರಗತಿಯಲ್ಲಿದೆ
6	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ	2019-20	4702-ಗಿರಿಜನ ಉಪ ಯೋಜನೆ ಚೆಕ್‌ಡ್ಯಾಂ	ಅಮಚವಾಡಿ ಗ್ರಾಮದ ಪರಿಶಿಷ್ಟ ವರ್ಗ ಜನಾಂಗದವರ ಜಮೀನಿನ ಹತ್ತಿರ ಪಾಲದಾರೆ ಚಳ್ಳಿಕ್ಯಾತನಹಳ್ಳ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	20.00	11.62	ಪೂರ್ಣಗೊಂಡಿದೆ
						ಒಟ್ಟು	280.00	116.44	

1683

8

ಅನುಬಂಧ-2

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1683 ಕ್ಕೆ ಉತ್ತರಗಳು.

2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಹಾಗೂ ಯಾವ ಯಾವ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲಾಗಿದೆ;

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ವಿಧಾನಸಭಾ ಕ್ಷೇತ್ರ	ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ
				2020-21					
ಯಾವುದೇ ಕಾಮಗಾರಿಗಳು ಅನುಮೋದನೆಗೊಂಡಿರುವುದಿಲ್ಲ									

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1700
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ರಾಜ್ಯವು ಪ್ರಸ್ತುತ ಯಾವ ಯಾವ ಮೂಲಗಳಿಂದ ವಿದ್ಯುತ್ತನ್ನು ಖರೀದಿಸುತ್ತಿದೆ; (ಸಂಪೂರ್ಣ ವಿವರವನ್ನು ನೀಡುವುದು)	ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಏಪ್ರಿಲ್-2020 ರಿಂದ ಫೆಬ್ರವರಿ-2021 ರ ಅಂತ್ಯದವರೆಗೆ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ: (ಕೆಳಗಿನ ಕೋಷ್ಟಕ)

ಕ್ರ ಸಂ	ವಿದ್ಯುತ್ತಿನ ಮೂಲ	2020-21 (ಏಪ್ರಿಲ್-20 ರಿಂದ ಫೆಬ್ರವರಿ-21ರ ಅಂತ್ಯದವರೆಗೆ) ಲಭ್ಯವಾದ ವಿದ್ಯುತ್ತಿನ ಪ್ರಮಾಣ (ದ.ಲ.ಯೂ.) (ತಾತ್ಕಾಲಿಕ)
1	ಜಲವಿದ್ಯುತ್	11,467.269
2	ಶಾಖೋತ್ಪನ್ನ	7,664.667
3	ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು	16,606.57
4	ಅಸಂಪ್ರದಾಯಿಕ / ನವೀಕರಿಸಬಹುದಾದ ಇಂಧನ ಮೂಲ	24,885.06
5	ಬೃಹತ್ ಐ.ಪಿ.ಪಿ.	1,895.0
6	ಜಿಂದಾಲ್	257.49
	ಒಟ್ಟು	**62,776.06**

	ಪ್ರಶ್ನೆ	ಉತ್ತರ
ಆ)	ಬಿಟಿಪಿಎಸ್, ವೈಟಿಪಿಎಸ್ ಮತ್ತು ಆರ್‌ಟಿಪಿಎಸ್ ಗಳಿಂದ ಒಂದು ಯೂನಿಟ್ ವಿದ್ಯುತ್ ಖರೀದಿಗೆ ಸರ್ಕಾರ ಪ್ರಸ್ತುತ ಎಷ್ಟು ಹಣವನ್ನು ಪಾವತಿಸುತ್ತಿದೆ; (ಸಂಪೂರ್ಣ ವಿವರವನ್ನು ನೀಡುವುದು)	ಜನವರಿ-2021 ರಲ್ಲಿದ್ದಂತೆ ಬಿಟಿಪಿಎಸ್, ವೈಟಿಪಿಎಸ್ ಮತ್ತು ಆರ್‌ಟಿಪಿಎಸ್ ವಿದ್ಯುತ್ ಉತ್ಪಾದನಾ ಘಟಕಗಳಿಂದ ಖರೀದಿಸಲಾಗುತ್ತಿರುವ ವಿದ್ಯುತ್ತಿಗೆ ಪಾವತಿಸಲಾಗುತ್ತಿರುವ ಪ್ರತಿ ಯೂನಿಟ್ ದರದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಇ)	ಎನ್‌ಟಿಪಿಸಿ ಯಿಂದ ಪ್ರಸ್ತುತ ಖರೀದಿಸುತ್ತಿರುವ ಒಂದು ಯೂನಿಟ್ ವಿದ್ಯುತ್‌ಗೆ ಎಷ್ಟು ಹಣವನ್ನು (ಸರಬರಾಜು ವೆಚ್ಚ ಸೇರಿಸಿ) ಪಾವತಿಸಲಾಗುತ್ತಿದೆ? (ಸಂಪೂರ್ಣ ವಿವರವನ್ನು ನೀಡುವುದು)	ಎನ್.ಟಿ.ಪಿ.ಎಸ್. ವಿದ್ಯುತ್ ಉತ್ಪಾದನಾ ಘಟಕಗಳಿಂದ ಖರೀದಿಸಲಾಗುತ್ತಿರುವ ವಿದ್ಯುತ್ತಿಗೆ ಪಾವತಿಸಲಾಗುತ್ತಿರುವ ಪ್ರತಿ ಯೂನಿಟ್ ದರದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಎನರ್ಜಿ 77 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

1700

ಪ್ರಶ್ನೆ ಸಂಖ್ಯೆ 1700ಕ್ಕೆ ಅನುಬಂಧ-1

ಜನವರಿ-2021 ರಲ್ಲಿದ್ದಂತೆ ಬಿಟಿಪಿಎಸ್, ವೈಟಿಪಿಎಸ್ ಮತ್ತು ಆರ್‌ಟಿಪಿಎಸ್ ವಿದ್ಯುತ್ ಉತ್ಪಾದನಾ ಘಟಕಗಳಿಂದ ಖರೀದಿಸಲಾಗುತ್ತಿರುವ ವಿದ್ಯುತ್ತಿಗೆ ಪಾವತಿಸಲಾಗುತ್ತಿರುವ ಪ್ರತಿ ಯೂನಿಟ್ ದರದ ವಿವರಗಳು

ಕ್ರ.ಸಂ	ವಿದ್ಯುತ್ ಉತ್ಪಾದನಾ ಘಟಕ	ವಿದ್ಯುತ್ ಖರೀದಿ ದರ ಪ್ರತಿ ಯೂನಿಟ್ಟಿಗೆ (ರೂ.ಗಳಲ್ಲಿ)
1	ಆರ್ ಟಿ ಪಿ ಎಸ್-1-7	3.85
2	ಆರ್ ಟಿ ಪಿ ಎಸ್ -8	4.89
3	ಬಿ ಟಿ ಪಿ ಎಸ್ -1	3.87
4	ಬಿ ಟಿ ಪಿ ಎಸ್ -2	4.08
5	ಬಿ ಟಿ ಪಿ ಎಸ್ -3	4.82
6	ವೈ.ಟಿ.ಪಿ.ಎಸ್.	4.95

ಪ್ರಶ್ನೆ ಸಂಖ್ಯೆ 1700ಕ್ಕೆ ಅನುಬಂಧ-2

ಎನ್.ಟಿ.ಪಿ.ಸಿ. ವಿದ್ಯುತ್ ಉತ್ಪಾದನಾ ಘಟಕಗಳಿಂದ ಖರೀದಿಸಲಾಗುತ್ತಿರುವ ವಿದ್ಯುತ್ತಿಗೆ ಪಾವತಿಸಲಾಗುತ್ತಿರುವ ಪ್ರತಿ ಯೂನಿಟ್ ದರದ ವಿವರಗಳು

ಕ್ರ.ಸಂ	ವಿದ್ಯುತ್ ಉತ್ಪಾದನಾ ಘಟಕ	ಒಟ್ಟು ದರ ರೂ/ಯೂನಿಟ್
1	ಎನ್ ಟಿ ಪಿ ಸಿ ತಾಲ್ಚರ್	4.13
2	ಎನ್ ಟಿ ಪಿ ಸಿ ಸ್ಟೇಜ್ -3	4.43
3	ಎನ್ ಟಿ ಪಿ ಸಿ ಸ್ಟೇಜ್ 1 &2	4.51
4	ಎನ್ ಟಿ ಪಿ ಸಿ ಕೂಡ್ಗಿ	6.27
5	ಎನ್ ಟಿ ಪಿ ಸಿ ಸಿಂಹಾದ್ರಿ	5.59

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1702
2. ಸದಸ್ಯರ ಹೆಸರು : ಶ್ರೀ ಸುರೇಶ್ ಗೌಡ
3. ಉತ್ತರಿಸಬೇಕಾದ ದಿನಾಂಕ : 16-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ (ಎನ್.ಬಿ.ಸಿ., ಹೆಚ್.ಎಲ್.ಬಿ.ಸಿ., ವಿ.ಸಿ) ನಾಲೆಗಳಲ್ಲಿ 2018-19 ಹಾಗೂ 2019-20ನೇ ಸಾಲಿನಲ್ಲಿ ಎಷ್ಟು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ (ಎನ್.ಬಿ.ಸಿ., ಹೆಚ್.ಎಲ್.ಬಿ.ಸಿ., ವಿ.ಸಿ) ನಾಲೆಗಳಲ್ಲಿ 2018-19 ಹಾಗೂ 2019-20ನೇ ಸಾಲಿನಲ್ಲಿ 1842 ಸಂಖ್ಯೆಯ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಕಾಮಗಾರಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
ಆ	ಟೆಂಡರ್ ಕರೆಯಲಾದ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; ಎಷ್ಟು ಪ್ರಗತಿಯಲ್ಲಿವೆ; (ವಿವರ ನೀಡುವುದು)	ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ (ಎನ್.ಬಿ.ಸಿ., ಹೆಚ್.ಎಲ್.ಬಿ.ಸಿ., ವಿ.ಸಿ) ನಾಲೆಗಳಲ್ಲಿ 2018-19 ಹಾಗೂ 2019-20 ಸಾಲಿನಲ್ಲಿ 1842 ಸಂಖ್ಯೆಯ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಈ ಪೈಕಿ 623 ಸಂಖ್ಯೆಯ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ 177 ಸಂಖ್ಯೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕಾಮಗಾರಿಗಳ ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.
ಇ	ಕೆಲವೊಂದು ಟೆಂಡರ್‌ಗಳನ್ನು ವಿನಾಕಾರಣ ಏಕಾಏಕಿ ತಡೆಹಿಡಿಯಲು ಕಾರಣವೇನು; (ವಿವರ ನೀಡುವುದು)	ಮುಂದುವರೆದು, ದಿನಾಂಕ:20-09-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ ಮಂಡಳಿಯ 70ನೇ ಸಭೆಯ ನಿರ್ಣಯದಂತೆ ಇನ್ನೂ ಅನುಷ್ಠಾನಗೊಳ್ಳದ ವಿವಿಧ ಪ್ರಕ್ರಿಯೆಯಲ್ಲಿರುವ ಹೊಸ ಕಾಮಗಾರಿಗಳನ್ನು ಆಡಳಿತಾತ್ಮಕ ಹಾಗೂ ಆರ್ಥಿಕ ಶಿಸ್ತನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಕೈಬಿಡಲಾಗಿದ್ದು, ಹಾಲಿ ಮುಂದುವರೆದ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಗಮದ ಕಾರ್ಯಭಾರ ಅಧಿಕವಾಗಿರುವುದರಿಂದ ಸದರಿ ಅನುಷ್ಠಾನಗೊಳ್ಳದೇ ಇರುವ ಕಾಮಗಾರಿಗಳನ್ನು ಮುಂಬರುವ ಆರ್ಥಿಕ ವರ್ಷದಲ್ಲಿ ಅನುದಾನದ ಲಭ್ಯತೆಗನುಸಾರವಾಗಿ ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು.
ಈ	ತಡೆಹಿಡಿಯಲಾಗಿರುವ ಟೆಂಡರ್‌ಗಳನ್ನು ಪುನಃ ಪ್ರಾರಂಭಿಸಲು ಅನುಮತಿ ನೀಡಲಾಗುವುದೇ?	

ಸಂಖ್ಯೆ:ಜಸಂಇ 55 ಎನ್ಎಲ್ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

1702

<u>ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸುರೇಶ್ ಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1702 ಕ್ಕೆ ಅನುಬಂಧ-1</u>

ಕ್ರಸಂ	ವರ್ಷ	ತಾಲ್ಲೂಕುವಾರು	ಟೆಂಡರ್ ಕರೆಯಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ ಕೋಟಿಗಳಲ್ಲಿ)
1	2018-19	ನಾಗಮಂಗಲ	81	28.03
		ಮಂಡ್ಯ	117	62.93
		ಶ್ರೀರಂಗಪಟ್ಟಣ	9	1.42
		ಮದ್ದೂರು	120	239.35
		ಮಳವಳ್ಳಿ	30	5.83
		ಪಾಂಡವಪುರ	1	0.1
	ಒಟ್ಟು		**358**	**337.66**
	2019-20	ನಾಗಮಂಗಲ	103	51.97
		ಮಂಡ್ಯ	735	395.5
		ಶ್ರೀರಂಗಪಟ್ಟಣ	8	1.33
		ಮದ್ದೂರು	594	463.43
		ಮಳವಳ್ಳಿ	5	1
		ಪಾಂಡವಪುರ	39	315.54
	ಒಟ್ಟು		**1484**	**1228.77**
	ಒಟ್ಟಾರೆ		**1842**	**1566.43**

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸುರೇಶ್ ಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1702 ಕ್ಕೆ ಅನುಬಂಧ-2

(ರೂ ಕೋಟಿಗಳಲ್ಲಿ)

ಕ್ರ. ಸಂ	ವರ್ಷ	ತಾಲ್ಲೂಕುವಾರು	ಟೆಂಡರ್ ಕರೆಯಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಪೂರ್ಣಗೊಂಡ ಕಾಮಗಾರಿಗಳು		Non Grounded ಕಾಮಗಾರಿಗಳು		ಪ್ರಗತಿಯಲ್ಲಿರುವ ಕಾಮಗಾರಿಗಳು	
					ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2018-19	ನಾಗಮಂಗಲ	81	28.03	47	6.61	31	20.37	3	1.05
		ಮಂಡ್ಯ	117	62.93	56	44.81	25	11.6	36	6.52
		ಶ್ರೀರಂಗಪಟ್ಟಣ	9	1.42	9	1.42	0	0	0	0
		ಮದ್ದೂರು	120	239.35	83	150.88	0	0	37	88.47
		ಮಳವಳ್ಳಿ	30	5.83	26	3.01	4	2.82	0	0
		ಪಾಂಡವಪುರ	1	0.1	1	0.1	0	0	0	0
		ಒಟ್ಟು :-	**358**	**337.66**	**222**	**206.83**	**60**	**34.79**	**76**	**96.04**
	2019-20	ನಾಗಮಂಗಲ	103	51.97	33	2.29	68	48.88	2	0.82
		ಮಂಡ್ಯ	735	395.5	181	205.55	488	158.2	66	31.73
		ಶ್ರೀರಂಗಪಟ್ಟಣ	8	1.33	4	0.63	4	0.7	0	0
		ಮದ್ದೂರು	594	463.43	171	183.62	391	133.28	32	146.53
		ಮಳವಳ್ಳಿ	5	1	5	1	0	0	0	0
		ಪಾಂಡವಪುರ	39	315.54	7	1.9	31	13.64	1	300.00
		ಒಟ್ಟು :-	**1484**	**1228.77**	**401**	**394.99**	**982**	**354.7**	**101**	**479.08**
		ಒಟ್ಟಾರೆ (1+2)	**1842**	**1566.43**	**623**	**601.82**	**1042**	**389.49**	**177**	**575.12**

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1710
2	ಸದಸ್ಯರ ಹೆಸರು	:	ಶ್ರೀ ರಾಘವೇಂದ್ರ ಬಸವರಾಜ್ ಹಿಟ್ನಾಳ್ ಕೆ. (ಕೊಪ್ಪಳ)
3	ಉತ್ತರಿಸುವ ದಿನಾಂಕ	:	16-03-2021
4	ಉತ್ತರಿಸುವ ಸಚಿವರು	:	ಗೃಹ ಸಚಿವರು

ಪ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಒಟ್ಟು 89,333 ವಿವಿಧ ವೃಂದದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.
ಆ)	ಈ ಅಧಿಕಾರಿಗಳಿಗೆ ವಿವಿಧ ಸವಲತ್ತುಗಳನ್ನು ವಿಸ್ತರಿಸುವ ಸಂಬಂದ ನೀಡಿರುವ ಔರಾದ್ಕರ್ ವರದಿಯ ಜಾರಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಲು ರಚಿಸಿದ ಸಮಿತಿಯು ನೀಡಿದ ವರದಿಯನ್ನು ಪರಿಶೀಲಿಸಿದ ಸರ್ಕಾರವು ಆದೇಶ ಸಂಖ್ಯೆ:ಆಇ 09 ಎಸ್ಆರ್‌ಪಿ 2019, ದಿನಾಂಕ:16-07-2019 ರಲ್ಲಿ 05 ವಿವಿಧ ವೃಂದದ ಪೊಲೀಸ್ ಅಧಿಕಾರಿಗಳ/ಸಿಬ್ಬಂದಿಗಳ ವೇತನವನ್ನು ಪರಿಷ್ಕರಿಸಿ ಆದೇಶಿಸಿದೆ. (ಪ್ರತಿ ಲಗತ್ತಿಸಿದೆ) ಹಾಗೂ ಸರ್ಕಾರದ ವಿವಿಧ ಆದೇಶಗಳಲ್ಲಿ ಸಮವಸ್ತ್ರ ಭತ್ಯೆ, ಸಾರಿಗೆ ಭತ್ಯೆ ಹಾಗೂ ಕಷ್ಟಪರಿಹಾರ ಭತ್ಯೆಗಳನ್ನು ಈಗಾಗಲೇ ಮಂಜೂರು ಮಾಡಿ ಆದೇಶಿಸಿದೆ. ಒಟ್ಟಾರೆಯಾಗಿ ಸದರಿ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದಿಂದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 84,773 ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಅನುಕೂಲವಾಗಿರುತ್ತದೆ. ಇನ್ನುಳಿದ 04 ವೃಂದದ ಅಧಿಕಾರಿ/ಸಿಬ್ಬಂದಿಗಳ ವೇತನ ಶ್ರೇಣಿಯನ್ನು ಪರಿಷ್ಕರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಇ)	ಈ ವರದಿಯನ್ನು ಸಂಪೂರ್ಣ ಜಾರಿ ಮಾಡಲಾಗಿದೆಯೇ;	
ಈ)	ಇಲ್ಲದಿದ್ದಲ್ಲಿ, ಯಾವಾಗ ಜಾರಿ ಮಾಡಲಾಗುವುದು;	

ಸಂಖ್ಯೆ: ಒಇ 59 ಪಿಇಜಿ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

61

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪೊಲೀಸ್ ಇಲಾಖೆಯ ಕೆಲವೊಂದು ವರ್ಗದ ಹುದ್ದೆಗಳ ವೇತನ ಶ್ರೇಣಿಯನ್ನು ಮೇಲ್ದರ್ಜೆಗೇರಿಸುವ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ:

1. ದಿನಾಂಕ: 01-06-2017ರ ಸರ್ಕಾರಿ ಆದೇಶ ಸಂಖ್ಯೆ: ಆಇ 22 ಎಸ್‌ಆರ್‌ಪಿ 2017.
2. ದಿನಾಂಕ: 01-03-2018ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 06 ಎಸ್‌ಆರ್‌ಪಿ 2018.
3. ದಿನಾಂಕ: 19-04-2018ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಎಫ್‌ಡಿ 06 ಎಸ್‌ಆರ್‌ಪಿ 2018.
4. ದಿನಾಂಕ: 29-05-2019ರ ಸರ್ಕಾರಿ ಆದೇಶ ಸಂಖ್ಯೆ: ಆಇ 36 ಎಸ್‌ಆರ್‌ಪಿ 2018.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 01-06-2017ರ ಸರ್ಕಾರಿ ಆದೇಶದನ್ವಯ ರಚಿಸಲ್ಪಟ್ಟಿದ್ದ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ಮುಖ್ಯ ವೇತನ ಶ್ರೇಣಿ ಮತ್ತು 25 ಸ್ಥಾಯಿ ವೇತನ ಶ್ರೇಣಿಗಳು, ಪಿಂಚಣಿ/ಕುಟುಂಬ ಪಿಂಚಣಿ ಮತ್ತು ಇತರೆ ನಿರ್ದಿಷ್ಟ ಭತ್ಯೆಗಳನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ:01-03-2018ರ ಆದೇಶದಲ್ಲಿ ಪರಿಷ್ಕರಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

6ನೇ ರಾಜ್ಯ ವೇತನ ಆಯೋಗವು ಸಂಪುಟ-2ರ ತನ್ನ ವರದಿಯಲ್ಲಿ ಸರ್ಕಾರದ 28 ವಿವಿಧ ಇಲಾಖೆಗಳ ವಿವಿಧ ವೃಂದಗಳ ವೇತನ ಶ್ರೇಣಿಗಳನ್ನು ಮೇಲ್ದರ್ಜೆಗೇರಿಸುವ ಮತ್ತು ನಿರ್ದಿಷ್ಟ ಹುದ್ದೆಗಳಿಗೆ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತದೆ. ಆದುದರಿಂದ, ವೇತನ ಆಯೋಗದ ಎರಡನೇ ಸಂಪುಟದಲ್ಲಿನ ಶಿಫಾರಸ್ಸುಗಳನ್ನು ಪರಿಶೀಲಿಸಲು, ಸರ್ಕಾರವು ಮೇಲೆ (4)ರಲ್ಲಿ ಓದಲಾದ ದಿನಾಂಕ: 29-05-2019ರ ಸರ್ಕಾರಿ ಆದೇಶದಲ್ಲಿ ಅಧಿಕಾರಿ ಸಮಿತಿಯನ್ನು ರಚಿಸಿರುತ್ತದೆ.

6ನೇ ರಾಜ್ಯ ವೇತನ ಆಯೋಗವು ಶ್ರೀ ರಾಘವೇಂದ್ರ ಔರಾದಕರ್ ಸಮಿತಿಯ ಶಿಫಾರಸ್ಸಿನ ಬೆಳಕಿನಲ್ಲಿ ಒಳಾಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿ, ಪೊಲೀಸ್ ಇಲಾಖೆಯಲ್ಲಿನ ನಿರ್ದಿಷ್ಟ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ವೇತನ ಶ್ರೇಣಿಗಳನ್ನು

ಮೇಲ್ದರ್ಜೆಗೇರಿಸಲು ಶಿಫಾರಸ್ಸು ಮಾಡಿರುತ್ತದೆ. ವೇತನ ಆಯೋಗದ ಶಿಫಾರಸ್ಸುಗಳು ಮತ್ತು ಸಂವಾದಿ 2018ರ ವೇತನ ಶ್ರೇಣಿಗಳು ಈ ಕೆಳಕಂಡಂತಿರುತ್ತವೆ:

ಕ್ರ ಸಂ.	ಪೊಲೀಸ್ ಇಲಾಖೆಯಲ್ಲಿನ ವೃಂದ/ಹುದ್ದೆ	ಪ್ರಸ್ತುತ 2012ರ ಪರಿಷ್ಕೃತ ವೇತನ ಶ್ರೇಣಿ (ರೂ.)	ಶಿಫಾರಸ್ಸು ಮಾಡಲಾದ 2012ರ ಪರಿಷ್ಕೃತ ವೇತನ ಶ್ರೇಣಿ (ರೂ.)	ಸಂವಾದಿ 2018ರ ಪರಿಷ್ಕೃತ ವೇತನ ಶ್ರೇಣಿ (ರೂ.)
1	ಪೊಲೀಸ್ ಪೇದೆಗಳು/ಮೀಸಲು ಪೊಲೀಸ್ ಪೇದೆಗಳು	11,600–21,000	12,500–24,000	23,500–47,650
2	ಮುಖ್ಯ ಪೇದೆಗಳು	12,500–24,000	14,550–26,700	27,650–52,650
3	ಸಹಾಯಕ ಸಬ್‌ಇನ್ಸ್‌ಪೆಕ್ಟರ್	14,550–26,700	16,000–29,600	30,350–58,250
4	ಪೊಲೀಸ್ ಇನ್ಸ್‌ಪೆಕ್ಟರ್	21,600–40,050	22,800–43,200	43,100–83,900
5	ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ನಾನ್–ಐಪಿಎಸ್)	36,300–53,850	38,100–55,200	70,850–1,07,100

ಪೊಲೀಸ್ ಇಲಾಖೆಯಲ್ಲಿನ ಈ ಮೇಲಿನ ವೃಂದಗಳ ಗುರುತರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಗಮನದಲ್ಲಿರಿಸಿ, ಈ ಹುದ್ದೆಗಳಿಗೆ ನಿಗದಿಪಡಿಸಲಾದ ವೇತನ ಶ್ರೇಣಿಗಳನ್ನು 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕರಿಸಲು ಸರ್ಕಾರವು ನಿರ್ಧರಿಸಿರುತ್ತದೆ.

ಅದರಂತೆ, ಈ ಕೆಳಗಿನ ಆದೇಶಗಳನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್‌ಆರ್‌ಪಿ 2019
ಬೆಂಗಳೂರು, ದಿನಾಂಕ: 16ನೇ ಜುಲೈ 2019

ಪ್ರಸ್ತಾವನೆಯಲ್ಲಿ ವಿವರಿಸಲಾದ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಮತ್ತು ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2018ರ ನಿಯಮ (4)ರ ಉಪ–ನಿಯಮ (2)ರಡಿ ಪ್ರದತ್ತವಾದ ಅಧಿಕಾರದನ್ವಯ, ಪೊಲೀಸ್ ಇಲಾಖೆಯಲ್ಲಿನ ಈ ಕೆಳಗಿನ ವೃಂದಗಳಿಗೆ ಅನ್ವಯಿಸುವ ವೇತನ ಶ್ರೇಣಿಗಳನ್ನು ದಿನಾಂಕ: 01–08–2019ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ಸರ್ಕಾರವು ಹರ್ಷಿಸುತ್ತದೆ.

ಕ್ರ ಸಂ.	ಪೊಲೀಸ್ ಇಲಾಖೆಯ ವೃಂದ/ಹುದ್ದೆ	2018ರ ಪರಿಷ್ಕೃತ ವೇತನ ಶ್ರೇಣಿ (ರೂ.)
1	ಪೊಲೀಸ್ ಪೇದೆಗಳು/ಮೀಸಲು ಪೊಲೀಸ್ ಪೇದೆಗಳು	23,500–47,650
2	ಮುಖ್ಯ ಪೇದೆಗಳು	27,650–52,650

3	ಸಹಾಯಕ ಸಬ್‌ಇನ್ಸ್‌ಪೆಕ್ಟರ್	30,350–58,250
4	ಪೊಲೀಸ್ ಇನ್ಸ್‌ಪೆಕ್ಟರ್	43,100–83,900
5	ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ನಾನ್–ಐಪಿಎಸ್)	70,850–1,07,100

2. ಈ ಮೇಲೆ ಸಮೂದಿಸಿರುವ ವೃಂದಗಳಲ್ಲಿ ಹುದ್ದೆಗಳನ್ನು ಧಾರಣೆ ಮಾಡಿರುವ ಸಿಬ್ಬಂದಿಗಳ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 43ರಲ್ಲಿನ ಅವಕಾಶಗಳನ್ವಯ ನಿಗದಿಪಡಿಸತಕ್ಕದ್ದು.

3. ವೇತನ ನಿಗದೀಕರಣಕ್ಕೆ ಸಂಬಂಧಿಸಿದಂತೆ ಆದೇಶಗಳು/ಅಧಿಸೂಚನೆಗಳು/ನಿಯಮಗಳಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳು ಮುಂದುವರೆದು ಅನ್ವಯಿಸುತ್ತವೆ.

4. ಈ ಮೇಲಿನ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿಪಡಿಸುವಲ್ಲಿ ಸಮಸ್ಯೆಗಳು ಉಂಟಾದಲ್ಲಿ ಅದನ್ನು ಆದೇಶಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜಿ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–2).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಘನತೆವೆತ್ತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ. ರಾಜಭವನ, ಬೆಂಗಳೂರು–1
4. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ,(ಪಿ.ಬಿ. ನಂ.5398) ಬೆಂಗಳೂರು.
5. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ,(ಪಿ.ಬಿ. ನಂ.5398) ಬೆಂಗಳೂರು.
6. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
9. ಡೈರೆಕ್ಟರ್ ಜನರಲ್ & ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನೃಪತುಂಗ ರೋಡ್, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
11. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು.
13. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
14. ಎಲ್ಲಾ ಜಿಲ್ಲೆಗಳ ಸೂಪರಿಂಟೆಂಡೆಂಟ್ ಆಫ್ ಪೊಲೀಸ್
15. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
16. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
17. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
19. ವಾರಪತ್ರ/ಶಾಖೆಯ ರಕ್ಷಾ-ಕಡತ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1711**

ಉತ್ತರಿಸಬೇಕಾದ ದಿನಾಂಕ : 16/03/2021

ಸದಸ್ಯರ ಹೆಸರು : ಡಾ: ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಡಾ: ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣವನ್ನು ಅಭಿವೃದ್ಧಿ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಈ ಕ್ರೀಡಾಂಗಣದ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣವೆಷ್ಟು; ಯಾವ ಕಾಲ ಮಿತಿಯಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು;	ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಡಾ: ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು 2020-21 ನೇ ಸಾಲಿನಲ್ಲಿ ಯಾವುದೇ ಅನುದಾನ ಮೀಸಲಿಟ್ಟಿರುವುದಿಲ್ಲ. ಈ ಕ್ರೀಡಾಂಗಣವನ್ನು ರೂ 500.00 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು, ಅನುದಾನದ ಲಭ್ಯತೆ ಆಧರಿಸಿ, ನಿಗದಿತ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ, ಕಾಮಗಾರಿ ಕೈಗೆತ್ತಿಕೊಳ್ಳುವ ಬಗ್ಗೆ ಪರಿಗಣಿಸಲಾಗುವುದು.
ಇ)	ಈ ವಿಧಾನ ಸಭಾ ಕ್ಷೇತ್ರಕ್ಕೆ ಕ್ರೀಡಾ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಿದ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ)	ಈ ಕ್ಷೇತ್ರದಲ್ಲಿರುವ ಜಿಮ್ ಕೇಂದ್ರಗಳೆಷ್ಟು ;	ನೆಲಮಂಗಲ ಕ್ಷೇತ್ರದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಒಂದು ಜಿಮ್ ಕೇಂದ್ರ ಇದ್ದು, ನೆಲಮಂಗಲ ತಾಲ್ಲೂಕು ಕ್ರೀಡಾಂಗಣದಲ್ಲಿ ಕಾರ್ಯನಿರ್ವಹಿಸುತ್ತಿದೆ.
ಉ)	ಜಿಮ್ ಮಾಡುವ ಸಲಕರಣೆಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ; ಪ್ರತಿ ಜಿಮ್ ಕೇಂದ್ರ ಸ್ಥಾಪನೆಗೆ ಇರುವ ಮಾನದಂಡಗಳೇನು ?	ಹೌದು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ 'ಯುವಶಕ್ತಿಕೇಂದ್ರ' ಯೋಜನೆಯಡಿ ಗರಿಷ್ಟ ರೂ 15.00 ಲಕ್ಷ ಘಟಕ ವೆಚ್ಚದಲ್ಲಿ ಜಿಮ್ ಕೇಂದ್ರಗಳನ್ನು ಸ್ಥಾಪಿಸಲು ಕೆಳಕಾಣಿಸಿದ ಮಾನದಂಡಗಳನ್ನು ನಿಗದಿಪಡಿಸಲಾಗಿದೆ:- 1. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಕ್ರೀಡಾಂಗಣಗಳು, ತಾಲ್ಲೂಕು ಕ್ರೀಡಾಂಗಣಗಳು, ಕ್ರೀಡಾ ವಸತಿ ಶಾಲೆ/ನಿಲಯಗಳು ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ. 2. ಸರ್ಕಾರಿ ಕಾಲೇಜುಗಳಲ್ಲಿ 1,000 ಕ್ಕೂ ಹೆಚ್ಚು ಯುವಕ/ಯುವತಿಯರು ವ್ಯಾಸಂಗ ಮಾಡುತ್ತಿರಬೇಕು. 3. ಯುವ ಶಕ್ತಿ ಕೇಂದ್ರ ಆರಂಭಿಸಲು ಕನಿಷ್ಟ 25X25 ಅಡಿ ಅಳತೆಯ ಕೊಠಡಿ ಇರಬೇಕು. 4. ಸದರಿ ಕಾಲೇಜಿನಲ್ಲಿ ಓರ್ವ ದೈಹಿಕ ಶಿಕ್ಷಣ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರ ಬೇಕು.

ವೈಎಸ್‌ಡಿ-ಇಬಿಬಿ/41/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

1711

ಅನುಬಂಧ		
ಕಳೆದ ಮೂರು ವರ್ಷಗಳಲ್ಲಿ ಯುವ ಸಬಲೀಕರಣ ಮತ್ತುಕ್ರೀಡಾಇಲಾಖೆಯ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಿರುವ ಒಟ್ಟು ಅನುದಾನ ರೂ.105.94 ಲಕ್ಷಗಳಾಗಿದ್ದು, ವಿವರಗಳು ಈ ಕೆಳಕಂಡಂತಿದೆ:-		
ಕ್ರಸಂ	ಲೆಕ್ಕ ಶೀರ್ಷಿಕೆ	ಬಿಡುಗಡೆ ಮಾಡಿರುವ ಅನುದಾನದ ವಿವರ (ರೂ ಲಕ್ಷಗಳಲ್ಲಿ)
2017–18		
	ರಾಜ್ಯ ವಲಯ	
1	ನಮ್ಮೂರ ಶಾಲೆ ನಮ್ಮೂರ ಯುವಜನರು	1.00
2	ಗ್ರಾಮೀಣಕ್ರೀಡೋತ್ಸವ	1.00
3	ಯುವ ಶಕ್ತಿ ಸಂಘ	5.00
4	ಯುವಚೈತನ್ಯಯೋಜನೆ	17.60
5	ಯುವ ಪ್ರಶಸ್ತಿ	0.10
	ಜಿಲ್ಲಾ ಪಂಚಾಯತ್ ವಲಯ	
1	ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ	3.00
2	ಕ್ರೀಡಾಂಗಣಗಳ ನಿರ್ವಹಣೆ/ನಿರ್ಮಾಣ	0.45
3	ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ	0.54
4	ಬಯಲುರಂಗ ಮಂದಿರಗಳ ನಿರ್ಮಾಣ	5.00
	ಒಟ್ಟು	**33.69**
2018–19		
	ರಾಜ್ಯ ವಲಯ	
1	ನಮ್ಮೂರ ಶಾಲೆ ನಮ್ಮೂರಯುವಜನರು	1.00
2	ಕೌಶಲ್ಯತರಬೇತಿ ಶಿಬಿರ	1.25
	ಜಿಲ್ಲಾ ಪಂಚಾಯತ್ ವಲಯ	
1	ಕ್ರೀಡಾಂಗಣಗಳ ನಿರ್ವಹಣೆ/ನಿರ್ಮಾಣ	7.5
2	ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ	0.97
3	ಬಯಲುರಂಗ ಮಂದಿರಗಳ ನಿರ್ಮಾಣ	12.5
		23.22

.... 2)

2019–20		
	ರಾಜ್ಯ ವಲಯ	
1	ಗ್ರಾಮೀಣಕ್ರೀಡೋತ್ಸವ	1.00
2	ನಮ್ಮೂರ ಶಾಲೆ ನಮ್ಮೂರಯೋಜನೆ	1.00
3	ವಿಶೇಷ ಘಟಕಯೋಜನೆ ಮತ್ತುಗಿರಿಜನಉಪಯೋಜನೆ	1.03
	ಜಿಲ್ಲಾ ಪಂಚಾಯತ್ ವಲಯ	
1	ಕ್ರೀಡಾಕೂಟ ಮತ್ತು ರ‍್ಯಾಲಿಗಳ ಸಂಘಟನೆ	2.19
2	ಕ್ರೀಡಾಂಗಣಗಳ ನಿರ್ವಹಣೆ/ನಿರ್ಮಾಣ	14.95
3	ಗ್ರಾಮೀಣಕ್ರೀಡಾ ಕೇಂದ್ರಗಳು	18
4	ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ	0.61
5	ಕ್ರೀಡಾಸಾಮಗ್ರಿಗಳನ್ನು ಕೊಳ್ಳಲು ಮತ್ತುಆಟದ ಮೈದಾನಗಳನ್ನು ಅಭಿವೃದ್ಧಿಗೊಳಿಸಲು ಶೈಕ್ಷಣಿಕ ಮತ್ತುಇತರೆ ಸಂಸ್ಥೆಗಳಿಗೆ ಸಹಾಯ	2.45
6	ಬಯಲುರಂಗಮಂದಿರಗಳ ನಿರ್ಮಾಣ	7.5
7	ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ	0.3
		49.03
	ಒಟ್ಟು	**105.94**

ವೈಎಸ್‌ಡಿ - ಇಬಿಬಿ/41/2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1712

ಸದಸ್ಯರ ಹೆಸರು : ಶ್ರೀ ಶ್ರೀನಿವಾಸಮೂರ್ತಿ ಕೆ. ಡಾ|| (ನೆಲಮಂಗಲ)

ಉತ್ತರಿಸುವ ದಿನಾಂಕ : 16.03.2021

ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
1	ಅ) ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನೀಡಿದ ಅನುದಾನವೆಷ್ಟು (ವಿವರ ಕೋರಲಾಗಿದೆ)	ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನೀಡಿದ ಅನುದಾನದ ವಿವರಗಳು ಈ ಕೆಳಕಂಡಂತಿದೆ. (ರೂ. ಲಕ್ಷಗಳಲ್ಲಿ) (ಕೆಳಗಿನ ಕೋಷ್ಟಕ)
2	ಆ) ಈ ಮಂಡಳಿಗೆ ಬಿಡುಗಡೆ ಮಾಡಿದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಇದುವರೆಗೂ ಕೈಗೊಳ್ಳಲಾಗಿದೆ; ಈ ಪೈಕಿ ಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು; (ವಿವರವಾದ ಮಾಹಿತಿ ನೀಡುವುದು)	ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿದ ಅನುದಾನದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
3	ಇ) ಈ ಮಂಡಳಿಯಿಂದ ಜಿಲ್ಲಾವಾರು ಮಂಜೂರು ಮಾಡಿದ ಅನುದಾನ ವೆಷ್ಟು; (ವಿವರ ನೀಡುವುದು)	ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಜಿಲ್ಲಾವಾರು ಮಂಜೂರು ಮಾಡಿದ ಅನುದಾನದ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
4	ಈ) ಸದರಿ ಮಂಡಳಿಯಲ್ಲಿರುವ ಯೋಜನೆಗಳಾವುವು; ಇದನ್ನು ಅನುಷ್ಠಾನಗೊಳಿಸಲು ಇರುವ ಮಾನದಂಡಗಳೇನು;	ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿರುವ ಯೋಜನೆಗಳು ಈ ಕೆಳಕಂಡಂತಿದೆ. 1) ಸಾಮಾನ್ಯ ಯೋಜನೆ (ಬಂಡವಾಳ ವೆಚ್ಚ) 2) ವಿಶೇಷ ಘಟಕ ಯೋಜನೆ 3) ಗಿರಿಜನ ಉಪ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಜಿಲ್ಲೆ	ವಿಧಾನ ಸಭಾ ಕ್ಷೇತ್ರದ ಹೆಸರು	ಬಿಡುಗಡೆ ಮಾಡಿದ ಅನುದಾನ
1	2018-19	ಬೆಂಗಳೂರು ಗ್ರಾಮಾಂತರ	ನೆಲಮಂಗಲ	45.20
2	2019-20			41.90
3	2020-21			79.03

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1712ರ ಅನುಬಂಧ-1

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ

16	ಗಿರಿಜನ	2017-18	ನೆಲಮಂಗಲ ತಾ|| ಮರಳಕುಂಟೆ ಗ್ರಾ|| ಪಂ|| ಬರಗೂರು ಗ್ರಾಮದ ಎಸ್.ಟಿ. ಜನಾಂಗದ ಅಂಜಿನಪ್ಪನವರ ಸ.ನಂ.77 ರ ಪಕ್ಕದಲ್ಲಿ ಹರಿಯುವ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ	5.00	ಮುಗಿದಿದೆ
17	ವಿಶೇಷ ಘಟಕ ಯೋಜನೆ	2018-19	ನೆಲಮಂಗಲ ತಾಲ್ಲೂಕು ಟಿ. ಬೇಗೂರು ಗ್ರಾ.ಪಂ. ಕಂಬಯ್ಯನಪಾಳ್ಯ ಗ್ರಾಮದ ಎಸ್.ಸಿ. ಜನಾಂಗದ ರಾಜಣ್ಣನವರ ಸರ್ವೆ ನಂ. 104ರ ಜಮೀನಿನಲ್ಲಿ ಹರಿಯುವ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	4.00	ಮುಗಿದಿದೆ
18		2018-19	ನೆಲಮಂಗಲ ತಾಲ್ಲೂಕು ಶ್ರೀನಿವಾಸ ಗ್ರಾ.ಪಂ. ಮದಲಕೋಟೆ ಗ್ರಾಮದ ಎಸ್.ಸಿ. ಜನಾಂಗದ ಲಕ್ಷ್ಮಮ್ಮನವರ ಸರ್ವೆ ನಂ. 91ರ ಜಮೀನಿನಲ್ಲಿ ಹರಿಯುವ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	4.00	ಮುಗಿದಿದೆ
19		2018-19	ನೆಲಮಂಗಲ ತಾಲ್ಲೂಕು ಸೋಲದೇವನಹಳ್ಳಿ ಗ್ರಾ.ಪಂ. ಮಂಟನಕುರ್ಚಿ ಗ್ರಾಮದ ಸ.ನಂ. 99 ರ ಜಮೀನಿನ ಹತ್ತಿರ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	4.00	ಮುಗಿದಿದೆ
20		2018-19	ನೆಲಮಂಗಲ ತಾಲ್ಲೂಕು ಹಸಿರುವಳ್ಳಿ ಗ್ರಾ.ಪಂ. ಪಾದಕುಂಟೆ ನವಗ್ರಾಮ ಕಾಲೋನಿ ಎಸ್.ಸಿ. ಜನಾಂಗದ ಮಾರಯ್ಯನವರ ಮನೆಯಿಂದ ನರಸಿಂಹಮೂರ್ತಿರವರ ಮನೆಯವರೆಗೆ ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ	4.00	ಮುಗಿದಿದೆ
21		2018-19	ನೆಲಮಂಗಲ ತಾಲ್ಲೂಕು ಹಸಿರುವಳ್ಳಿ ಗ್ರಾ.ಪಂ. ಪಾದಕುಂಟೆ ನವಗ್ರಾಮ ಕಾಲೋನಿ ಎಸ್.ಸಿ. ಜನಾಂಗದ ಹನುಮಂತರಾಯಪ್ಪನವರ ಮನೆಯಿಂದ ಗಂಗಮ್ಮನವರ ಮನೆಯವರೆಗೆ ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ	4.38	ಮುಗಿದಿದೆ
22	ಸಾಮಾನ್ಯ ಯೋಜನೆ	2019-20	ನೆಲಮಂಗಲ ತಾಲ್ಲೂಕು ವಿಶ್ವೇಶ್ವರಪುರ ಗ್ರಾ.ಪಂ. ಕಣೇಗೌಡನಹಳ್ಳಿ ಗ್ರಾಮದ ಸ.ನಂ. 24 ರಲ್ಲಿ ಹರಿಯುವ ಸರ್ಕಾರಿ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ	20.00	ಮುಗಿದಿದೆ
23		2019-20	ನೆಲಮಂಗಲ ತಾಲ್ಲೂಕು ದೊಡ್ಡಬೆಲೆ ಗ್ರಾ.ಪಂ. ತಡಸೀಘಟ್ಟ ಗ್ರಾಮದ ಸ.ನಂ. 21 ರಲ್ಲಿ ಸರ್ಕಾರಿ ಕೆರೆಯಲ್ಲಿ ರಿವಿಟ್‌ಮೆಂಟ್ ನಿರ್ಮಾಣ ಕಾಮಗಾರಿ	20.00	ಮುಗಿದಿದೆ
24		2019-20	ನೆಲಮಂಗಲ ತಾಲ್ಲೂಕು ಕಳಲುಘಟ್ಟ ಗ್ರಾ.ಪಂ. ಕಳಲುಘಟ್ಟ ಗ್ರಾಮದ ಕೆಂಪಮ್ಮರವರ ಜಮೀನು ಸ.ನಂ. 42/ಪಿ/14 ರಲ್ಲಿ ಹರಿಯುವ ಸರ್ಕಾರಿ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	20.00	ಮುಗಿದಿದೆ
25		2019-20	ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ಟಿ.ಬೇಗೂರು ಪಂ. ವ್ಯಾಪ್ತಿಯ ತೊರೆಕೆಂಪೋಹಳ್ಳಿ, ಸರ್ಕಾರಿ ಹಳ್ಳದ ಸ.ನಂ.48 ರಲ್ಲಿ ಪಿಕಪ್ ನಿರ್ಮಾಣ ಕಾಮಗಾರಿ	5.00	ಅಂ.ಪಟ್ಟಿ ಬಂದಿದೆ
26		2019-20	ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ಟಿ.ಬೇಗೂರು ಪಂ ವ್ಯಾಪ್ತಿಯ ತೊರೆಕೆಂಪೋನ ಹಳ್ಳಿ, ಸರ್ಕಾರಿ ಹಳ್ಳದ ಸ.ನಂ.50 ರಲ್ಲಿ ಪಿಕಪ್ ನಿರ್ಮಾಣ ಕಾಮಗಾರಿ	5.00	ಅಂ.ಪಟ್ಟಿ ಬಂದಿದೆ
27		2019-20	ನೆಲಮಂಗಲ ತಾಲ್ಲೂಕು ಕಣೇಗೌಡನಹಳ್ಳಿಯ ಕೆರೆಯ ಅಭಿವೃದ್ಧಿ ಕಾಮಗಾರಿ	5.00	ಪ್ರಗತಿಯಲ್ಲಿದೆ
28	ಸಾಮಾನ್ಯ ಯೋಜನೆ	2019-20	ನೆಲಮಂಗಲ ತಾಲ್ಲೂಕು ಕಣೆಗೊಂಡನಹಳ್ಳಿ ಗ್ರಾಮದ ಸರ್ಕಾರಿ ಸ.ನಂ. 24/6 ರ ನಾಗರಾಜು ರಘವಯ್ಯ ಜಮೀನಿನ ಅಡ್ಡಲಾಗಿ ತಡೆಗೋಡೆ ನಿರ್ಮಾಣ ಕಾಮಗಾರಿ	5.00	ಪ್ರಗತಿಯಲ್ಲಿದೆ
29		2019-20	ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಹೋಬಳಿ ಕೊಡಿಗೇಹಳ್ಳಿ ಗ್ರಾ.ಪಂ. ಓಬಳಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಕಟ್ಟಡ ನಿರ್ಮಾಣ ಕಾಮಗಾರಿ	30.00	ಅಂ.ಪಟ್ಟಿ ಬಂದಿದೆ
30		2019-20	ನೆಲಮಂಗಲ ತಾಲ್ಲೂಕು ಹಸುರುವಳ್ಳಿ ಗ್ರಾ.ಪಂ. ಪಾದಕುಂಟೆ ನವಗ್ರಾಮ ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	10.00	ಮುಗಿದಿದೆ

ನಿರ್ದೇಶಕರು
ಪ್ರದೇಶಾಭಿವೃದ್ಧಿ ಮಂ...
ಯೋಜನಾ ಇಲಾಖೆ
7ನೇ ಮಹಡಿ, ಬಹುಮಹಡಿ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001

1712

ಚುಕ್ಕೆ ಗುರುತಿಲ್ಲದ ಪ್ರಶ್ನೆ 1712ರ ಅನುಬಂಧ-2
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ
ಜಿಲ್ಲಾವಾರು ಮಂಜೂರು ಮಾಡಿದ ಅನುದಾನದ ವಿವರ

ಕ್ರ. ಸಂ.	ಜಿಲ್ಲೆ	ವರ್ಷವಾರು ಮಂಜೂರು ಮಾಡಿದ ಅನುದಾನ		
		2018-19	2019-20	2020-21
1	ಬಾಗಲಕೋಟೆ	64.43	105.57	51.74
2	ಬೆಳಗಾವಿ	103.81	156.48	233.18
3	ಬೆಂಗಳೂರು ಗ್ರಾಮಾಂತರ	141.22	171.40	118.69
4	ಚಿಕ್ಕಬಳ್ಳಾಪುರ	415.63	232.93	101.62
5	ಚಿತ್ರದುರ್ಗ	275.94	392.39	181.42
6	ದಾವಣಗೆರೆ	81.99	61.17	32.29
7	ಧಾರವಾಡ	157.00	203.24	160.15
8	ಗದಗ	82.38	133.63	102.69
9	ಹಾಸನ	188.52	197.34	51.34
10	ಹಾವೇರಿ	73.48	55.04	28.78
11	ಕೋಲಾರ	171.63	291.01	382.09
12	ರಾಮನಗರ	100.15	444.57	357.98
13	ತುಮಕೂರು	918.28	742.79	442.63
14	ವಿಜಯಪುರ	228.12	274.72	82.13
	ಒಟ್ಟು	**3002.57**	**3462.29**	**2326.73**

ನಿರ್ದೇಶಕರು
ಪ್ರದೇಶಾಭಿವೃದ್ಧಿ ಮಂಡಳಿ
ಯೋಜನಾ ಇಲಾಖೆ
7ನೇ ಮಹಡಿ, ಬಹುಮಹಡಿ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001

C:\Users\dd-adb-pd\Desktop\1712\Annexure-1.2 & 3

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1717
ಮಾನ್ಯ ಸದಸ್ಯರ ಹೆಸರು	ಶ್ರೀ ವೀರಭದ್ರಯ್ಯ ಎಂ.ವಿ (ಮಧುಗಿರಿ)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ಇದುವರೆಗೂ ಎಂ.ಎಸ್.ಐ.ಎಲ್. ವತಿಯಿಂದ ಎಷ್ಟು ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ಮಂಜೂರು ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2 ರಂತೆ ಮಧುಗಿರಿ ತಾಲ್ಲೂಕಿಗೆ 02 ಎಂ.ಎಸ್.ಐ.ಎಲ್ ಮದ್ಯದಂಗಡಿಗಳು ಮಂಜೂರಾಗಿದ್ದು, ವಿವರ ಕೆಳಕಂಡಂತಿದೆ. 1. ಶಂಕರ್ ಟಾಕೀಸ್ ಹತ್ತಿರ, ಮಧುಗಿರಿ ಟೌನ್ 2. ಶಿವನಗೆರೆ (ಮಧುಗಿರಿ ತಾಲ್ಲೂಕಿನ ಶಿವನಗೆರೆ ಯಿಂದ ಸಿರಾ ತಾಲ್ಲೂಕಿನ ಚೆಂಗಾವರ ಗ್ರಾಮಕ್ಕೆ ಸ್ಥಳಾಂತರಗೊಂಡಿರುತ್ತದೆ) ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಮಧುಗಿರಿ ತಾಲ್ಲೂಕಿಗೆ ಒಟ್ಟು 04 ಎಂ.ಎಸ್.ಐ.ಎಲ್ ಸನ್ನದುಗಳು ಮಂಜೂರಾಗಿದ್ದು, ವಿವರ ಕೆಳಕಂಡತಿದೆ. 1. ಕಡತಗತ್ತೂರು (2020-21 ರ ಸಾಲಿನಲ್ಲಿ ಸ್ಥಗಿತಗೊಂಡಿದೆ) 2. ಸಜ್ಜೆಹೊಸಹಳ್ಳಿ 3. ಬೆಡತ್ತೂರು 4. ರೆಡ್ಡಿಹಳ್ಳಿ
ಆ)	ಚಿಲ್ಲರೆ ಮಾರಾಟ ಮಳಿಗೆ ಮಂಜೂರಾತಿಗಾಗಿ ಇರುವ ಮಾನದಂಡಗಳು ಯಾವುದು? (ವಿವರ ನೀಡುವುದು)	ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳು ಕೆಳಕಂಡಂತಿವೆ: i. ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು.

ii. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2 ರಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ.

iii. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ.

- ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.
- ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು.
- ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.
- ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.

iv. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್‌ಎಲ್ 2020 ದಿ:08.09.2020 ರಲ್ಲಿ ಈಗಾಗಲೇ ಮಂಜೂರು ಮಾಡಿರುವ ಒಟ್ಟು 900 ಸನ್ನದುಗಳ ಪೈಕಿ ಬಾಕಿ ಉಳಿದಿರುವ 441 ಸನ್ನದುಗಳನ್ನು ಕೆಳಕಂಡ ಷರತ್ತುಗಳ ಮೇಲೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

- ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು.

1717

		ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು. • ಸಿಎಲ್–11(ಸಿ) ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31.12.2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು. • ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳತಕ್ಕದ್ದು.

ಆಇ 21 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2264

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

***

<table>
<tr><th>ಕ್ರ ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಬೆಳಗಾವಿ ಜಿಲ್ಲೆಯ ಕ್ರೀಡಾಂಗಣ ಮತ್ತಿತರ ಅಭಿವೃದ್ಧಿ ಕಾಮಗಾರಿಗಳು ಹಾಗೂ ಇತರೆ ಯೋಜನೆಗಳಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಸರ್ಕಾರ ನಿಗದಿಪಡಿಸಿ ಬಿಡುಗಡೆ ಮಾಡಿದ ಅನುದಾನವೆಷ್ಟು; (ವಿವರ ನೀಡುವುದು)</td><td>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೆಳಗಾವಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ವಿವಿಧ ಯೋಜನೆಗಳಡಿ ಒಟ್ಟು ರೂ.454.79 ಲಕ್ಷ ಬಿಡುಗಡೆ ಮಾಡಲಾಗಿದ್ದು, ವಿವರ ಕೆಳಕಂಡಂತಿದೆ:-
(ರೂ. ಲಕ್ಷಗಳಲ್ಲಿ)
<table><tr><th>ಯೋಜನೆಯ ವಿವರ</th><th>2018-19</th><th>2019-20</th><th>2020-21</th></tr><tr><td>ಕ್ರೀಡಾಂಗಣ ಅಭಿವೃದ್ಧಿ</td><td>70.00</td><td>164.79</td><td>90.00</td></tr><tr><td>ಗ್ರಾಮೀಣ ಗರಡಿ ಮನೆ</td><td>90.00</td><td>40.00</td><td>-</td></tr><tr><td></td><td>160.00</td><td>204.79</td><td>90.00</td></tr></table>ಕಾಮಗಾರಿವಾರು ವಿವರ ಅನುಬಂಧ-1 ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಈ ಅನುದಾನದ ಪೈಕಿ ನಿರ್ವಹಿಸಿರುವ ಕಾಮಗಾರಿಗಳಾವುವು; ಈ ಕಾಮಗಾರಿಗಳ ಪೈಕಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳಾವುವು; ಕಾಮಗಾರಿಗಳು ಅಪೂರ್ಣಗೊಳ್ಳಲು ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು)</td><td>ಈ ಅನುದಾನಕ್ಕೆ ಸಂಬಂಧಿಸಿದಂತೆ, ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಕಾಮಗಾರಿಗಳ ಪಟ್ಟಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ಗ್ರಾಮೀಣ ಗರಡಿ ಮನೆ ನಿರ್ಮಾಣ ಕಾಮಗಾರಿಗಳಿಗೆ ಪೂರ್ಣ ಅನುದಾನ ಬಿಡುಗಡೆ ಮಾಡಲಾಗಿದ್ದು, ಸೂಕ್ತ ನಿವೇಶನ ಲಭ್ಯವಾಗದ ಹಿನ್ನೆಲೆಯಲ್ಲಿ ಕೆಲವು ಕಾಮಗಾರಿಗಳು ಅಪೂರ್ಣಗೊಂಡಿರುತ್ತವೆ.</td></tr>
<tr><td>ಇ)</td><td>ಈ ಪೈಕಿ ಬೆಳಗಾವಿ ಜಿಲ್ಲೆ ರಾಯಭಾಗ ಮತ ಕ್ಷೇತ್ರಕ್ಕೆ ಒದಗಿಸಿರುವ ಅನುದಾನವೆಷ್ಟು; ಈ ಅನುದಾನದಲ್ಲಿ ನಿರ್ವಹಿಸಿರುವ ಕಾಮಗಾರಿಗಳಾವುವು; (ಸಂಪೂರ್ಣ ವಿವರ ನೀಡುವುದು)</td><td>ಬೆಳಗಾವಿ ಜಿಲ್ಲೆ ರಾಯಭಾಗ ಮತಕ್ಷೇತ್ರಕ್ಕೆ ಯಾವುದೇ ಅನುದಾನ ಒದಗಿಸಿರುವುದಿಲ್ಲ.</td></tr>
</table>

ಈ)	ಪ್ರಸಕ್ತ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಇಲಾಖಾ ವತಿಯಿಂದ ಒದಗಿಸಬಹುದಾದ ಅನುದಾನದ ಅಂದಾಜು ಮೊತ್ತವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಯನ್ನು ರೂ.100.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಾಗಿ ರೂ.50.00 ಲಕ್ಷಗಳನ್ನು ದಿನಾಂಕ: 26.02.2021ರಂದು ಬೆಳಗಾವಿ ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿರುತ್ತದೆ.

ವೈಎಸ್‌ಡಿ-ಇಬಿಬಿ/44/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು.

ಅನುಬಂಧ-1

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೆಳಗಾವಿ ಜಿಲ್ಲೆಯ ಕ್ರೀಡಾಂಗಣ ಅಭಿವೃದ್ಧಿ ಮತ್ತು ಇತರೆ ಯೋಜನೆಯಡಿ ಬಿಡುಗಡೆ ಮಾಡಿರುವ ಒಟ್ಟು ಅನುದಾನ.

2018-19ನೇ ಸಾಲಿನಲ್ಲಿ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಗಳಿಗೆ ವೆಚ್ಚ ಭರಿಸಲಾಗಿರುವ ವಿವರ

ಕ್ರ. ಸಂ	ಕಾಮಗಾರಿ ವಿವರ	ಬಿಡುಗಡೆಯಾದ ಅನುದಾನ (ರೂ ಲಕ್ಷಗಳಲ್ಲಿ)
1	ಬೆಳಗಾವಿ ಜಿಲ್ಲೆಯ ಒಳಾಂಗಣ ಕ್ರೀಡಾಂಗಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.	20.00
2	ಬೆಳಗಾವಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕ ಕ್ರೀಡಾ ವಸತಿ ನಿಲಯ	50.00
	ಒಟ್ಟು	**70.00**

2018-19ನೇ ಸಾಲಿನಲ್ಲಿ ಗ್ರಾಮೀಣ ಗರಡಿ ಮನೆ ನಿರ್ಮಾಣಕ್ಕೆ ವೆಚ್ಚ ಭರಿಸಲಾಗಿರುವ ವಿವರ

ಕ್ರ. ಸಂ	ಜಿಲ್ಲೆ	ಗರಡಿಮನೆ ನಿರ್ಮಾಣ ಸ್ಥಳ	ಬಿಡುಗಡೆಯಾದ ಮೊತ್ತ
1.	ಬೆಳಗಾವಿ	ಸವದತ್ತಿ ತಾಲ್ಲೂಕು ಹನುಮಗೇರಿ ಓಣಿಯ ಸಗತಿಕಟ್ಟಿ ಗರಡಿಮನೆ ನಿರ್ಮಾಣ.	10.00
2.	ಬೆಳಗಾವಿ	ಬೈಲಹೊಂಗಲ ತಾಲ್ಲೂಕು ಹುಣಸಿಕಟ್ಟಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.	10.00
3.	ಬೆಳಗಾವಿ	ಚಿಕ್ಕೋಡಿ ತಾಲ್ಲೂಕು ಹಿರೇಕೂಡಿ ಗ್ರಾಮದಲ್ಲಿ ಗರಡಿಮನೆ ನಿರ್ಮಾಣ.	10.00
4.	ಬೆಳಗಾವಿ	ಬೆಳಗಾವಿ ತಾಲ್ಲೂಕು ಯಳ್ಳೂರ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.	10.00
5.	ಬೆಳಗಾವಿ	ಬೆಳಗಾವಿ ತಾಲ್ಲೂಕು ಶ್ರೀ ಕಂಠೀರವ ಕೇಸರಿ ಆರ್.ಎಂ.ಎಸ್.ಎ. ಸೊಸೈಟಿ, ಸಾವಗಾಂವ	10.00
6.	ಬೆಳಗಾವಿ	ಚಿಕ್ಕೋಡಿ ತಾಲ್ಲೂಕಿನ ಬೇಡಕಿಹಾಳ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.	10.00
7.	ಬೆಳಗಾವಿ	ಖಾನಾಪುರ ತಾಲ್ಲೂಕಿನ ಮುಗಳಿಹಾಳ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.	10.00
8.	ಬೆಳಗಾವಿ	ಗೋಕಾಕ ತಾಲ್ಲೂಕಿನ ಸುಲಧಾಳ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
9.	ಬೆಳಗಾವಿ	ಬೈಲಹೊಂಗಲದಲ್ಲಿ ಗರಡಿ ಮನೆ ನಿರ್ಮಾಣ	10.00
		ಒಟ್ಟು	90.00

2019-20ನೇ ಸಾಲಿನಲ್ಲಿ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಗಳಿಗೆ ವೆಚ್ಚ ಭರಿಸಲಾಗಿರುವ ವಿವರ

ಕ್ರ. ಸಂ	ಕಾಮಗಾರಿ ವಿವರ	ಬಿಡುಗಡೆಯಾದ ಅನುದಾನ (ರೂ ಲಕ್ಷಗಳಲ್ಲಿ)
1	ಬೆಳಗಾವಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕ ಕ್ರೀಡಾ ವಸತಿ ನಿಲಯ	59.90
2	ಬೆಳಗಾವಿ ಕಡೋಲಿ ಕ್ರೀಡಾಂಗಣಕ್ಕ ಕಾಂಪೌಂಡು ಗೋಡೆ ನಿರ್ಮಾಣ.	54.89
3	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ.	50.00
	ಒಟ್ಟು	**164.79**

2019-20ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಗ್ರಾಮೀಣ ಗರಡಿ ಮನೆ ನಿರ್ಮಾಣಕ್ಕೆ ವೆಚ್ಚ ಭರಿಸಲಾಗಿರುವ ವಿವರ

ಕ್ರ. ಸಂ	ಜಿಲ್ಲೆ	ಗರಡಿ ಮನೆ ನಿರ್ಮಾಣ ಕಾಮಗಾರಿ ಸ್ಥಳ	ಬಿಡುಗಡೆ ಮಾಡಿರುವ ಮೊತ್ತ (ರೂ ಲಕ್ಷಗಳಲ್ಲಿ)
1.	ಬೆಳಗಾವಿ	ಗೋಕಾಕ್ ತಾಲ್ಲೂಕಿನ ಮೆಳವಂಕಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
2.	ಬೆಳಗಾವಿ	ಬೆಳಗಾವಿ ತಾಲ್ಲೂಕಿನ ದಾಮಣೆ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
3.	ಬೆಳಗಾವಿ	ಹುಕ್ಕೇರಿ ತಾಲ್ಲೂಕಿನ ಬೆಳವಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
4.	ಬೆಳಗಾವಿ	ನಿಪ್ಪಾಣಿ ವಿ.ಸ. ಕ್ಷೇತ್ರದ ವ್ಯಾಪ್ತಿಯ ಜತ್ರಾಟ ಗ್ರಾಮಕ್ಕೆ ಗರಡಿ ಮನೆ ನಿರ್ಮಾಣ	10.00
		ಒಟ್ಟು	40.00

2020-21ನೇ ಸಾಲಿನಲ್ಲಿ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಗಳಿಗೆ ವೆಚ್ಚ ಭರಿಸಲಾಗಿರುವ ವಿವರ

ಕ್ರ. ಸಂ	ಕಾಮಗಾರಿ ವಿವರ	ಬಿಡುಗಡೆಯಾದ ಅನುದಾನ (ರೂ ಲಕ್ಷಗಳಲ್ಲಿ)
1	ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	50.00
2	ಬೆಳಗಾವಿ ನಗರದ ವಿವಿಧೋದ್ದೇಶ ಒಳಾಂಗಣ ಕ್ರೀಡಾಂಗಣ ನಿರ್ಮಾಣ	40.00
	ಒಟ್ಟು	**90.00**

ಅನುಬಂಧ-2 2264

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆವತಿಯಿಂದ ಬೆಳಗಾವಿ ಜಿಲ್ಲೆಯ ಕ್ರೀಡಾಂಗಣ ಅಭಿವೃದ್ಧಿ ಮತ್ತು ಇತರೆ ಯೋಜನೆಯಡಿ ಕೈಗೊಂಡು ಪೂರ್ಣಗೊಳಿಸಲಾಗಿರುವ ಕಾಮಗಾರಿಗಳ ವಿವರ

ಕ್ರ. ಸಂ	ಕಾಮಗಾರಿ ವಿವರ
1	ಬೆಳಗಾವಿ ಜಿಲ್ಲೆಯ ಒಳಾಂಗಣ ಕ್ರೀಡಾಂಗಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.
2	ಬೆಳಗಾವಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕ ಕ್ರೀಡಾ ವಸತಿ ನಿಲಯ
3	ಬೆಳಗಾವಿ ತಾಲ್ಲೂಕು ಯಳ್ಳೂರ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.
4	ಬೆಳಗಾವಿ ತಾಲ್ಲೂಕು ಶ್ರೀ ಕಂಠೀರವ ಕೇಸರಿ ಆರ್.ಎಂ.ಎಸ್.ಎ. ಸೊಸೈಟಿ, ಸಾವಗಾಂವ

ಬೆಳಗಾವಿ ಜಿಲ್ಲೆಯ ಕ್ರೀಡಾಂಗಣ ಅಭಿವೃದ್ಧಿ ಮತ್ತು ಇತರೆ ಯೋಜನೆಯಡಿ ಕೈಗೊಂಡು ಅಪೂರ್ಣಗೊಂಡಿರುವ ಕಾಮಗಾರಿಗಳ ವಿವರ

ಕ್ರ. ಸಂ	ವಿವರ
1.	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ.
2.	ಸವದತ್ತಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ.
3.	ಬೈಲಹೊಂಗಲ ತಾಲ್ಲೂಕು ಹುಣಸಿಕಟ್ಟಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.
4.	ಚಿಕ್ಕೋಡಿ ತಾಲ್ಲೂಕು ಹಿರೇಕೂಡಿ ಗ್ರಾಮದಲ್ಲಿ ಗರಡಿಮನೆ ನಿರ್ಮಾಣ.
5.	ಚಿಕ್ಕೋಡಿ ತಾಲ್ಲೂಕಿನ ಬೇಡಕಿಹಾಳ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.
6.	ಖಾನಾಪುರ ತಾಲ್ಲೂಕಿನ ಮುಗಳಿಹಾಳ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ.
7.	ಗೋಕಾಕ ತಾಲ್ಲೂಕಿನ ಸುಲಧಾಳ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ
8.	ಬೈಲಹೊಂಗಲದಲ್ಲಿ ಗರಡಿ ಮನೆ ನಿರ್ಮಾಣ
9.	ಗೋಕಾಕ್ ತಾಲ್ಲೂಕಿನ ಮೆಳವಂಕಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ
10.	ಬೆಳಗಾವಿ ತಾಲ್ಲೂಕಿನ ದಾಮಣೆ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ
11.	ಹುಕ್ಕೇರಿ ತಾಲ್ಲೂಕಿನ ಬೆಳವಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ
12.	ನಿಪ್ಪಾಣಿ ವಿ.ಸ. ಕ್ಷೇತ್ರದ ವ್ಯಾಪ್ತಿಯ ಜತ್ರಾಟ ಗ್ರಾಮಕ್ಕೆ ಗರಡಿ ಮನೆ ನಿರ್ಮಾಣ
13.	ಸವದತ್ತಿ ತಾಲ್ಲೂಕಿನ ಹನುಮಗೇರಿ ಓಣಿಯ ಸಗತಿಕಟ್ಟಿ ಗರಡಿ ಮನೆ ನಿರ್ಮಾಣ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2334
ಸದಸ್ಯರ ಹೆಸರು	:	ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಗ್ರಾಮೀಣ ಕುಡಿಯುವ ನೀರಿಗಾಗಿ ವಿದ್ಯುತ್ ಸಂಪರ್ಕ ಸ್ಥಾವರ ಸ್ಥಳಾಂತರ ಹಾಗೂ ಪರಿವರ್ತಕ ಬದಲಾವಣೆ ಮಾಡುವ ಸಂದರ್ಭಗಳಲ್ಲಿ ಬೆಸ್ಕಾಂ ಇಲಾಖೆಗೆ ಮುಂಚಿತವಾಗಿ ಹಣ ಪಾವತಿ ಮಾಡಬೇಕಾಗಿರುವುದು ನಿಜವೇ;	<u>ಗ್ರಾಮೀಣ ಕುಡಿಯುವ ನೀರಿಗಾಗಿ ವಿದ್ಯುತ್ ಸಂಪರ್ಕ:</u> ಸರ್ಕಾರದ ಆದೇಶದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ಕುಡಿಯುವ ನೀರಿನ ಯೋಜನೆಗಳಿಗೆ ಕಂಪನಿ ನಿಯಮಾನುಸಾರ ಸ್ಥಳೀಯ ಸಂಸ್ಥೆಗಳಿಂದ ಠೇವಣಿ ಹಾಗೂ ಇತರೆ ವೆಚ್ಚಗಳ ಪಾವತಿಯನ್ನು ನಿರೀಕ್ಷಿಸದೇ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಆದ್ಯತೆ ಮೇರೆಗೆ ಸ್ಥಳೀಯ ಸಂಸ್ಥೆಗಳು ಕುಡಿಯುವ ನೀರಿನ ಸ್ಥಾವರಗಳಿಗೆ ಅರ್ಜಿ ನೋಂದಾಯಿಸಿದ 21 ದಿನಗಳ ಒಳಗಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ವಿದ್ಯುತ್ ಸರಬರಾಜು ಕಂಪನಿಗಳು ಕುಡಿಯುವ ನೀರಿನ ಸ್ಥಾವರಗಳ ವಿದ್ಯುದೀಕರಣ ಕಾಮಗಾರಿಗಳನ್ನು ಗುತ್ತಿಗೆದಾರರ ಮೂಲಕ ಸ್ವಂತ ಬಂಡವಾಳವನ್ನು ಹೂಡಿ ಕೈಗೊಳ್ಳುತ್ತಿದ್ದು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಗುತ್ತಿಗದಾರರಿಗೆ ಕಾಲ-ಕಾಲಕ್ಕೆ ಹಣವನ್ನು ಪಾವತಿಸಬೇಕಾಗುತ್ತದೆ. ಪ್ರಸ್ತುತ, ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದಿರುವುದರಿಂದ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಪಾವತಿಸಬೇಕಾಗಿರುವ ವಿದ್ಯುದೀಕರಣ ವೆಚ್ಚವನ್ನು ಬಿಡುಗಡೆಗೊಳಿಸುವಂತೆ ಆಗಿಂದಾಗ್ಗೆ ಕೋರಲಾಗುತ್ತಿದೆ. ಕುಡಿಯುವ ನೀರಿನ ಸ್ಥಾವರಗಳಿಗೆ ಆದ್ಯತೆ ಮೇಲೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮ ವಹಿಸುತ್ತಿವೆ. <u>ಸ್ಥಾವರ ಸ್ಥಳಾಂತರ ಹಾಗೂ ಪರಿವರ್ತಕ ಬದಲಾವಣೆ</u> ನಿರುಪಯುಕ್ತಗೊಂಡಿರುವ ಕುಡಿಯುವ ನೀರು ಸರಬರಾಜು ಸ್ಥಾವರಗಳನ್ನು ಹೊಸದಾಗಿ ಕೊರೆದ ಕೊಳವೆ ಬಾವಿಗಳಿಗೆ ಸ್ಥಳಾಂತರಿಸುವ (shifting of installations) ವಿಷಯವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮತ್ತು ಸ್ಥಳ ಪರಿಶೀಲಿಸಿ ತಾಂತ್ರಿಕ ಸಾಧ್ಯತೆಗಳನುಗುಣವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

		<u>ಸ್ಥಾವರ ಸ್ಥಳಾಂತರ ಹಾಗೂ ಪರಿವರ್ತಕ ಬದಲಾವಣೆ</u> ನಿರುಪಯುಕ್ತಗೊಂಡಿರುವ ಕುಡಿಯುವ ನೀರು ಸರಬರಾಜು ಸ್ಥಾವರಗಳನ್ನು ಹೊಸದಾಗಿ ಕೊರೆದ ಕೊಳವೆ ಬಾವಿಗಳಿಗೆ ಸ್ಥಳಾಂತರಿಸುವ (shifting of installations) ವಿಷಯವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮತ್ತು ಸ್ಥಳ ಪರಿಶೀಲಿಸಿ ತಾಂತ್ರಿಕ ಸಾಧ್ಯತೆಗಳನುಗುಣವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಥಳಾಂತರಗೊಳ್ಳಲಿರುವ ಸ್ಥಾವರಕ್ಕೆ ಉಪಯೋಗಿಸಿರುವ ಸಾಮಗ್ರಿಗಳನ್ನು ಹೊಸದಾಗಿ ಕೊರೆದಿರುವ ಕುಡಿಯುವ ನೀರಿನ ಸ್ಥಾವರಕ್ಕೆ ಮರು ಉಪಯೋಗಿಸಿಕೊಂಡು ಮತ್ತು ಹೆಚ್ಚುವರಿ ಸಾಮಗ್ರಿಗಳು (ಪರಿವರ್ತಕ, ಕಂಬ, ವಾಹಕ ಇತರೆ) ಬೇಕಾದಲ್ಲಿ ಅಂದಾಜುಪಟ್ಟಿ ತಯಾರಿಸಿ ಬೆವಿಕಂನಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು ಹಾಗೂ ಸ್ಥಳಾಂತರಕ್ಕೆ ತಗುಲಿದ ವೆಚ್ಚವನ್ನು ವಿದ್ಯುತ್ ಸಂಪರ್ಕ ಕಲ್ಪಿಸಿದ ಎರಡು ತಿಂಗಳೊಳಗಾಗಿ ಸ್ಥಳೀಯ ಸಂಸ್ಥೆಗಳಿಂದ ಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.
ಆ)	ಆದರೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ನಿಗಮದಲ್ಲಿ ಹಣ ಇಲ್ಲದೇ ಸಂದರ್ಭದಲ್ಲಿ ಹಣ ಪಾವತಿ ವಿಳಂಬವಾಗುವುದರಿಂದ ಬೆಸ್ಕಾಂರವರು ಸಂಪರ್ಕ ಕಲ್ಪಿಸದೇ ಇರುವುದು ನಿಜವೇ;	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಯೋಜನೆಯ ಅರ್ಜಿಗಳ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಠೇವಣಿ ಹಾಗೂ ಇತರೆ ವೆಚ್ಚಗಳ ಪಾವತಿಯನ್ನು ನಿರೀಕ್ಷಿಸದೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಪ್ರಸ್ತುತ, ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದಿರುವುದರಿಂದ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಪಾವತಿಸಬೇಕಾಗಿರುವ ವಿದ್ಯುದೀಕರಣ ವೆಚ್ಚವನ್ನು ಬಿಡುಗಡೆಗೊಳಿಸುವಂತೆ ಆಗಿಂದಾಗ್ಗೆ ಕೋರಲಾಗುತ್ತಿದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಕುಡಿಯುವ ನೀರಿನ ವಿದ್ಯುತ್ ಕಾಮಗಾರಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಇ)	ಬಾಗೇಪಲ್ಲಿ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಕಾಮಗಾರಿ ನಿರ್ವಹಣೆ ಮಾಡಲು ಇಂಧನ ಇಲಾಖೆಗೆ ಬಂದಿರುವ ಪ್ರಸ್ತಾವನೆಗಳು ಎಷ್ಟು;	ಬಾಗೇಪಲ್ಲಿ ಕ್ಷೇತ್ರದಲ್ಲಿ ನೋಂದಣಿಗೊಂಡ ಎಲ್ಲಾ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಬಾಗೇಪಲ್ಲಿ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಕುಡಿಯುವ ನೀರಿನ ಯೋಜನೆಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.

60

ಈ)	ಈ ಕಾಮಗಾರಿಗಳಿಗೆ ಪಾವತಿಸಲು ಅನುದಾನ ಇಲ್ಲದೇ ಇರುವ ಕಾರಣ ವಿದ್ಯುದ್ಧೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲವೇ;	ಪ್ರಸ್ತುತ, ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದಿರುವುದರಿಂದ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಪಾವತಿಸಬೇಕಾಗಿರುವ ವಿದ್ಯುದೀಕರಣ ವೆಚ್ಚವನ್ನು ಬಿಡುಗಡೆಗೊಳಿಸುವಂತೆ ಆಗಿಂದಾಗ್ಗೆ ಕೋರಲಾಗುತ್ತಿದೆ ಹಾಗೂ ಕುಡಿಯುವ ನೀರಿನ ಸ್ಥಾವರಗಳ ವಿದ್ಯುದೀಕರಣ ಕಾರ್ಯವನ್ನು ಆದ್ಯತೆ ಮೇಲೆ ಕೈಗೊಳ್ಳಲಾಗುತ್ತಿದೆ.
ಉ)	ಗ್ರಾಮೀಣ ಕುಡಿಯುವ ನೀರಿನ ವಿಚಾರದಲ್ಲಿ ವಿದ್ಯುತ್ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?	

ಸಂಖ್ಯೆ: ಎನರ್ಜಿ 78 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ.ಎಸ್.ಎನ್. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2334ಕ್ಕೆ ಅನುಬಂಧ-1

ಆರ್ಥಿಕ ವರ್ಷ-2017-18 ರಿಂದ 2020-21 (ಫೆಬ್ರವರಿ-2021) ನೇ ಸಾಲಿನ ಕುಡಿಯುವ ನೀರು ಸರಬರಾಜು ಯೋಜನೆಗಳ ವಿದ್ಯುದೀಕರಣದ ಪ್ರಗತಿಯ ವಿವರಗಳು

ಕ್ರಮ ಸಂಖ್ಯೆ	ಆರ್ಥಿಕ ವರ್ಷ	ಹಿಂದಿನ ವರ್ಷದ ಅಂತ್ಯಕ್ಕೆ ಬಾಕಿ ಇರುವ ಅರ್ಜಿಗಳ ಸಂಖ್ಯೆ	ಆರ್ಥಿಕ ವರ್ಷದಲ್ಲಿ ನೊಂದಾಯಿಸಲಾದ ಅರ್ಜಿಗಳ ಸಂಖ್ಯೆ	ಆರ್ಥಿಕ ವರ್ಷದಲ್ಲಿ ರದ್ದಾಗಿರುವ ಅರ್ಜಿಗಳ ಸಂಖ್ಯೆ	ಒಟ್ಟು ಅರ್ಜಿಗಳು	ಆರ್ಥಿಕ ವರ್ಷದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾದ ಅರ್ಜಿಗಳ ಸಂಖ್ಯೆ	ಆರ್ಥಿಕ ವರ್ಷದ ಅಂತ್ಯಕ್ಕೆ ವಿದ್ಯುದೀಕರಣಗೊಳಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ
1	2017-18	1102	3938	399	4641	4078	563
2	2018-19	563	2931	286	3208	2615	593
3	2019-20	593	2952	212	3333	2950	383
4	2020-21 (ಫೆಬ್ರವರಿ-21 ರ ಅಂತ್ಯಕ್ಕೆ)	383	1916	172	2127	1941	186

2334

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ.ಎಸ್.ಎನ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2334ಕ್ಕೆ ಅನುಬಂಧ-2

ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಕುಡಿಯುವ ನೀರಿನ ವಿವರಗಳು

ಆರ್ಥಿಕ ವರ್ಷ	ಹಿಂಬಾಕಿ	ನೊಂದಣಿಗೊಂಡ ಅರ್ಜಿಗಳ ಸಂಖ್ಯೆ	ರದ್ದಾಗಿರುವ ಅರ್ಜಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಪಡೆದಿರುವ ಅರ್ಜಿಗಳ ಸಂಖ್ಯೆ	ಬಾಕಿ	ವಿದ್ಯುದೀಕರಣಗೊಂಡ ಕುಡಿಯುವ ನೀರಿನ ಯೋಜನೆಗಳಿಗೆ ಪಾವತಿಸಬೇಕಾದ ಒಟ್ಟು ಮೊತ್ತ (ರೂ. ಲಕ್ಷಗಳು)	ವಿದ್ಯುದೀಕರಣಗೊಂಡ ಕುಡಿಯುವ ನೀರಿನ ಯೋಜನೆಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಪಾವತಿಸಿದ ಮೊತ್ತ (ರೂ. ಲಕ್ಷಗಳು)	ವಿದ್ಯುದೀಕರಣಗೊಂಡ ಕುಡಿಯುವ ನೀರಿನ ಯೋಜನೆಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಪಾವತಿಸಬೇಕಾದ ಬಾಕಿ ಮೊತ್ತ(ರೂ. ಲಕ್ಷಗಳು)
2017-18	**2**	21	**0**	**22**	**1**	57.05	0.00	57.05
2018-19	**1**	14	**0**	**11**	**4**	106.55	0.00	106.55
2019-20	**4**	11	**0**	**10**	**5**	131.79	97.56	34.23
2020-21 (ಫೆಬ್ರವರಿ-2021 ರ ಅಂತ್ಯಕ್ಕೆ)	**5**	**5**	**0**	**10**	**0**	43.46	0.00	**43.46**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2341
ಸದಸ್ಯರ ಹೆಸರು	:	ಶ್ರೀ ಅಜಯ್ ಧರ್ಮಸಿಂಗ್ ಡಾ॥ (ಜೇವರ್ಗಿ)
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	16.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು; (ವರ್ಷಾವಾರು ಮಾಹಿತಿ ನೀಡುವುದು)	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ ನೋಡಿ)
ಆ)	ಬಿಡುಗಡೆಗೊಳಿಸಿದ ಅನುದಾನಕ್ಕನುಗುಣವಾಗಿ ಆಯಾ ಸಾಲಿನಲ್ಲಿಯೇ ಮಂಜೂರಾದ ಯಾವ ಕಾಮಗಾರಿಗಳನ್ನು ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗಿದೆ ಹಾಗೂ ಬಾಕಿ ಇರುವ ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗಿದೆ ಹಾಗೂ ಬಾಕಿ ಇರುವ ಕಾಮಗಾರಿಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಡಿ 2017-18, 2018-19 ಮತ್ತು 2019-20ನೇ ಸಾಲಿನವರೆಗೆ ಪೂರ್ಣಗೊಂಡಿರುವ ಪ್ರಗತಿಯಲ್ಲಿರುವ ಹಾಗೂ ಇನ್ನೂ ಪ್ರಾರಂಭವಾಗದೇ ಇರುವ ಕಾಮಗಾರಿಗಳ ಸಂಖ್ಯೆ ಈ ಕೆಳಗಿನಂತಿವೆ, (ಕೆಳಗಿನ ಕೋಷ್ಟಕ ನೋಡಿ) ಕಾಮಗಾರಿಗಳ ವಿವರವು ಅನುಬಂಧ-1ರಲ್ಲಿ ನೀಡಲಾಗಿದೆ.

ಆರ್ಥಿಕ ವರ್ಷ	ಮಂಡಳಿಗೆ ಬಿಡುಗಡೆ ಮಾಡಿದ ಅನುದಾನ (ರೂ.ಕೋಟಿಗಳ)
2017-18	800.00
2018-19	1000.00
2019-20	1125.00

ವರ್ಷ	ಒಟ್ಟು ಕಾಮಗಾರಿಗಳ ಸಂಖ್ಯೆ	ಪೂರ್ಣಗೊಳಿಸಿದ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭಿಸಬೇಕದ ಕಾಮಗಾರಿಗಳು
2017-18	4405	4316	89	0
2018-19	4137	3677	454	6
2019-20	4018	2288	1411	319
ಒಟ್ಟು	**12560**	**10281**	**1954**	**325**

ಕ್ರ ಸಂ.	ಪ್ರಶ್ನೆ	ಉತ್ತರ
ಇ)	**2020–21ನೇ ಸಾಲಿನಲ್ಲಿ ಯಾವ ಕಾಮಗಾರಿಗಳ ಎಷ್ಟು ಮೊತ್ತದ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆಗೆ ಮಂಜೂರು ಮಾಡಲಾಗಿದೆ? (ಪೂರ್ಣ ವಿವರ ನೀಡುವುದು)**	2020–21ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಡಿ ಹಂಚಿಕೆಯಾಗಿರುವ ರೂ.1131.86 ಕೋಟಿಗಳ ಅನುದಾನದ ಕ್ರಿಯಾಯೋಜನೆಗೆ ಮಂಜೂರಾತಿ ನೀಡಲಾಗಿದೆ.

ಪಿಡಿಎಸ್ 22 ಹೆಚ್‌ಕೆಡಿ 2021

(ಡಾ॥ ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಅನುಬಂಧ–1 8341

2017–18ನೇ ಸಾಲಿನಿಂದ 2019–20ರವರೆಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗೊಂಡಿರುವ ಕಾಮಗಾರಿಗಳ ವಿವರ:–

Year	District	No.of works	Completed	Under Progress	Not Started	Allocation	Expenditure
2017-18	Bidar	513	505	8	0	21492.33	18117.90
	Kalaburagi	1294	1279	15	0	35357.84	30914.76
	Yadgir	602	576	26	0	15570.21	12552.01
	Raichur	778	762	16	0	24882.29	19690.87
	Koppal	544	526	18	0	15636.22	13245.42
	Bellary	670	664	6	0	18050.24	14963.70
	KK Region	4	4	0	0	1156.93	124.09
	2017-18 Total	**4405**	**4316**	**89**	**0**	**132146.06**	**109608.75**
2018-19	Bidar	462	419	41	2	13889.98	10401.99
	Kalaburagi	1321	1186	132	3	26352.28	19597.74
	Yadgir	476	396	80	0	11187.34	9075.02
	Raichur	609	517	91	1	17227.88	13142.75
	Koppal	431	370	61	0	11705.80	9817.62
	Bellary	837	788	49	0	16444.49	12755.91
	KK Region	1	1	0	0	900.00	900.00
	2018-19 Total	**4137**	**3677**	**454**	**6**	**97707.77**	**75691.03**
2019-20	Bidar	433	261	155	17	20449.74	10138.04
	Kalaburagi	1290	643	463	184	41641.24	15750.56
	Yadgir	467	261	177	29	16297.40	7741.25
	Raichur	529	277	218	34	24824.94	11911.40
	Koppal	614	353	242	19	17111.31	10252.46
	Bellary	653	485	138	30	23730.15	15225.09
	KK Region	32	8	18	6	5595.42	4681.26
	2019-20 Total	**4018**	**2288**	**1411**	**319**	**149650.20**	**75700.06**
Grand Total		**12560**	**10281**	**1954**	**325**	**379504.02**	**260999.84**

ಪಿಡಿಎಸ್ 22 ಹೆಚ್‌ಕೆಡಿ 2021

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು.
ಎಡಿಜಿ ವಿಭಾಗ
ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2345/2021

ಸದಸ್ಯರ ಹೆಸರು ಡಾ: ಅಜಯ್ ಧರ್ಮಸಿಂಗ್ (ಜೇವರ್ಗಿ)

ಉತ್ತರಿಸಬೇಕಾದವರು ಮಾನ್ಯ ಮುಖ್ಯಮಂತ್ರಿಯವರು

ಉತ್ತರಿಸಬೇಕಾದ ದಿನಾಂಕ 16/03/2021

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯ ಸರ್ಕಾರದ ಶಿಷ್ಟಾಚಾರ ವಿಭಾಗದಲ್ಲಿ ಪ್ರಸ್ತುತ ಇರುವ ವಾಹನಗಳ ಸಂಖ್ಯೆ ಎಷ್ಟು; (ವಿವಿಧ ಕಾರುಗಳ ಮಾದರಿಗಳೊಂದಿಗೆ ಪೂರ್ಣ ಮಾಹಿತಿ ನೀಡುವುದು).	ಅನುಬಂಧ-ಎ ರಲ್ಲಿ ಮಾಹಿತಿ ನೀಡಿದೆ.
ಆ)	ಸದರಿ ವಿಭಾಗದಲ್ಲಿ ಪ್ರಸ್ತುತ ಎಷ್ಟು ಅನುಪಯುಕ್ತ ವಾಹನಗಳೆಂದು ಗುರುತಿಸಿ ಎಷ್ಟು ವರ್ಷಗಳಿಂದ ಅಂತಹ ವಾಹನಗಳನ್ನು ವಿಲೇ ಮಾಡದೇ ಬಾಕಿ ಉಳಿಸಿದೆ; (ವಿವಿಧ ಕಾರುಗಳ ಪೂರ್ಣ ಮಾಹಿತಿ ಒದಗಿಸುವುದು).	ಯಾವುದು ಇರುವುದಿಲ್ಲ
ಇ)	ದೀರ್ಘ ಕಾಲದಿಂದ ವಿಲೇ ಮಾಡದೇ ಉಳಿಸಿರುವ ವಾಹನಗಳಿಂದ ಸರ್ಕಾರಕ್ಕೆ ನಷ್ಟವಾಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;	ಅನ್ವಯಿಸುವುದಿಲ್ಲ

ಈ)	ಹಾಗಿದ್ದಲ್ಲಿ, ಅಂತಹ ವಾಹನಗಳ ವಿಲೇವಾರಿಗೆ ಹಾಗೂ ಇದೇ ರೀತಿಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಅನುಪಯುಕ್ತ ವಾಹನಗಳ ವಿಲೇವಾರಿಗೆ ಸರ್ಕಾರದ ಯಾವ ನಿರ್ದಿಷ್ಟ ಕ್ರಮ ಜರುಗಿಸಲಿದೆ?	ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 153 ಶಿವಾನಿ 2013, ದಿನಾಂಕ: 12.12.2013ರನ್ವಯ ಕ್ರಮವಹಿಸಲಾಗುವುದು.

ಸಿಆಸುಇ 36 ಶಿವಾನಿ 2021

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಅನುಬಂಧ-ಎ

SL NO.	VEHICLE NO.	Make	Model	Year of Manufacture
1	KA-53-G-3636	Volvo	XC60	2020
2	KA-01-GA-3447	Toyota	InnovaCrysta	2018
3	KA-05-GA-7576	Toyota	InnovaCrysta	2016
4	KA-01-GB-1359	Toyota	Altis	2008
5	KA-01-GA-2016	Toyota	Fortuner	2016
6	KA-03-GA-2727	Toyota	InnovaCrysta	2017
7	KA-01-G-5942	Toyota	Innova	2014
8	KA-01-GB-2349	Honda	CR-V	2011
9	KA-01-G-6130	Maruti	Omni	2016
10	KA-53-GA-8	Toyota	Innova Crysta	2016
11	KA-52-G-09	Toyota	Altis	2010
12	KA-01-GA-0011	Mercedes	Benz (B P)	2013
13	KA-05-GA-6363	Toyota	Fortuner	2016
14	KA-05-GA-459	Toyota	Innova Crysta	2016
15	KA-01-G-6036	Toyota	Altis	2015
16	KA-04-GB-6363	Toyota	Fortuner	2013
17	KA-05-G-9099	Toyota	Innova	2015
18	KA-05-GA-9	Toyota	Innova	2013
19	KA-01-G-5734	Toyota	Fortuner	2013
20	KA-01-GA-639	Mercedes	Benz (2nd)	2000
21	KA-53-GA-666	Toyota	Innova	2015
22	KA-01-G-6129	Maruti	Omni	2016
23	KA-05-GA-3699	Toyota	InnovaCrysta	2016
24	KA-01-G-6029	Toyota	Altis	2015
25	KA-01-G-6031	Toyota	Altis	2015
26	KA-01-G-6034	Toyota	Altis	2015
27	KA-01-G-6035	Toyota	Altis	2015
28	KA-03-GA-0007	Toyota	Fortuner	2016
29	KA-51-G-9333	Toyota	Innova	2015
30	KA-01-MG-8108	Toyota	Altis	2011
31	KA-04-G-6363	Toyota	Fortuner	2009
32	KA-01-GB-6300	Toyota	Altis	2009
33	KA-01-G-5821	Toyota	Etios	2013
34	KA-01-G-5618	Honda	Activa	2012
35	KA-01-G-5619	Honda	Activa	2012

ಸರ್ಕಾರದ ಅಧೀನ ಕಾರ್ಯದರ್ಶಿ-೨
ಸಿಆಸುಇ (ರಾಜ್ಯ ಶಿಷ್ಟಾಚಾರ)
ವಿಧಾನಸೌಧ, ಬೆಂಗಳೂರು

SL NO.	VEHICLE NO.	Make	Model	Year of Manufacture
36	KA-01-GA-4689	Toyota	Corolla	2007
37	KA-01-G-5872	Toyota	Camry	2014
38	KA-01-G-6023	Toyota	Innova	2014
39	KA-01-G-6032	Toyota	Altis	2015
40	KA-01-G-5250	Toyota	Altis	2009
41	KA-52-G-9000	Toyota	InnovaCrysta	2016
42	KA-01-G-6025	Toyota	Innova	2015
43	KA-01-GB-8899	Toyota	Carolla	2013
44	KA-01-G-5381	Toyota	Innova	2011
45	KA-53-GA-0099	Toyota	InnovaCrysta	2016
46	KA-01-GA-1193	Toyota	Innova	2015
47	KA-03-GA-900	Honda	Verna	2007
48	KA-43-GA-0009	Toyota	InnovaCrysta	2016
49	KA-01-G-4406	Toyota	Corolla	2007
50	KA-02-G-4545	Toyota	Corolla	2008
51	KA-01-GB-01	Ford	Mondeo	2003
52	KA-02-G-5000	Toyota	corolla altis	2012

ಸರ್ಕಾರದ ಅಧೀನ ಕಾರ್ಯದರ್ಶಿ-೩
ಸಿಆಸುಇ (ರಾಜ್ಯ ಶಿಷ್ಟಾಚಾರ)
ವಿಧಾನಸೌಧ, ಬೆಂಗಳೂರು

8345

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರದ ವಿವಿಧ ಇಲಾಖೆಗಳಲ್ಲಿ ದುರಸ್ಥಿಯಾಗದ/ದುರಸ್ಥಿ ಮಾಡಲಾಗದ ಅನುಪಯುಕ್ತ ವಾಹನಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಓದಲಾಗಿದೆ:

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 153 ಶಿಪಾಸೀ 2013, ದಿನಾಂಕ: 21.08.2013.

ಪ್ರಸ್ತಾವನೆ:

ಮೇಲೆ ಓದಲಾದ ಆದೇಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಳೆಯ ವಾಹನಗಳನ್ನು ಅನುಪಯುಕ್ತವೆಂದು ಘೋಷಿಸುವಾಗ ಇರುವ ಮಾನದಂಡಗಳನ್ನು ಪರಿಷ್ಕರಿಸಲು ಮತ್ತು ಸರ್ಕಾರದ ವಿವಿಧ ಇಲಾಖೆಗಳಲ್ಲಿ ದುರಸ್ಥಿಯಾಗದೇ ಇರುವ/ಮಾಡಲಾಗದ ಅನುಪಯುಕ್ತ ವಾಹನಗಳನ್ನು ವಿಲೇವಾರಿ ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿ ಸಾರಿಗೆ ಇಲಾಖೆಯು ಸರ್ಕಾರದ ಎಲ್ಲಾ ಇಲಾಖೆಗಳ ವಾಹನಗಳನ್ನು ಅನುಪಯುಕ್ತವೆಂದು ಘೋಷಿಸುವಾಗ ಇರುವ ಮಾನದಂಡಗಳನ್ನು ಪರಿಷ್ಕರಿಸಿ, ಶಿಫಾರಸ್ಸು ಮಾಡಲು ಆದೇಶದಲ್ಲಿ ಸೂಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: 23.10.2013 ರಂದು ನಡೆಸಿದ ಸಭೆಯಲ್ಲಿ ಚರ್ಚಿಸಿ ಮಾಡಿರುವ ಶಿಫಾರಸ್ಸುಗಳನ್ವಯ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ: ಸಿಆಸುಇ 153 ಶಿಪಾಸೀ 2013, ಬೆಂಗಳೂರು, ದಿನಾಂಕ: 12.12.2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ದುರಸ್ಥಿಯಾಗದ / ದುರಸ್ಥಿ ಮಾಡಲಾಗದ ಅನುಪಯುಕ್ತ ಸರ್ಕಾರಿ ವಾಹನಗಳನ್ನು ಈ ಕೆಳಕಂಡ ಷರತ್ತುಗಳನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ವಿಲೇವಾರಿ ಮಾಡುವಂತೆ ಆದೇಶಿಸಿದೆ:

1. ಯಾವುದೇ ವಾಹನವನ್ನು ಅನುಪಯುಕ್ತವೆಂದು ಪರಿಗಣಿಸಲು ಕನಿಷ್ಟ 7 ವರ್ಷ ಪೂರೈಸಿರಬೇಕು.
2. ಲಘು ಮೋಟಾರು ವಾಹನ ಕನಿಷ್ಟ 2.00 ಲಕ್ಷ ಕಿ.ಮೀ. ಕ್ರಮಿಸಿರಬೇಕು.
3. ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ತಿಳಿಸಿದಂತೆ, ಈ ಮಾನದಂಡ ಪಾಲಿಸಿದ ವಾಹನವನ್ನು ಅನುಪಯುಕ್ತವೆಂದು ಘೋಷಿಸಿ, ಇವುಗಳನ್ನು ಸಾರ್ವಜನಿಕ ಹರಾಜಿನಲ್ಲಿ ವಿಲೇವಾರಿ ಮಾಡುವ ಬಗ್ಗೆ ಆ ವಾಹನದ ಕನಿಷ್ಟ ಮೌಲ್ಯವನ್ನು ನಿಗಧಿಪಡಿಸುವಲ್ಲಿ ಅಧಿಕಾರ ನೀಡಲಾಗಿದೆ.
4. ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 137 ಶಿಪಾಸೀ 2010, ದಿನಾಂಕ 11-01-2011 ರಲ್ಲಿ ಆದೇಶಿಸಿದಂತೆ, ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿಗಳು ಸಾರ್ವಜನಿಕ ಹರಾಜು ಮೂಲಕ ಹಳೆಯ ವಾಹನಗಳ ವಿಲೇವಾರಿಯ ಪ್ರಕ್ರಿಯೆಯನ್ನು ಮುಂದುವರಿಸುವುದು.

..2..

ಸರ್ಕಾರದ ಅಧೀನ ಕಾರ್ಯದರ್ಶಿ-೨
ಸಿಆಸುಇ (ರಾಜ್ಯ ಶಿಷ್ಟಾಚಾರ)
ವಿಧಾನಸೌಧ, ಬೆಂಗಳೂರು

5. ಹಳೆಯ ವಾಹನಗಳ ವಿಲೇವಾರಿ ಆದ ನಂತರ ಇಲಾಖಾ ಮುಖ್ಯಸ್ಥರು ಆಯಾ ಇಲಾಖೆಗಳ ಅನುದಾನದಲ್ಲಿ ಹೊಸ ವಾಹನ ಖರೀದಿಸಲು ಅನುದಾನವನ್ನು ಪಡೆದುಕೊಂಡು ಹೊಸ ವಾಹನ ಖರೀದಿಸುವ ಬಗ್ಗೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿದ ಮಿತಿಗೊಳಪಟ್ಟು ವಾಹನ ಖರೀದಿಸಬಹುದಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1060 ವೆಚ್ಚ-12/2013, ದಿನಾಂಕ: 06.12.2013 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎಸ್. ನಾಗರಾಜಪ್ಪ) 12/12
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿ. & ಆ.ಸು. ಇಲಾಖೆ (ರಾಜ್ಯ ಶಿಷ್ಟಾಚಾರ).

ಇವರಿಗೆ:-

1. ಮಹಾಲೇಖಪಾಲರು (ಎ & ಇ) / (ಆಡಿಟ್-1) / (ಆಡಿಟ್-2), ಕರ್ನಾಟಕ, ಬೆಂಗಳೂರು-1.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಆಸುಇ, ವಿಧಾನ ಸೌಧ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ.
10. ಸಾರಿಗೆ ಆಯುಕ್ತರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಮಾನ್ಯ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಅಧೀನ ಕಾರ್ಯದರ್ಶಿ-2
ಸಿಆಸುಇ (ರಾಜ್ಯ ಶಿಷ್ಟಾಚಾರ)
ವಿಧಾನಸೌಧ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2352
2. ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ.
3. ಉತ್ತರಿಸಬೇಕಾದ ದಿನಾಂಕ : 16-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಜುಲೈ 2019 ರಿಂದ ಈ ದಿನಾಂಕದವರೆಗೆ ಹೇಮಾವತಿ ಯೋಜನಾ ವಲಯ ಗೊರೂರು ವ್ಯಾಪ್ತಿಯಲ್ಲಿ ಬರುವ ವಿಭಾಗಗಳಿಗೆ ಹಣ ಭರವಸೆ ಪತ್ರವನ್ನು ವಿಭಾಗವಾರು ಬಿಡುಗಡೆ ಮಾಡಿರುವ ಸಂಪೂರ್ಣ ಮಾಹಿತಿಯನ್ನು ನೀಡುವುದು;	ಜುಲೈ 2019 ರಿಂದ ಫೆಬ್ರವರಿ 2021ರ ಅಂತ್ಯದವರೆಗೆ ಹೇಮಾವತಿ ಯೋಜನಾ ವಲಯ, ಗೊರೂರು ವ್ಯಾಪ್ತಿಯಲ್ಲಿ ಬರುವ ಒಟ್ಟು 9 ವಿಭಾಗಗಳ ಕಾಮಗಾರಿಗಳಿಗಾಗಿ ಹಣ ಭರವಸೆ ಪತ್ರವನ್ನು ವಿಭಾಗವಾರು ಬಿಡುಗಡೆ ಮಾಡಿದ ವಿವರಗಳು ಈ ಕೆಳಕಂಡಂತಿವೆ : (ರೂ. ಕೋಟಿಗಳಲ್ಲಿ) (see table below)
ಆ	ಜುಲೈ 2019 ರಿಂದ ಈ ದಿನಾಂಕದವರೆಗೆ ಹೇಮಾವತಿ ಯೋಜನಾ ವಲಯ ಗೊರೂರು ವ್ಯಾಪ್ತಿಯಲ್ಲಿ ವಿಭಾಗ ಕಛೇರಿಗಳಿಂದ ಗುತ್ತಿಗೆದಾರರಿಗೆ ಹಣ ಪಾವತಿಸಿರುವ ವಿವರಗಳನ್ನು ನೀಡುವುದು (ವಿಭಾಗವಾರು ಮತ್ತು ಕಾಮಗಾರಿವಾರು ಗುತ್ತಿಗೆದಾರರಿಗೆ ಪಾವತಿಸಿರುವ ಬಿಲ್ಲುಗಳ ಸಂಪೂರ್ಣ ಮಾಹಿತಿ ನೀಡುವುದು) ;	ಹೇಮಾವತಿ ಯೋಜನಾ ವಲಯ, ಗೊರೂರು ವ್ಯಾಪ್ತಿಯಲ್ಲಿನ ರೂ.5.00 ಕೋಟಿಗೂ ಮೇಲ್ಪಟ್ಟ ವಿಭಾಗವಾರು ಪ್ರಮುಖ ಕಾಮಗಾರಿಗಳ ಗುತ್ತಿಗೆದಾರರಿಗೆ ಹಣ ಪಾವತಿಸಿರುವ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.
ಇ	ಜುಲೈ 2019 ರಿಂದ ಈ ದಿನಾಂಕದವರೆಗೆ ಹೇಮಾವತಿ ಯೋಜನಾ ವಲಯ ಗೊರೂರು ವ್ಯಾಪ್ತಿಯಲ್ಲಿ ಬರುವ ವಿಭಾಗಳಿಗೆ ಹಣ ಭರವಸೆ ಪತ್ರ ನೀಡಲು ಆರ್ಥಿಕ ಇಲಾಖೆಯು	ಹಣ ಭರವಸೆ ಪತ್ರದ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಅನುಮೋದಿತ ಯೋಜನೆಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು ಎಂಬ ಷರತ್ತನ್ನು ವಿಧಿಸಿದ್ದು, ಅದರಂತೆ ಅನುಮೋದನೆಗೊಂಡ ಯೋಜನೆಗಳಿಗೆ ಮಾತ್ರ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ ಹಾಗೂ ಸದರಿ ಮಾನದಂಡವನ್ನು ಅನುಸರಿಸದೇ ಉಲ್ಲಂಘಿಸಿರುವ ಪ್ರಕರಣಗಳು ಯಾವುದೂ ಇರುವುದಿಲ್ಲವಾದ್ದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

(ರೂ. ಕೋಟಿಗಳಲ್ಲಿ)

ಕ್ರ ಸಂ	ವಿಭಾಗಗಳ ಹೆಸರು	ಜುಲೈ 2019 ರಿಂದ ಫೆಬ್ರವರಿ 2021ರವರೆಗೆ ಬಿಡುಗಡೆ ಮಾಡಿದ ಮೊತ್ತ
1	ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು	191.14
2	ನಂ.1, ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು	268.17
3	ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ	332.13
4	1ನೇ ಹೇಮಾವತಿ ಎಡೆದಂಡೆ ನಾಲಾ ವಿಭಾಗ, ಚನ್ನರಾಯಪಟ್ಟಣ	620.61
5	ಯಗಚಿ ಯೋಜನಾ ವಿಭಾಗ, ಬೇಲೂರು	23.51
6	ನಂ.3 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕೃಷ್ಣರಾಜಪೇಟೆ	54.00
7	ನಂ.6 ಹೇಮಾವತಿ ಎಡದಂಡೆ ನಾಲಾ ವಿಭಾಗ, ಪಾಂಡವಪುರ	39.16
8	ನಂ.7 ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ	9.48
9	ಗುಣ ನಿಯಂತ್ರಣ ವಿಭಾಗ ಗೊರೂರು.	0.20
	ಒಟ್ಟು :-	**1538.40**

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
	ನಿಗಧಿಪಡಿಸಿರುವ ಮಾನದಂಡಗಳನ್ನು ಕಾವೇರಿ ನೀರಾವರಿ ನಿಗಮದಲ್ಲಿ ಪಾಲಿಸಲಾಗುತ್ತಿದೆಯೇ; ಪಾಲಿಸದೇ ಇದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು;	
ಈ	ಏತ ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಾಗ ಕೇವಲ ಪೈಪುಗಳ ಸರಬರಾಜಿಗೆ ಮಾತ್ರವೇ ಪ್ರಪ್ರಥಮವಾಗಿ ಸಂಪೂರ್ಣ ಹಣ ಪಾವತಿ ಮಾಡಿ, ಇನ್ನಿತರೆ ಅವಶ್ಯಕ ಕಾಮಗಾರಿಗಳಾದ ಜಾಕ್‌ವೆಲ್, ಪಂಪ್‌ಹೌಸ್ ಇತ್ಯಾದಿ ಕಾಮಗಾರಿಗಳನ್ನು ಗುತ್ತಿಗೆ ಕರಾರಿನ ನಿಗದಿತ ಅವಧಿಯೊಳಗೆ ನಿರ್ವಹಿಸದೇ ವಿಳಂಬವಾಗಿ ಕಾರ್ಯಗತಗೊಳಿಸುತ್ತಿರುವ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು?	➢ ಏತ ನೀರಾವರಿ ಯೋಜನೆಗಳಲ್ಲಿ ಪೈಪುಗಳ ಅಳವಡಿಕೆ, ಜಾಕ್‌ವೆಲ್, ಪಂಪ್‌ಹೌಸ್‌ಗಳ ನಿರ್ಮಾಣ ಹಾಗೂ ಎಲೆಕ್ಟ್ರೋ ಮೆಕ್ಯಾನಿಕಲ್ ಉಪಕರಣಗಳ ಅಳವಡಿಕೆ ಇತ್ಯಾದಿಯಂತೆ ಐಟಂಗಳಿದ್ದು, ಟೆಂಡರ್ ನಿಯಮಾನುಸಾರ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ. ➢ ಕಾಮಗಾರಿಗೆ ಸಂಬಂಧಿಸಿದ ಜಾಕ್‌ವೆಲ್ ಹಾಗೂ ಪಂಪ್‌ಹೌಸ್‌ಗಳ ನಿರ್ಮಾಣಕ್ಕೆ ಮತ್ತು ಪೈಪುಗಳ, ಎಲೆಕ್ಟ್ರೋ ಮೆಕ್ಯಾನಿಕಲ್ ಉಪಕರಣಗಳ ಅಳವಡಿಕೆಗಾಗಿ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಸಮಾಲೋಚಕರಿಂದ ಪರಿಶೀಲನೆಗೊಳಪಡಿಸಿ ನಂತರ ಅಧೀಕ್ಷಕ ಅಭಿಯಂತರರು (ವಿನ್ಯಾಸ) ರವರಿಂದ ಸಹಮತಿ ಪಡೆದು ನಿಗಮದಿಂದ ಅನುಮೋದನೆ ನೀಡಲಾಗುತ್ತಿದೆ. ➢ ಗುತ್ತಿಗೆದಾರರು ಪೈಪುಗಳನ್ನು ಖರೀದಿಸಿ, ಗುಣ ನಿಯಂತ್ರಣ ಪರೀಕ್ಷೆಗೊಳಪಡಿಸಿ Quality Assurance planಗೆ ನಿಗಮದಿಂದ ಅನುಮೋದನೆ ಪಡೆದುಕೊಂಡ ನಂತರವೇ ಅನುಷ್ಠಾನಾಧಿಕಾರಿಗಳಾದ ಕಾರ್ಯಪಾಲಕ ಇಂಜಿನಿಯರ್‌ರವರುಗಳಿಗೆ ಟೆಂಡರ್ ನಿಯಮಾವಳಿ ಪ್ರಕಾರ ಹಾಗೂ ಕಾಮಗಾರಿಯ Bar chart ಕಾರ್ಯಕ್ರಮ ಪಟ್ಟಿಯಂತೆ ಕ್ರಮವಹಿಸಿ ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿಸಲು ಸೂಚಿಸಲಾಗುತ್ತಿದೆ. ➢ ಕೆಲವು ಏತ ನೀರಾವರಿ ಯೋಜನೆಗಳಿಗೆ ಬೇಕಾಗುವ ಜಮೀನಿನ ಭೂಸ್ವಾಧೀನ ಸಮಸ್ಯೆಯಿಂದ ಕಾಮಗಾರಿಯು ವಿಳಂಬವಾಗುತ್ತಿದ್ದು, ಈ ಸಮಸ್ಯೆಯನ್ನು ಬಗೆಹರಿಸಿ ಯೋಜನೆಗೆ ಬೇಕಾದ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ತ್ವರಿತವಾಗಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ:ಜಸಂಇ 50 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2352 ಕ್ಕೆ ಅನುಬಂಧ

(ರೂ. ಕೋಟಿಗಳಲ್ಲಿ)

ಕ್ರ ಸಂ	ವಿಭಾಗದ ಹೆಸರು	ಗುತ್ತಿಗೆದಾರರ ಹೆಸರು	ಪ್ರಮುಖ ಕಾಮಗಾರಿಯ ಹೆಸರು	ಕಾಮಗಾರಿಯ ಗುತ್ತಿಗೆ ಮೊತ್ತ	ಜುಲೈ 2019ರಿಂದ ಫೆಬ್ರವರಿ 2021ರವರೆಗೆ ಪಾವತಿಸಿರುವ ಬಿಲ್ಲಿನ ಮೊತ್ತ
1	ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು	ಉದಯ ಶಿವಕುಮಾರ್	1) ಹೇಮಾವತಿ ನದಿಗೆ ಅಡ್ಡಲಾಗಿ ಸಿರಿಗಾವರ ಹತ್ತಿರ ಸೇತುವೆ ನಿಮಾಣ	10.04	0.49
		ಪಿ.ಡಿ.ಆರ್. ಕನ್ಸ್ಟ್ರಕ್ಷನ್ಸ್ ಲಿಮಿಟೆಡ್	2)ಕಾಮಸಮುದ್ರ ಶಾಖಾ ನಾಲೆ ಸರಪಳಿ: 5 ಕಿ.ಮೀ ನಿಂದ 35 ಕಿ.ಮೀವರೆಗೆ (ಯಗಚಿ ಎಡದಂಡೆ ಶಾಖಾ ನಾಲೆ) ಮಣ್ಣಿನ ಅಗೆತ ಸಿ.ಡಿ. ಕಾಮಗಾರಿಗಳ ನಿರ್ಮಾಣ ಹಾಗೂ ಸಿಮೆಂಟ್ ಕಾಂಕ್ರೀಟ್ ಒಳಗೊಂಡಂತೆ	71.08	8.80
		ಎಂ.ವೈ. ಕಟ್ಟೀಮನಿ	3) ಹೇಮಾವತಿ ಎಡದಂಡೆ ನಾಲೆಯ ಸರಪಳಿ 0.00 ಕಿ.ಮೀ ನಿಂದ 71.62 ಕಿ.ಮೀವರೆಗೆ ಮತ್ತು ಬಿ.ಎನ್.ಟಿ. ಅಪ್ರೋಚ್ ನಾಲೆ 0.00 ಕಿ.ಮೀ ಇಂದ 5.57 ಕಿ.ಮೀವರೆಗೆ ಆಧುನೀಕರಣ ಕಾಮಗಾರಿ.	762.42	20.23
2	ನಂ.1, ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು	ಅಮೃತ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ. ಬೆಂಗಳೂರು	4) ಹೇಮಾವತಿ ನದಿಯಿಂದ ಅರಕಲಗೂಡು ತಾಲ್ಲೂಕಿನ ಗಂಗನಾಳು ಅಕ್ಕಪಕ್ಕದ 42 ಗ್ರಾಮಗಳಿಗೆ 88 ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ.	33.49	32.50
		ಮೆ॥ ಎ.ಸಿ.ಪಿ.ಎಲ್–ಎಸ್.ಪಿ.ಎಂ.ಎಲ್. ಇನ್‌ಪ್ರಾ ಲಿ.	5) ಹೇಮಾವತಿ ನದಿಯಿಂದ ನೀರನ್ನು ಎತ್ತಿ ಬೇವಿನಹಳ್ಳಿಯಿಂದ ರಂಗೇನಹಳ್ಳಿ ಮತ್ತು ಇತರೆ 22 ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ.	43.45	19.45
		ಬಿ.ಎಸ್.ಆರ್. ಇನ್‌ಪ್ರಾಟೆಕ್ ಇಂಡಿಯಾ ಲಿ.	6) ಹೇಮಾವತಿ ಬಲಮೇಲ್ದಂಡೆ ನಾಲೆಯ ಸರಪಳಿ:0.00 ಕಿ.ಮೀ ನಿಂ 96.812 ಕಿ.ಮೀ ವರೆಗೆ ನಾಲಾ ಆಧುನೀಕರಣ ಕಾಮಗಾರಿ.	379.55	186.66
		ಹೆಚ್.ಸಿ. ಉಮೇಶ	7) ಕೆ.ಆರ್. ನಗರ ತಾಲ್ಲೂಕಿನ ಅಡಿಯಲ್ಲಿ ಬರುವ ಮುಕ್ಕನಹಳ್ಳಿ ಕೆರೆಯಿಂದ 24 ಕೆರೆಗಳಿಗೆ ಕುಡಿಯುವ ನೀರು ಯೋಜನೆ.	6.23	5.37
3	ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ	ಮೆ॥ ಆಡು ಇನ್‌ಪ್ರಾ (ಶ್ರೀ ಅರುಣಕುಮಾರ್ ಡಿ. ಬಂಡಿ)	8) ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಸಮೀಪ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ತಾಲ್ಲೂಕು ಕುಡಿಯುವ ನೀರಿಗಾಗಿ 160 ಕೆರೆಗಳಿಗೆ ನೀರು ತುಂಬಿಸುವ ಹಾಸನ ತಾಲ್ಲೂಕಿನ ದುದ್ದ, ಶಾಂತಿಗ್ರಾಮ ಹಾಗೂ ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆ ಹೋಬಳಿಗಳಲ್ಲಿ ಬರುವ ಒಣಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ	359.33	80.72
		ಮೆ॥ ಶಂಕರ ನಾರಾಯಣ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ.	9) ಹೊಳೆನರಸೀಪುರ ತಾಲ್ಲೂಕಿನ ಕಟ್ಟೆಬೆಳಗುಲಿ ಗ್ರಾಮದ ಸಮೀಪ ಶ್ರೀ ರಾಮದೇವರ ಅಣೆಕಟ್ಟೆಯ ಪುನರ್ ನಿರ್ಮಾಣ ಕಾಮಗಾರಿ	128.70	55.19

ಕ್ರ ಸಂ	ವಿಭಾಗದ ಹೆಸರು	ಗುತ್ತಿಗೆದಾರರ ಹೆಸರು	ಪ್ರಮುಖ ಕಾಮಗಾರಿಯ ಹೆಸರು	ಕಾಮಗಾರಿಯ ಗುತ್ತಿಗೆ ಮೊತ್ತ	ಜುಲೈ 2019ರಿಂದ ಫೆಬ್ರವರಿ 2021ರವರೆಗೆ ಪಾವತಿಸಿರುವ ಬಿಲ್ಲಿನ ಮೊತ್ತ
		ಹೆಚ್.ಸಿ. ಉಮೇಶ್	10) ಹೊಳೆನರಸೀಪುರ ತಾಲ್ಲೂಕಿನ ಅಡಿಯಲ್ಲಿ ಬರುವ ಶ್ರೀರಾಮದೇವರ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ವಂಚಿತ ಅಚ್ಚುಕಟ್ಟು ಪ್ರದೇಶಗಳಿಗೆ ತಟ್ಟೇಕೆರೆ ಏತ ನೀರಾವರಿ ಯೋಜನೆಯ ಪುನರ್‌ಜೀವನ್ ಭರಿಸುವ ಕೆಲಸ ಒಂಟಿಗುಡ್ಡ ಏತನೀರಾವರಿ ಯೋಜನೆಯ ಪುನರ್‌ಜೀವನಗೊಳಿಸುವ ಕಾಮಗಾರಿ ಕಾಮಸಮುದ್ರ ಏತನೀರಾವರಿ ಯೋಜನೆಯ ಅಡಿಯಲ್ಲಿ ಬರುವ 13ನೇ ಕಿ.ಮೀನಲ್ಲಿ ಮುತ್ತಿಗೆ ಹಿರೇಹಳ್ಳಿ ಫೀಡರ್ ಕೆನಾಲ್ ನಿರ್ಮಾಣ ಕಾಮಗಾರಿ.	11.84	6.41
		ಮೆ॥ ಸ್ಟಾರ್ ಇನ್ಫ್ರಾಟೆಕ್	11) ಹೇಮಾವತಿ ಬಲದಂಡೆ ನಾಲಾ ಸರಪಳಿ 0.00 ಕಿ.ಮೀ.ನಿಂದ 92.104 ಕಿ.ಮೀ. ವರೆಗಿನ ಆಧುನೀಕರಣ ಕಾಮಗಾರಿ	417.50	109.26
4	ಯಗಚಿ ಯೋಜನಾ ವಿಭಾಗ, ಬೇಲೂರು	ಶ್ರೀನಿವಾಸ ಇಂಡಿಯಾ ಪ್ರೈ. ಲಿಮಿಟೆಡ್	12) ಹಳೇಬೀಡು-ಮಾದೀಹಳ್ಳಿ ಏತ ನೀರಾವರಿಯಿಂದ ಕುಡಿಯುವ ನೀರಿಗಾಗಿ 39 ಕೆರೆಗಳನ್ನು ತುಂಬಿಸುವ ಕಾಮಗಾರಿ	11.65	0.00
		ಸಿ.ಎನ್. ಸೋಮಶೇಖರ್	13) ಕ್ಯಾತನಹಳ್ಳಿ ಮೊದಲನೇ ಹಂತದ ಏತ ನೀರಾವರಿ ಯೋಜನೆ	11.40	0.00
		ಪಿಚ್‌ಲಾಲ್ ವೆಂಕಟೇಶ್ವರರಾವ್	14) ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯ 2ನೇ ಹಂತದ ಸಿ.ಡಿ. ಕಾಮಗಾರಿಗಳ ಮಣ್ಣು ಅಗೆತ ಕೆಲಸ ಮತ್ತು ಪಂಪ್ ಮತ್ತು ಮಿಷನರಿಗಳ ಎಲೆಕ್ಟ್ರಿಕಲ್ ಕಾಮಗಾರಿಗಳು	8.09	0.53
5	ನಂ.1, ಹೇಮಾವತಿ ಎಡದಂಡೆ ನಾಲಾ ವಿಭಾಗ, ಚನ್ನರಾಯಪಟ್ಟಣ	ಮೆ॥ ಶ್ರೀ ಶ್ರೀನಿವಾಸ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈ.ಲಿ.	15) ಚನ್ನರಾಯಪಟ್ಟಣ ತಾಲ್ಲೂಕಿನ ಬಿ.ಎನ್.ಟಿ. ಅಪ್ರೋಚ್ ಏತ ನೀರಾವರಿ ಯೋಜನೆ ನುಗ್ಗೇಹಳ್ಳಿ ಹೋಬಳಿಯ ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿ.	6.15	0.00
		ಮೆ॥ ಎನ್.ಆರ್.ಸಿ.ಎಲ್. ಲಿಮಿಟೆಡ್	16) ಚನ್ನರಾಯಪಟ್ಟಣ ತಾಲ್ಲೂಕಿನ ಹಿರಿಸಾವೆ-ಶ್ರವಣಬೆಳಗುಳ ಹೋಬಳಿಯಲ್ಲಿ ಬರುವ ಕೆರೆಗಳಿಗೆ ಏತ ನೀರಾವರಿ ಮೂಲಕ ನೀರು ತುಂಬಿಸುವ ಕಾಮಗಾರಿ.	25.37	4.53
		ಓಷನ್ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈ.ಲಿ.	17) ಚನ್ನರಾಯಪಟ್ಟಣ ತಾಲ್ಲೂಕಿನ ಅಮಾನಿಕೆರೆಯಿಂದ 25 ಸಂಖ್ಯೆ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ.	64.89	18.72
		ಅಮೃತ್ ಕನ್‌ಸ್ಟ್ರಕ್ಸನ್ ಪ್ರೈ.ಲಿ. & ಶ್ರೀ ಎಸ್. ನಾರಾಯಣರೆಡ್ಡಿ	18) ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ-ಶಂಭುದೇವರ ಕೆರೆಯಿಂದ 26 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ.	57.65	41.62
		ಗ್ರೋಮಾ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್	Augmentation ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ-ಶಂಭುದೇವರ ಕೆರೆಗೆ ನೀರು ತುಂಬಿಸುವ ಕಾಮಗಾರಿ	26.00	4.38
		ಮೆ॥ ಶ್ರೀ ಶ್ರೀನಿವಾಸ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈ.ಲಿ. ಬಳ್ಳಾರಿ	19) ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿಯ 19 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ.	32.00	9.37

2352

ಕ್ರ ಸಂ	ವಿಭಾಗದ ಹೆಸರು	ಗುತ್ತಿಗೆದಾರರ ಹೆಸರು	ಪ್ರಮುಖ ಕಾಮಗಾರಿಯ ಹೆಸರು	ಕಾಮಗಾರಿಯ ಗುತ್ತಿಗೆ ಮೊತ್ತ	ಜುಲೈ 2019ರಿಂದ ಫೆಬ್ರವರಿ 2021ರವರೆಗೆ ಪಾವತಿಸಿರುವ ಬಿಲ್ಲಿನ ಮೊತ್ತ
		ಎಂ.ವೈ. ಕಟ್ಟೀಮನಿ	20) ಹೇಮಾವತಿ ಎಡದಂಡೆ ನಾಲೆಯ ಸರಪಳಿ 0.00 ಕಿ.ಮೀ ನಿಂದ 71.62 ಕಿ.ಮೀವರೆಗೆ ಮತ್ತು ಬಿ.ಎನ್.ಟಿ. ಅಪ್ರೋಚ್ ನಾಲೆ 0.00 ಕಿ.ಮೀ ಇಂದ 5.57 ಕಿ.ಮೀವರೆಗೆ ಆಧುನೀಕರಣ ಕಾಮಗಾರಿ.	762.42	0.00
		ಎಂ.ವೈ. ಕಟ್ಟೀಮನಿ	21) ಹೇಮಾವತಿ ಎಡದಂಡೆ 72.00 ಕಿ.ಮೀ. ನಿಂದ 212 ಕಿ.ಮೀವರೆಗೆ ನಾಲಾ ಆಧುನೀಕರಣ ಕಾಮಗಾರಿ.	865.27	315.56
6	ನಂ.3 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕೃಷ್ಣರಾಜಪೇಟೆ	ವೈ. ಪಿಚ್ಚೇಶ್ವರರಾವ್ (ಶ್ರೀ ಶ್ರೀನಿವಾಸ್ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈ.ಲಿ.)	22) ಹೇಮಾವತಿ ನದಿಯಿಂದ ಗುಡ್ಡೇಹೊಸಹಳ್ಳಿ ಹತ್ತಿರ ನೀರನ್ನು ಎತ್ತಿ ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.	207.36	10.41
			ಒಟ್ಟು :-	**4301.88**	**930.20**

- ಜುಲೈ 2019 ರಿಂದ ಫೆಬ್ರವರಿ 2021ರ ಅಂತ್ಯದವರೆಗೆ ಬಿಡುಗಡೆಯಾಗಿರುವ ರೂ.**1538.40**/- ಕೋಟಿಗಳ ಪೈಕಿ ರೂ.**930.20**/- ಕೋಟಿಗಳನ್ನು ರೂ.5.00 ಕೋಟಿಗಳಿಗೂ ಮೇಲ್ಪಟ್ಟ ಪ್ರಮುಖ ಕಾಮಗಾರಿಗಳಿಗೆ ಪಾವತಿ ಮಾಡಲಾಗಿರುತ್ತದೆ.
- ಉಳಿಕೆ ರೂ.**608.20**/- ಕೋಟಿಗಳನ್ನು ಎಸ್.ಸಿ.ಪಿ, ಟಿ.ಎಸ್.ಪಿ, ಹಾಗೂ ಇತರೆ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗಳು ಮತ್ತು ನಿರ್ವಹಣೆ ಕಾಮಗಾರಿಗಳಿಗಾಗಿ ಪಾವತಿ ಮಾಡಲಾಗಿದೆ.

** ** **

೯೯

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2353
2. ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)
3. ಉತ್ತರಿಸಬೇಕಾದ ದಿನಾಂಕ : 16.03.2021

ಕ್ರಸಂ	ಪ್ರಶ್ನೆಗಳು	ಉತ್ತರಗಳು
ಅ)	ಪ್ರಸ್ತುತ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಎತ್ತಿನಹೊಳೆ ಮುಖ್ಯ ನಾಲೆಯ ಸರಪಳಿ 130 ಕಿ.ಮೀ ನಿಂದ 210 ಕಿ.ಮೀ.ವರೆಗಿನ ನಾಲಾ ಕಾಮಗಾರಿಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಸಾವಿರಾರು ಕೋಟಿ ರೂ.ಗಳಿಗೆ ಟೆಂಡರ್ ಕರೆದಿರುವುದು ನಿಜವೇ (ಸಂಪೂರ್ಣ ಮಾಹಿತಿ ನೀಡುವುದು);	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಗುರುತ್ವ ಕಾಲುವೆಯ ಸರಪಳಿ 130.00 ರಿಂದ 160.00 ಕಿ.ಮೀ ರವರೆಗಿನ ಕಾಲುವೆ ಕಾಮಗಾರಿಗಳಿಗೆ 2018-19ನೇ ಸಾಲಿನಲ್ಲಿ ಹಾಗೂ ಸರಪಳಿ 160.00 ರಿಂದ 210.00 ಕಿ.ಮೀ ವರೆಗಿನ ಕಾಲುವೆ ಕಾಮಗಾರಿಗಳಿಗೆ 2017-18ನೇ ಸಾಲಿನಲ್ಲಿ ಹಿಂದಿನ ಸರ್ಕಾರದ ಅವಧಿಯಲ್ಲಿ ಟೆಂಡರ್ ಕರೆಯಲಾಗಿದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಅಗತ್ಯವಿರುವ ಜಮೀನುಗಳ ಭೂಸ್ವಾಧೀನವನ್ನು ಹೊಸ ಭೂಸ್ವಾಧೀನ ಕಾಯ್ದೆ 2013 ರನ್ವಯ ಮಾಡಲಾಗುತ್ತಿದೆ. ಆದರೆ, ಈ ಪ್ರಕ್ರಿಯೆಯಲ್ಲಿ ಸುಮಾರು ಎರಡು ವರ್ಷ ಕಾಲವ್ಯಯವಾಗುವುದರಿಂದ, ಕುಡಿಯುವ ನೀರೊದಗಿಸುವ ಹಾಗೂ ಅಂತರ್ಜಲ ಮರುಪೂರಣಗೊಳಿಸಲು ಕೆರೆ ತುಂಬಿಸುವ ಯೋಜನೆಯ ಉದ್ದೇಶವನ್ನು ಶೀಘ್ರವಾಗಿ ಸಫಲಗೊಳಿಸಲು ಗುತ್ತಿಗೆದಾರರು ರೈತರ ಒಪ್ಪಿಗೆ ಪಡೆದು ಕಾಮಗಾರಿಯನ್ನು ಪ್ರಾರಂಭಿಸಲು ಕರಾರು ಒಪ್ಪಂದ ಪತ್ರದಲ್ಲಿ ಷರತ್ತು ವಿಧಿಸಲಾಗಿರುತ್ತದೆ. ಜೊತೆಗೆ ರೈತರು, ನಿಗಮ ಮತ್ತು ಗುತ್ತಿಗೆದಾರರ ನಡುವೆ ತ್ರಿಪಕ್ಷೀಯ ಕರಾರು ಒಪ್ಪಂದ ಮಾಡಿಕೊಂಡು ರೈತರ ಸಹಮತ ಪಡೆದು ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಆದಾಗ್ಯೂ ಹೊಸ ಭೂಸ್ವಾಧೀನ ಕಾಯ್ದೆ ಅನ್ವಯ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಜರುಗಿಸಲಾಗುತ್ತಿದ್ದು, ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ.
ಆ)	ಎತ್ತಿನಹೊಳೆ ಮುಖ್ಯ ನಾಲೆಯ ಸರಪಳಿ:130 ಕಿ.ಮೀ ನಿಂದ 210 ಕಿ.ಮೀ. ವರೆಗಿನ ನಾಲಾ ಕಾಮಗಾರಿಗಳನ್ನು ಎಷ್ಟು ಪ್ಯಾಕೇಜ್‌ಗಳನ್ನಾಗಿ ಮಾಡಿ ಟೆಂಡರ್ ಕರೆಯಲಾಗಿದೆ; ಎಷ್ಟು ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ ಹಾಗೂ ಎಷ್ಟು ಜನ ಗುತ್ತಿಗೆದಾರರ ಪೂರ್ವಾರ್ಹತೆ ಪರಿಶೀಲಿಸಿ ಅರ್ಹರ ಪಟ್ಟಿಯನ್ನು ತಯಾರಿಸಲಾಗಿದೆ; ಎಷ್ಟು ಜನ ಅರ್ಹರಾಗಿರುತ್ತಾರೆ ಹಾಗೂ ಆರ್ಥಿಕ ಬಿಡ್‌ಗೆ ಎಷ್ಟು ಜನರನ್ನು ಅರ್ಹಗೊಳಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಸರಪಳಿ 130.00 ಕಿ.ಮೀ ನಿಂದ 210 ಕಿ.ಮೀ ವರೆಗಿನ ನಾಲಾ ಕಾಮಗಾರಿಗಳನ್ನು 10 ಪ್ಯಾಕೇಜ್‌ಗಳಾಗಿ ಮಾಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ಯಾಕೇಜ್ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸಿದ ಗುತ್ತಿಗೆದಾರರ ಸಂಖ್ಯೆ, ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ನಲ್ಲಿ ಅರ್ಹಗೊಂಡಿರುವ ಗುತ್ತಿಗೆದಾರರ ಸಂಖ್ಯೆಯ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಇ)	ಎತ್ತಿನಹೊಳೆ ಮುಖ್ಯ ನಾಲೆಯ ಸರಪಳಿ:130 ಕಿ.ಮೀ. ನಿಂದ 210 ಕಿ.ಮೀ. ವರೆಗಿನ ನಾಲಾ ಕಾಮಗಾರಿಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಟೆಂಡರ್ ಕರೆಯಲು ಕಾನೂನಿನಲ್ಲಿ ಅವಕಾಶವಿದೆಯೇ; ಕಾನೂನಿನಲ್ಲಿ ಅವಕಾಶವಿಲ್ಲದೆ ಟೆಂಡರ್ ಕರೆದಿದ್ದಲ್ಲಿ, ಅದಕ್ಕೆ ಯಾರು ಜವಾಬ್ದಾರರು; ಅಂತಹ ಅಧಿಕಾರಿಗಳ ವಿರುದ್ಧ ಯಾವ ರೀತಿ ಕ್ರಮ ಜರುಗಿಸಲಾಗಿದೆ;	ಭೂಸ್ವಾಧೀನ ಕಾಯ್ದೆಯಡಿ ಭೂಮಿಯನ್ನು ಸ್ವಾಧೀನ ಪಡೆಯುವುದನ್ನು ಕಾಯ್ದಿರಿಸಿ ಭೂಮಾಲೀಕರು ಕಾಮಗಾರಿ ನಿರ್ವಹಿಸಲು ಒಪ್ಪಿಗೆ ನೀಡಿದಲ್ಲಿ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಭೂಸ್ವಾಧೀನ ಕಾಯ್ದೆಯಡಿ ನಿರ್ದಿಷ್ಟವಾದ ನಿಬಂಧನೆ ಇಲ್ಲದಿದ್ದರೂ ಯೋಜನಾ ವೆಚ್ಚದಲ್ಲಿನ ಹೆಚ್ಚಳ ತಪ್ಪಿಸಲು ಮತ್ತು ಯೋಜನೆಯ ಲಾಭವನ್ನು ಅರ್ಹ ಫಲಾನುಭವಿಗಳಿಗೆ ಶೀಘ್ರವಾಗಿ ತಲುಪಿಸುವ ಸಲುವಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಚಾಲ್ತಿಯಲ್ಲಿರಿಸಿ, ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತಿದ್ದು, ಈ ಕ್ರಮವನ್ನು ಸರ್ವ ಸಾಮಾನ್ಯವಾಗಿ ರಾಜ್ಯದ ಎಲ್ಲಾ ಯೋಜನೆಗಳಲ್ಲೂ ಅನುಸರಿಸಲಾಗುತ್ತಿದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಭೂಸ್ವಾಧೀನ ಕಾಯ್ದೆ 2013 ರನ್ವಯ ಭೂಸ್ವಾಧೀನವನ್ನು ಮಾಡಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಸುಮಾರು ಎರಡರಿಂದ ಮೂರು ವರ್ಷ ಕಾಲ ವ್ಯಯವಾಗುತ್ತದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಹಾಗೂ ಕೆರೆ ತುಂಬಿಸಲು ಯೋಜಿಸಲಾಗಿದ್ದು, ಈ ಉದ್ದೇಶವನ್ನು ಸಫಲಗೊಳಿಸಲು ಯೋಜನೆಯ ಅನುಷ್ಠಾನದ ವಿಳಂಬವನ್ನು ತಡೆಯುವ ದೃಷ್ಟಿಯಿಂದ ಹಾಗೂ ಯೋಜನಾ ವೆಚ್ಚವು ಪ್ರತಿ ವರ್ಷ ಶೇಕಡ 5 ರಿಂದ 10 ರಷ್ಟು ಹೆಚ್ಚಾಗುವ ಸಂಭವವಿರುವುದರಿಂದ ನಾಲಾ ಕಾಮಗಾರಿಗಳನ್ನು ಕಾಲಮಿತಿಯೊಳಗೆ ನಿರ್ವಹಿಸುವ ಹಿತದೃಷ್ಟಿಯಿಂದ ಭೂ ಮಾಲೀಕರಿಗೆ ಹೊಸ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ನೀಡಬಹುದಾದ ಪರಿಹಾರವನ್ನು ಮತ್ತು ಇತರೆ ಸೌಲಭ್ಯಗಳನ್ನು ಯಾವುದೇ ವಿವಾದಗಳಿಲ್ಲದೆ ನ್ಯಾಯ ಸಮ್ಮತವಾಗಿ ದೊರಕಿಸಿಕೊಡಲು ಹಾಗೂ ಕಾಮಗಾರಿಯ ಗುತ್ತಿಗೆ ಕರಾರಿನಲ್ಲಿ ಅಳವಡಿಸಿಕೊಂಡಿರುವ ಜವಾಬ್ದಾರಿಯನ್ನು ಗುತ್ತಿಗೆದಾರರು ನಿಗಮದೊಡನೆ ಯಾವುದೇ ವ್ಯಾಜ್ಯ ವಿಲ್ಲದೆ ನಿಭಾಯಿಸಲು ರೈತರು, ನಿಗಮ ಮತ್ತು ಗುತ್ತಿಗೆದಾರರ ನಡುವೆ ತ್ರಿಪಕ್ಷೀಯ ಕರಾರು ಒಪ್ಪಂದ ಮಾಡಿಕೊಂಡು ಅವಶ್ಯವಿರುವ ಜಮೀನಿನ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಭೂ ಮಾಲೀಕರ ಒಪ್ಪಿಗೆ ಪಡೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.
ಈ)	ಎತ್ತಿನಹೊಳೆ ಮುಖ್ಯ ನಾಲೆಯ ಸರಪಳಿ:210 ಕಿ.ಮೀ. ನಂತರದ ಸರಪಳಿಗಳಲ್ಲಿ ಸಾವಿರಾರು ಕೋಟಿ ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಕರೆದಿರುವುದು ನಿಜವೇ ಹಾಗೂ ಎಷ್ಟು ಜನ ಗುತ್ತಿಗೆದಾರರ ಪೂರ್ವಾರ್ಹತೆಯನ್ನು ಪರಿಶೀಲಿಸಿ ಅರ್ಹರ ಪಟ್ಟಿಯನ್ನು ತಯಾರಿಸಲಾಗಿದೆ ಹಾಗೂ ಆರ್ಥಿಕ ಬಿಡ್‌ಗೆ ಎಷ್ಟು ಜನರನ್ನು ಅರ್ಹಗೊಳಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಸರಪಳಿ 210 ಕಿ.ಮೀ ನಂತರದ ಕಾಮಗಾರಿಗಳನ್ನು 06 ಪ್ಯಾಕೇಜ್ ಮಾಡಿ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಿದ ಗುತ್ತಿಗೆದಾರರ ಸಂಖ್ಯೆ, ಪೂರ್ವಾಹತೆಯಲ್ಲಿ ಅರ್ಹಗೊಂಡ ಗುತ್ತಿಗೆದಾರರ ಸಂಖ್ಯೆಯ ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಊ)	2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯಲಾಗಿದೆಯೇ; ಸಹಮತಿ ಪಡೆಯದಿದ್ದಲ್ಲಿ, ಈ ಕಾಮಗಾರಿಗಳನ್ನು ಯಾವ ಆದೇಶದ ಮೇರೆಗೆ ಕೈಗೊಳ್ಳಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)	• ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಸರಪಳಿ: 170.287 ಕಿ.ಮೀ ನಿಂದ 222.00 ಕಿ.ಮೀ ವರೆಗಿನ ಗುರುತ್ವಾ ಕಾಲುವೆ ಕಾಮಗಾರಿಗಳಿಗೆ 2017-18ನೇ ಸಾಲಿನಲ್ಲಿ ಟೆಂಡರ್ ಕರೆಯಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. • ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಸರಪಳಿ 100.00 ಕಿ.ಮೀ ನಿಂದ 160.00/170.287 ಕಿ.ಮೀ, ಸರಪಳಿ 222.00 ಕಿ.ಮೀ ನಿಂದ 240.00 ಕಿ.ಮೀ ವರೆಗಿನ ಗುರುತ್ವಾ ಕಾಲುವೆ ಕಾಮಗಾರಿಗಳಿಗೆ 2018-19ನೇ ಸಾಲಿನಲ್ಲಿ ಟೆಂಡರ್ ಕರೆಯಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. • ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಸರಪಳಿ 240.00 ಕಿ.ಮೀ ನಿಂದ 260.00 ಕಿ.ಮೀ ವರೆಗಿನ ಗುರುತ್ವಾ ಕಾಲುವೆ ಕಾಮಗಾರಿಗಳಿಗೆ 2019-20ನೇ ಸಾಲಿನಲ್ಲಿ ಟೆಂಡರ್ ಕರೆಯಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ರೂ.12916.32 ಕೋಟಿ ಮೊತ್ತದ ಪರಿಷ್ಕೃತ ಯೋಜನಾ ವರದಿಗೆ 2013-14 ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲಾಗಿದ್ದು, ಮೇಲೆ ತಿಳಿಸಿರುವ ಕಾಮಗಾರಿಗಳು ಹೊಸ ಕಾಮಗಾರಿಗಳಾಗಿರದೇ 2019-20ನೇ ಸಾಲಿನ ಮುಂದುವರೆದ ಕಾಮಗಾರಿಗಳಾಗಿರುತ್ತವೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯು ಸಮಗ್ರ ಕುಡಿಯುವ ನೀರಿನ ಯೋಜನೆಯಾಗಿದ್ದು, ರಾಷ್ಟ್ರೀಯ ಜಲ ನೀತಿ ಅನ್ವಯ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಬೇಕಾಗಿದ್ದು, ಕಾಮಗಾರಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಿ, ಪಾಲಾರ್, ಪೆನ್ನಾರ್ deficit basin ನ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆ ಹಾಗೂ ಕೆರೆಗಳನ್ನು ತುಂಬಿಸುವ ಮುಖೇನ ಅಂತರ್ಜಲ ಮರುಪೂರಣದ ಫಲಶ್ರುತಿಯನ್ನು ಜನ/ ರೈತ ಸಮುದಾಯಕ್ಕೆ ಶೀಘ್ರವಾಗಿ ತಲುಪಿಸುವ ನಿಟ್ಟಿನಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಸಂಖ್ಯೆ: ಜಸಂಇ 31 ಡಬ್ಲ್ಯೂಎಲ್ಎ 2021

(ಬಿ.ಎಸ್ ಯಡಿಯೂರಪ್ಪ)

ಮುಖ್ಯಮಂತ್ರಿ

ವಿಧಾನ ಸಭೆ ಸದಸ್ಯರಾದ ಮಾನ್ಯ ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಸಕಲೇಶಪುರ)ಇವರ ಪ್ರಶ್ನೆ ಸಂಖ್ಯೆ: 2353 ಕ್ಕೆ ಅನುಬಂಧ-1

ಎತ್ತಿನಹೊಳೆ ಯೋಜನೆಯ ಗುರುತ್ವ ಕಾಲುವೆಯ ಸರಪಳಿ 130.00 ಕಿ.ಮೀ ನಿಂದ 210.00 ಕಿ.ಮೀ ವರೆಗಿನ ಕಾಮಗಾರಿಗಳ ವಿವರ

ಕ್ರ ಸಂ	ಕಾಮಗಾರಿ ಹೆಸರು	ಟೆಂಡರ್ ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ಸಂಖ್ಯೆ	ಪೂರ್ವಾಹತೆ ಹೊಂದಿರುವ ಗುತ್ತಿಗೆದಾರರ ಸಂಖ್ಯೆ	ಆರ್ಥಿಕ ಬಿಡ್‌ಗೆ ಅರ್ಹರಾದ ಬಿಡ್ಡುದಾರರ ಸಂಖ್ಯೆ
1	Construction of Gravity canal from Km 127.000 to Km 137.620 (Comprising of Earthwork Excavation, formation of Embankment, CC lining using Mechanical Paver including structures and Major Aqueduct from Km 134.980 to Km 137.620) under Yettinahole Project **(YGC-PKG– XVIII) - Indent No:1104**	2	2	2
2	Construction of Gravity canal from Km 137.620 to Km 140.700 (Comprising of Earthwork Excavation, formation of Embankment, CC lining using Mechanical Paver including structures and Major Aqueduct from Ch:137.620 km to Ch:139.510 km) under Yettinahole Project **(YGC-PKG– XIX) Indent No-1116**	2	2	2
30	Providing CC Lining at Vulnerable reaches From Ch: 6.10 Km to 6.80 Km, 7.5 Km to 8.00km, 8.10 to 8.30 Km of D-26 of D.D.Urs Canal	97.00
31	Providing CC Lining at Vulnerable reaches From Ch: 8.40 Km to 9.00 Km, 10.30 Km to 10.80 Km, 11.40 to 12.00 km of D-26 of D.D.Urs Canal	98.00
32	Providing CC Lining at at Vulnerable reaches from Ch: 12.20 km to 19.50 km of D.D.Urs Canal.	125.00
33	Providing CC lining at vulnerable reaches and Construction of CC Drain For DPO's of Lat -6 of D-26 of D D Urs Canal.	50.00
34	Providing CC lining at vulnerable reaches of Lat -9 of D-26 of D D Urs Canal.	20.00
35	Providing CC Box Lining to hallikerehundi tank canal and construction of Causeway to Halla near hallikerehundi village coming under the atchkat of D-24 of D.D.Urs Canal.	49.00
36	Providing CC Lining at Vulnerable reaches From Ch: 00.00 Km, 19.50 Km of D-26 and left over reaches of Laterals of D-26 of D.D.Urs Canal	1,250.00
37	Providing CC lining to selected reaches from ch: 0.0 to 22.00 km of Dy 25 and its minors coming under the atchkat of DDUC.	1,000.00
38	Providing CC lining to selected reaches from ch: 0.0 to 8.00 km of Dy 30 and its Sub distributories 1 to 5 & its laterals and Dy 27 & D35 coming under the atchkat of DDUC.	600.00
39	Providing CC lining to selected reaches from ch: 0.0 to 8.00 km of Dy 55.830 km and its Sub distributories coming under the atchkat of DDUC.	450.00
40	Providing CC lining to selected reaches from ch: 0.0 to 2.50 km of Dy 75.90 & from ch: 0.0 to 6.50 km of Dy 78.225 coming under the atchkat of DDUC.	250.00
41	Providing CC lining to selected reaches from from ch: 0.0 to 4.85 km of Dy 101.10 & from ch: 0.0 to 2.70 km of Dy 101.525 km coming under the atchkat of DDUC.	150.00

2434

ಕ್ರ. ಸಂ.	ಕಾಮಗಾರಿ ವಿವರ	ಮೊತ್ತ (ರೂ. ಲಕ್ಷಗಳಲ್ಲಿ)
42	Providing CC lining to selected reaches from ch: 0.0 to 7.10 km of Dy 92.060 coming under the atchkat of DDUC.	100.00
43	Improvements to selceted reaches of Someshwara pura pickup left and right bank, Yennehole Right bank canal and Kochanahalli pickup canal.	250.00
44	Providing CC Box Lining to hallikerehundi tank canal and construction of Causeway to Halla near hallikerehundi village coming under the atchkat of D-24 of D.D.Urs Canal.	80.00
45	Construction of cut and cover in Deepcut portion of Harohalli branch canal coming under atchkat of D-24 Of DDUC	70.00
46	Improvements of Box Culvert@1926.00m of Marse pickup canal.	10.00
47	Improvements to Escape Sluice & Cross regulator @ch.47.12km of DDUC.	10.00
48	Providing CC Lining in damaged portion from Ch. 6.8 Km. to 10.80 Km., SD-4L, SD-4R , SD-5L & SD-6L of Dy- 67750 m. of DDUC	270.00
49	Providing CC Lining in damaged portion from Ch. 2.00 Km. to 5.50 Km., SD-2, SD-3 , & SD-4 of Dy- 69400 m. of DDUC	260.00
50	Providing CC Lining in damaged portion from Ch. 2.50 Km. to 5.50 Km., SD-3, SD-4 , & SD-5 of Dy- 69175 m. of DDUC	220.00
	Total	**19158.00**

2442

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2442
02.	ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	: ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
03.	ಉತ್ತರಿಸುವ ದಿನಾಂಕ	: 16/03/2021
04.	ಉತ್ತರಿಸುವ ಸಚಿವರು.	: ಮಾನ್ಯ ಗೃಹ ಸಚಿವರು

ಪ್ರಶ್ನೆ	ಉತ್ತರ
ಅ) ಮಹಾನಗರ ಪ್ರದೇಶಗಳೂ ಸೇರಿದಂತೆ ರಾಜ್ಯಾದ್ಯಂತ ನಡೆಯುತ್ತಿರುವ ಅಪರಾಧಗಳ ಕೃತ್ಯಗಳನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡ ಕಟ್ಟುನಿಟ್ಟಿನ ಪ್ರತಿಭಂಧಕ ಕ್ರಮಗಳೇನು ;	ಮಹಾನಗರ ಪ್ರದೇಶಗಳೂ ಸೇರಿದಂತೆ, ರಾಜ್ಯಾದಾದ್ಯಂತ ಅಪರಾಧಗಳ ಕೃತ್ಯಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ. ➢ ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹೊಸ ಬೀಟ್ ಪದ್ಧತಿಯನ್ನು ಜಾರಿಗೆ ತರಲಾಗಿರುತ್ತದೆ. ➢ ಈ ಹೊಸ ಬೀಟ್ ಪದ್ಧತಿಯಲ್ಲಿ ಪ್ರತಿ ಪೋಲೀಸ್ ಠಾಣಾ ಸರಹದ್ದುಗಳ ಬೀಟ್ ಮತ್ತು ಉಪ-ಬೀಟ್‌ಗಳ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕ ಸಂಪರ್ಕ ಸಭೆಗಳನ್ನು ನಡೆಸಿ ಅಪರಾಧ ತಡೆಗಟ್ಟಲು ಎಚ್ಚರ ವಹಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ➢ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಚಾರ ನಿರ್ವಹಣೆ ಮತ್ತು ಅಪರಾಧ ಹಿನ್ನಲೆಯಿರುವ ಆಸಾಮಿಗಳ ಮೇಲೆ ನಿಗಾವಹಿಸುವ ಸಲುವಾಗಿ ಸರ್ಕಾರದ ವತಿಯಿಂದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲು ಇರಿಸಲಾಗುತ್ತಿದೆ. ಅಂಗಡಿಗಳು, ಮಾಲುಗಳು ಮತ್ತು ಪ್ರಮುಖ ವ್ಯಾಪಾರ ಕಟ್ಟಡಗಳ ಮಾಲೀಕರುಗಳು, ಪಬ್ಲಿಕ್ ಸೇಫ್ಟಿ ಕಾಯ್ದೆ ರೀತ್ಯಾ ಸಿ.ಸಿ.ಟಿ.ವಿ. ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ. ➢ ಸರಗಳ್ಳತನ ಮಾಡುವ ಎಮ್.ಓ.ಬಿ ಗಳ ಪರಿಶೀಲನೆ ತೀವ್ರಗೊಳಿಸಲಾಗಿದೆ. ಸರಗಳ್ಳತನ ನಡೆಯುವ ಅವಧಿ ಮತ್ತು ಪ್ರದೇಶಗಳನ್ನು ಗುರುತಿಸಿ ವಿಶೇಷ ಗಸ್ತು ಹಾಗೂ ನಾಕಾಬಂಧಿ ಏರ್ಪಡಿಸಲಾಗುತ್ತಿದೆ. ➢ ಎಂ.ಓ.ಬಿ. ಆಸಾಮಿಗಳು, ಪೂರ್ವಸಜಾ ಆಸಾಮಿಗಳು, ರೌಡಿ ಆಸಾಮಿಗಳನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಿ ಈ ಆಸಾಮಿಗಳ ವಿರುದ್ಧ ಕಲಂ 107, 109, 110 ಸಿಆರ್‌ಪಿಸಿ ರೀತ್ಯಾ ಭದ್ರತಾ ಕಾಯ್ದೆಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ. ➢ ಕರ್ನಾಟಕ ಪೋಲೀಸ್ ಕಾಯ್ದೆ 1963 ರ ಸೆಕ್ಷನ್ 92

	ರಡಿಯಲ್ಲಿಯು ಸಹ ಅಪರಾಧವೆಸಗಿದ ಅಪರಾಧಿಗಳ ವಿರುದ್ಧ ಪ್ರಕರಣ ದಾಖಲಿಸಿ ಕ್ರಮಕೈಗೊಳ್ಳಲಾಗುತ್ತಿದೆ. ➢ ಅಪರಾಧ ತಡೆಗಟ್ಟಲು ಕಮ್ಯೂನಿಟಿ ಪೋಲೀಸಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ. ➢ ಅಪರಾಧಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಕರಪತ್ರಗಳನ್ನು ಪ್ರಕಟಿಸಿ ವಿತರಿಸಲಾಗುತ್ತಿದೆ. ➢ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆದು ಕಳ್ಳತನ ಮಾಡುವವರ ಮತ್ತು ಬಸ್‌ಗಳಲ್ಲಿ ಸೂಟ್‌ಕೇಸ್ ಕಳ್ಳತನ ಮಾಡುವವರ ಮೇಲೆ ಗಮನ ಹರಿಸುವಂತೆ ಸಾರ್ವಜನಿಕರಲ್ಲಿ ಹಾಗೂ ಪ್ರಯಾಣಿಕರಲ್ಲಿ ಮನವಿ ಮಾಡಲಾಗುತ್ತಿದೆ. ➢ ನೊಂದ ವ್ಯಕ್ತಿಗಳು ದೂರವಾಣಿ ಮೂಲಕ ನಿಸ್ತಂತು ಕೇಂದ್ರಕ್ಕೆ ಮಾಹಿತಿ ನೀಡುವ ಸಲುವಾಗಿ ಡಯಲ್-100 ದೂರವಾಣಿ ಸಂಪರ್ಕ, ಮಹಿಳೆಯರು ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಗಳಾಗಿ ದೂರವಾಣಿ ನಂಬರ್-1092 ಹಾಗೂ 1098 ಚಾಲನೆಯಲ್ಲಿರುತ್ತದೆ. ➢ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ಜನರ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಅಪರಾಧಿಗಳ ಮೇಲೆ ಎಮ್‌ಓಬಿ ಹಾಗೂ ರೌಡಿ ಶೀಟ್ ತೆರೆಯಲಾಗುವುದು ಹಾಗೂ ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಗಡಿಪಾರು ಮಾಡಲಾಗುವುದು. ➢ ದಿನದ 24 ಗಂಟೆ ಅಧಿಕಾರಿ ಸಿಬ್ಬಂದಿಯವರು ಗಸ್ತು ಕರ್ತವ್ಯವನ್ನು ಸರದಿ ಪ್ರಕಾರ ನಿರ್ವಹಣೆ ಮಾಡಲಾಗುತ್ತಿದೆ. ಆ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುವ ದರೋಡೆ ಸುಲಿಗೆ ಪ್ರಕರಣಗಳನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗಿರುತ್ತದೆ. ಅಲ್ಲದೇ ಸದರಿ ರಸ್ತೆಗಳಲ್ಲಿ ರಸ್ತೆ ಅಪಘಾತಗಳು ಸಂಭವಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಚಿಕಿತ್ಸೆಗೆ ಸಾಗಿಸಲು ಸಹಾಯಕವಾಗಿರುತ್ತದೆ. ➢ ಪ್ರತಿ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬ್ಯಾಂಕ್/ಎಟಿಎಂ/ಅಂಚೆ ಕಛೇರಿಗಳಲ್ಲಿ ಅಲಾರಂ ಸಿಸ್ಟಂ ಅಳವಡಿಸಿ ಹಾಗೂ ಕಡ್ಡಾಯವಾಗಿ ಸೆಕ್ಯೂರಿಟಿ ಗಾರ್ಡ್ ನೇಮಕ ಮಾಡಿಕೊಳ್ಳುವ ಬಗ್ಗೆ ಸಂಬಂಧಪಟ್ಟವರಿಗೆ ಪೋಲೀಸ್ ನೋಟೀಸ್ ನೀಡಿ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ. ➢ ದೇವಸ್ಥಾನ/ಮಸೀದಿ/ಚರ್ಚ್/ಬ್ಯಾಂಕ್/ಎಟಿಎಂ/ಜ್ಯೂವೆಲರಿ ಶಾಪ್ ಮತ್ತು ಸೈಬರ್ ಸೆಂಟರ್‌ಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಕ್ಯಾಮೆರಾ ಅಳವಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಹಾಗೂ ಈ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ಕೂಡ ಜಾರಿ ಮಾಡಲಾಗಿರುತ್ತದೆ. ಮತ್ತು ಸಂಬಂಧಪಟ್ಟ ಮಾಲೀಕರುಗಳಿಗೆ Burglary Alarm ಅಳವಡಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

- ➢ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್ಸ್ಟಾಗ್ರಾಂ, ಪೊಲೀಸ್ ವೆಬ್‌ಸೈಟ್‌ಗಳನ್ನು ಬಳಸಿ ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಬಗ್ಗೆ, ಅಪರಾಧಿಕ ಕೃತ್ಯಗಳ ಬಗ್ಗೆ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ➢ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯ ಮಾಲೀಕರುಗಳು ತಮ್ಮ ಮನೆಯನ್ನು ಬಾಡಿಗೆಗೆ ಕೊಡುವಾಗ ಬಾಡಿಗೆದಾರರ ಪೂರ್ವಪರಗಳನ್ನು ವಿಚಾರ ಮಾಡಿ ನೈಜ ದಾಖಲಾತಿಗಳೊಂದಿಗೆ ಮನೆ ಬಾಡಿಗೆಗೆ ಕೊಡುವುದು ಹಾಗೂ ಬಾಡಿಗೆದಾರರ ಮನೆಗೆ ಬಂದು-ಹೋಗುವವರ ಮೇಲೆ ನಿಗಾ ಇಡಲು ನಾಗರೀಕ ಸದಸ್ಯರ ಸಭೆಯಲ್ಲಿ ಕೋರಲಾಗಿರುತ್ತದೆ.
- ➢ ಸೈಬರ್ ವಂಚನೆ ಮತ್ತು ದುರುಪಯೋಗ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಪರಿಹರಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ರಾಜ್ಯದ ಪ್ರತಿ ಘಟಕದಲ್ಲಿ ಒಂದರಂತೆ ಹಾಗೂ ಬೆಂಗಳೂರು ನಗರದ ಎಲ್ಲಾ 8-ವಿಭಾಗಗಳಲ್ಲಿ ಪ್ರತ್ಯೇಕವಾಗಿ ಸೈಬರ್ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ.
- ➢ ಸೈಬರ್ ಪ್ರಕರಣಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅವಶ್ಯಕ ಸಿಬ್ಬಂದಿ ಮತ್ತು ಸಮರ್ಥ ತಂತ್ರಜ್ಞಾನಗಳನ್ನು ಮತ್ತು ಸಿಬ್ಬಂದಿಗಳಿಗೆ ಅಗತ್ಯ ತರಬೇತಿಯನ್ನು ನೀಡಲಾಗಿರುತ್ತದೆ.
- ➢ ಸೈಬರ್ ಅಪರಾಧ/ವಂಚನೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಈಗಾಗಲೇ ಚುಟುಕು ವಿಡಿಯೋಗಳನ್ನು ಫೇಸ್‌ಬುಕ್ ಹಾಗು ಜಾಲತಾಣಗಳಲ್ಲಿ ಅಳವಡಿಸಲಾಗಿದೆ.
- ➢ ಮಹಿಳೆಯ ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟಲು ಮಹಿಳಾ ಮತ್ತು ಮಕ್ಕಳ ಸಹಾಯವಾಣಿ ಹಾಗೂ ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ, ಮತ್ತು ಸ್ಪಂದನ ಸಹಾಯವಾಣಿಗಳನ್ನು ಸ್ಥಾಪಿಸಲಾಗಿರುತ್ತದೆ.
- ➢ ಸಾರ್ವಜನಿಕ ಸಹಾಯಕ್ಕಾಗಿ "ಸುರಕ್ಷಾ" ಎಂಬ ಮೊಬೈಲ್ ಅಪ್ಲಿಕೇಷನ್ ಅನ್ನು ಪರಿಚಯಿಸಲಾಗಿದೆ.
- ➢ ರಾಜ್ಯದ ಪ್ರತಿ ಪೊಲೀಸ್ ಠಾಣೆಗಳಲ್ಲಿ ಮಹಿಳೆಯರ ದೂರು ವಿಚಾರಣೆ ಬಗ್ಗೆ ಪ್ರತ್ಯೇಕವಾಗಿ ಮಹಿಳಾ ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗಿದೆ.
- ➢ ಬೆಂಗಳೂರು ನಗರದಲ್ಲಿ ದಿನದ 24 ಗಂಟೆಯೂ ಸಹ ಮಹಿಳೆಯರ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಎಂಬ ಗಸ್ತು ವಾಹನ ಗಸ್ತು ಕಾರ್ಯ ನಿರ್ವಹಿಸುತ್ತಿವೆ.
- ➢ ಅದೇ ರೀತಿಯಾಗಿ ರಾಜ್ಯದ ಇತರೆ ಘಟಕಗಳಲ್ಲಿಯೂ ಸಹ ಗಸ್ತು ಪಡೆಗಳು ಕಾರ್ಯ ನಿರ್ವಹಿಸುತ್ತಿದೆ.
- ➢ ವಯೋವೃದ್ಧರು, ಒಂಟಿ ಮಹಿಳೆಯರು ನೆಲೆಸಿರುವ ಬಗ್ಗೆ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಸರ್ವೆ ನಡೆಸಿ ಠಾಣಾ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2450
ಮಾನ್ಯ ಸದಸ್ಯರ ಹೆಸರು	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯಲ್ಲಿನ ಹಲವು ಗ್ರಾಮಗಳಲ್ಲಿ ಅಕ್ರಮ ಮದ್ಯ ಸಂಗ್ರಹ ಹಾಗೂ ಮಾರಾಟ ಮಾಡಲಾಗುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬಂದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೊಪ್ಪಳ ಜಿಲ್ಲೆಯಲ್ಲಿನ ಹಲವು ಗ್ರಾಮಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ ಅಕ್ರಮವಾಗಿ ಮದ್ಯ ಸಂಗ್ರಹ ಹಾಗೂ ಮಾರಾಟ ಮಾಡಲಾಗುತ್ತಿರುವ ಬಗ್ಗೆ ದೂರುಗಳು ಇಲಾಖೆಯಲ್ಲಿ ಸ್ವೀಕೃತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಈ ಕುರಿತು ಹಾಗೂ ಇಲಾಖೆಯವರ ಕರ್ತವ್ಯ ನಿರ್ಲಕ್ಷದ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;	ಇಲಾಖೆಯು ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ ಈ ಕುರಿತು ಪೋಲೀಸ್ ಇಲಾಖೆಯು ಸಹ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಎರಡು ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ದಾಳಿ ಕಾರ್ಯ ನಡೆಸಿ, ಅಕ್ರಮ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಗಿದೆ ಹಾಗೂ ಇದರಲ್ಲಿ ಯಾವುದೇ ಕರ್ತವ್ಯ ನಿರ್ಲಕ್ಷ್ಯತೆ ಕಂಡು ಬಂದಿರುವುದಿಲ್ಲ.

ಇ)	ಇದುವರೆಗೂ ಈ ಕುರಿತು ಇಲಾಖೆಯವರು ಹಮ್ಮಿಕೊಂಡ ದಾಳಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಕಳೆದ ಮೂರು ವರ್ಷಗಳ ವಿವರಗಳನ್ನು ನೀಡುವುದು)	ಕೊಪ್ಪಳ ಜಿಲ್ಲೆಯ ವಲಯಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆಸಿದ ದಾಳಿಗಳ ವಿವರ ಕೆಳಕಂಡಂತೆ.

ಕ್ರಸಂ	ವಲಯ	ನಡೆಸಿದ ದಾಳಿಗಳ ಸಂಖ್ಯೆ		
		2018-19	2019-20	2020-21 (ಫೆಬ್ರವರಿ ಅಂತ್ಯಕ್ಕೆ)
1	ಕೊಪ್ಪಳ	166	254	110
2	ಗಂಗಾವತಿ	80	215	115
3	ಕುಷ್ಟಗಿ	95	240	105
ಒಟ್ಟು		341	709	330

ಈ)	ಸದರಿ ದಾಳಿಗಳಲ್ಲಿ ವಶಪಡಿಸಿಕೊಂಡಿರುವ ಮದ್ಯದ ಪ್ರಮಾಣವೆಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು)	ಕೊಪ್ಪಳ ಜಿಲ್ಲೆಯ ವಲಯಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಳಿ ಸಮಯದಲ್ಲಿ ವಶಪಡಿಸಿಕೊಂಡ ಮದ್ಯದ ವಿವರ ಕೆಳಕಂಡಂತೆ.

ಕ್ರ ಸಂ	ವಲಯ	ವಶಪಡಿಸಿಕೊಂಡ ಮದ್ಯ ಲೀಟರ್‌ಗಳಲ್ಲಿ		
		2018-19	2019-20	2020-21 (ಫೆಬ್ರವರಿ ಅಂತ್ಯಕ್ಕೆ)
1	ಕೊಪ್ಪಳ	535.180	124.200	86.480
2	ಗಂಗಾವತಿ	532.330	7421.585	91.010
3	ಕುಷ್ಟಗಿ	3991.45	131.575	65.040
ಒಟ್ಟು		5058.960	7677.360	242.530

2450

ಉ)	ಈ ದಾಳಿಯಲ್ಲಿ ನಿಯಮಾನುಸಾರ ಪ್ರಕರಣವನ್ನು ದಾಖಲಿಸಿದ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಕಳೆದ ಮೂರು ವರ್ಷಗಳ ವಿವರಗಳನ್ನು ನೀಡುವುದು)	ಕೊಪ್ಪಳ ಜಿಲ್ಲೆಯ ವಲಯಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಿಸಿದ ಪ್ರಕರಣಗಳ ವಿವರ ಕೆಳಕಂಡಂತೆ.

ಕ್ರ ಸಂ	ವಲಯ	**ಕರ್ನಾಟಕ ಅಬಕಾರಿ ಕಾಯ್ದೆ 1965 ರನ್ವಯ ದಾಖಲಿಸಿದ ಪ್ರಕರಣಗಳ ಸಂಖ್ಯೆ**					
		2018-19		**2019-20**		**2020-21 (ಫೆಬ್ರವರಿ ಅಂತ್ಯಕ್ಕೆ)**	
		ಕಲಂ 32	ಕಲಂ 15ಎ	ಕಲಂ 32	ಕಲಂ 15ಎ	ಕಲಂ 32	ಕಲಂ 15ಎ
1	ಕೊಪ್ಪಳ	30	231	7	107	6	84
2	ಗಂಗಾವತಿ	23	156	17	69	11	89
3	ಕುಷ್ಟಗಿ	19	144	36	98	8	90
ಒಟ್ಟು		**72**	**531**	**60**	**274**	**25**	**263**

ಊ)	ದಾಖಲಾದ ಪ್ರಕರಣಗಳಿಂದ ಶಿಕ್ಷೆಗೊಳಗಾದ ಪ್ರಕರಣಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಕಳೆದ ಮೂರು ವರ್ಷಗಳ ವಿವರಗಳನ್ನು ನೀಡುವುದು)	ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 15(ಎ)ರಂತೆ ಕಳೆದ ಮೂರು ವರ್ಷಗಳಲ್ಲಿ ದಾಖಲಾದ 1068 ಪ್ರಕರಣಗಳ ಪೈಕಿ 1011 ಪ್ರಕರಣಗಳನ್ನು ಒಟ್ಟು ರೂ.**17,56,500/-** ದಂಡ ವಿಧಿಸಿ ಇತ್ಯರ್ಥಪಡಿಸಲಾಗಿರುತ್ತದೆ. ವಲಯವಾರು ದಂಡ ವಿಧಿಸಿ ಇತ್ಯರ್ಥಪಡಿಸಲಾದ ಪ್ರಕರಣಗಳ ವಿವರ ಕೆಳಕಂಡಂತಿದೆ.

ಕ್ರ ಸಂ	ವಲಯ	**ದಂಡ ವಿಧಿಸಿ ಇತ್ಯರ್ಥಪಡಿಸಲಾದ ಪ್ರಕರಣಗಳ ಸಂಖ್ಯೆ**		
		2018-19	**2019-20**	**2020-21 (ಫೆಬ್ರವರಿ ಅಂತ್ಯಕ್ಕೆ)**
1	ಕೊಪ್ಪಳ	231	107	59
2	ಗಂಗಾವತಿ	156	69	69
3	ಕುಷ್ಟಗಿ	144	98	78
	ಒಟ್ಟು	**531**	**274**	**206**

		ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿ ದಾಖಲಿಸಲಾದ ಜಾಮೀನಿಗೆ ಅರ್ಹವಲ್ಲದ ಒಟ್ಟು 157 ಪ್ರಕರಣಗಳ ಪೈಕಿ 146 ಪ್ರಕರಣಗಳ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ಆಇ 27 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2453

ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 16-03-2021

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕೋವಿಡ್-19 ರ ಹಿನ್ನೆಲೆಯಲ್ಲಿ ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ಸರ್ಕಾರ ಸಹಾಯಧನವಾಗಿ ರೂ.5000/-ಗಳ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಟಿಡಿ 121 ಟಿಡಿಒ 2020, ದಿನಾಂಕ: 16-05-2020 ಹಾಗೂ ಮಾರ್ಪಾಡು ಆದೇಶ ದಿನಾಂಕ: 29-05-2020ರಲ್ಲಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಮಾತ್ರ ಒಮ್ಮೆ ಪರಿಹಾರವಾಗಿ ರೂ.5,000/- ಗಳ ಪರಿಹಾರ ಧನವನ್ನು ಷರತ್ತುಗಳಿಗೊಳಪಟ್ಟು ನೀಡಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.
(ಆ)	ಬಂದಿದ್ದಲ್ಲಿ, ಈವರೆವಿಗೂ ಎಷ್ಟು ಫಲಾನುಭವಿಗಳಿಗೆ ಈ ಸಹಾಯಧನ ತಲುಪಿದೆ? (ಜಿಲ್ಲಾವಾರು ಅಂಕಿ-ಅಂಶಗಳನ್ನು ನೀಡುವುದು)	ಸೇವಾ ಸಿಂಧು ವೆಬ್ ಪೋರ್ಟಲ್‌ನಲ್ಲಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ಪರಿಹಾರ ಧನ ಕೋರಿ ಒಟ್ಟು 2,45,904 ಫಲಾನುಭವಿಗಳ ಅರ್ಜಿಗಳು ಸ್ವೀಕೃತವಾಗಿರುತ್ತದೆ. ಇಲ್ಲಿಯವರೆಗೆ 2,15,669 ಫಲಾನುಭವಿಗಳಿಗೆ ಪರಿಹಾರ ಧನವನ್ನು ವಿತರಿಸಲಾಗಿರುತ್ತದೆ. ಜಿಲ್ಲಾವಾರು ಅಂಕಿ-ಅಂಶಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಟಿಡಿ 52 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

2453

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2453 ಕ್ಕೆ "ಅನುಬಂಧ"

District	Total Applications Received	Total Applications Paid
BAGALKOT	1736	1522
BANGALORE RURAL	4910	4330
BELAGAVI	5563	4933
BELLARY	3162	2810
BENGALURU URBAN	98705	85041
BIDAR	1678	1420
BIJAPUR	3213	2789
CHAMARAJANAGAR	1807	1602
CHIKBALLAPUR	2891	2537
CHIKMAGALUR	3915	3533
CHITRADURGA	4987	4464
DAKSHINA KANNADA	17021	15387
DAVANGERE	5197	4542
DHARWAD	3536	3077
GADAG	1113	989
GULBARGA	5760	4893
HASSAN	7597	6575
HAVERI	1931	1706
KODAGU	3506	3214
KOLAR	3691	3201
KOPPAL	1285	1146
MANDYA	9199	7977
MYSORE	14631	13245
RAICHUR	1835	1617
RAMANAGARA	5427	4738
SHIMOGA	5047	4501
TUMKUR	12561	11195
UDUPI	7882	7205
UTTAR KANNADA	4935	4454
YADGIR	1183	1026
Total	**245904**	**215669**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2462
ಸದಸ್ಯರ ಹೆಸರು	:	ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)
ಉತ್ತರಿಸಬೇಕಾದ ದಿನಾಂಕ	:	16.03.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ರಾಜ್ಯದ ನಗರ ಪ್ರದೇಶಗಳಲ್ಲಿ ಹೈಟೆನ್ಷನ್ ಲೈನ್‌ಗಳು ಹಾದು ಹೋಗಿರುವ ಕೆಳಭಾಗದಲ್ಲಿ ಮತ್ತು ನಿಗಧಿತ ಅಂತರ ಕಾಯ್ದುಕೊಳ್ಳದೇ ಮನೆಗಳನ್ನು ನಿರ್ಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದ ನಗರ ಪ್ರದೇಶಗಳಲ್ಲಿ ಹೈಟೆನ್ಷನ್ ಲೈನ್ ಗಳು ಹಾದು ಹೋಗಿರುವ ಕೆಳಭಾಗದಲ್ಲಿ ಮತ್ತು ನಿಗದಿತ ಅಂತರ ಕಾಯ್ದುಕೊಳ್ಳದೇ ಮನೆಗಳನ್ನು ನಿರ್ಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಈ ಬಗ್ಗೆ ಕಳೆದ ಮೂರು ವರ್ಷಗಳಿಂದ ಎಷ್ಟು ಪ್ರಕರಣಗಳನ್ನು ಇಲಾಖೆಯು ಪತ್ತೆ ಮಾಡಿ ಕ್ರಮ ಕೈಗೊಂಡಿದೆ;	ಕಳೆದ ಮೂರು ವರ್ಷಗಳಿಂದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪತ್ತೆಯಾದ ಪ್ರಕರಣಗಳು ಹಾಗೂ ಕೈಗೊಳ್ಳಲಾದ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಇ)	ನಿಗದಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಮನೆಗಳನ್ನು ತೆರವುಗೊಳಿಸಲಾಗುವುದೇ ಇಲ್ಲವೇ ಕೇಬಲ್ ಅಳವಡಿಸುವ ಮುಖಾಂತರ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ನಿರ್ಧಾರವನ್ನು ಕೈಗೊಳ್ಳಲಿದೆ? (ವಿವರಗಳನ್ನು ನೀಡುವುದು)	

ಸಂಖ್ಯೆ: ಎನರ್ಜಿ 91 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಪ್ರಶ್ನೆ ಸಂಖ್ಯೆ 2462ಕ್ಕೆ ಅನುಬಂಧ

2462

ಕಳೆದ ಮೂರು ವರ್ಷಗಳಿಂದ ಕ.ವಿ.ಪ್ರನಿ.ನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ದಾಖಲಾದ ಪ್ರಕರಣಗಳು ಹಾಗೂ ಕೈಗೊಳ್ಳಲಾದ ಕ್ರಮಗಳ ವಿವರಗಳು:

ವಿದ್ಯುತ್ ಸರಬರಾಜು ಕಂಪನಿಗಳು:

ವಿದ್ಯುತ್ ಸರಬರಾಜು ಕಂಪನಿ	ನಿಗದಿತ ಅಂತರ ಕಾಯ್ದುಕೊಳ್ಳದೇ ನಿರ್ಮಿಸಲಾಗಿರುವ ಮನೆಗಳು/ಕಟ್ಟಡಗಳ ಸಂಖ್ಯೆ	ಕೈಗೊಳ್ಳಲಾದ ಕ್ರಮದ ವಿವರಗಳು
ಬೆಸ್ಕಾಂ	4558	ಬೆವಿಕಂಪನಿ ವತಿಯಿಂದ ಕೆ.ಪಿ.ಟಿ.ಸಿ.ಎಲ್ ಮತ್ತು ಬಿ.ಬಿ.ಎಂ.ಪಿ ಅಧಿಕಾರಿಗಳ ಜೊತೆ ಜಂಟಿಯಾಗಿ ಸ್ಥಳ ಪರಿಶೀಲಿಸಿ ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು/ಕಾಯ್ದೆಯನ್ನು ಉಲ್ಲಂಘಿಸಿ ನಿರ್ಮಿಸಿರುವ/ನಿರ್ಮಾಣ ಹಂತದಲ್ಲಿರುವ ಮಾಲೀಕರಿಗೆ ನೋಟಿಸ್ ನೀಡಿ, ಸ್ಥಾವರಗಳ ವಿವರಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ (ಬಿ.ಬಿ.ಎಂ.ಪಿ ಗೆ) ನೀಡಲಾಗಿರುತ್ತದೆ. ಸುರಕ್ಷತಾ ಅಂತರವಿಲ್ಲದೇ, ಸುರಕ್ಷತೆ ಹೊಂದಿಲ್ಲದ ಕಟ್ಟಡಗಳನ್ನು ತೆರವುಗೊಳಿಸಲು ಗುರುತಿಸಲಾಗಿರುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಬಿ.ಬಿ.ಎಂ.ಪಿಯ ಮಾನ್ಯ ಆಯುಕ್ತರವರ ಗಮನಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ. ಬೆ.ವಿ.ಕಂಪನಿ ವ್ಯಾಪ್ತಿಯಲ್ಲಿ ಮೇಲ್ಮಾರ್ಗಗಳನ್ನು ಭೂಗತ ಕೇಬಲ್ ಗಳನ್ನಾಗಿ ಮಾರ್ಪಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
ಸೆಸ್ಕ್	–	ಚಾವಿಸನಿನಿಯ ನಗರ ಪ್ರದೇಶಗಳಲ್ಲಿ ಹೈ ಟೆನ್ಷನ್ ಲೈನ್ ಗಳು ಹಾದು ಹೋಗಿರುವ ಕೆಳ ಭಾಗದಲ್ಲಿ ಮತ್ತು ನಿಗಧಿತ ಅಂತರ ಕಾಯ್ದುಕೊಳ್ಳದೇ ಮನೆಗಳನ್ನು ನಿರ್ಮಿಸಿಕೊಂಡಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ
ಮೆಸ್ಕಾಂ	5	ವಿದ್ಯುತ್ ಸಂಪರ್ಕ ಕೋರಿ ಅರ್ಜಿ ನೋಂದಣಿ ಮಾಡಿದ ಮೇರೆಗೆ ಶಾಖಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡಲಾಗಿ ಉದ್ದೇಶಿತ ಸ್ಥಾವರಗಳು ಇ.ಹೆಚ್.ಟಿ ಮಾರ್ಗದಿಂದ ನಿಗಧಿತ ಅಂತರ ಕಾಯ್ದುಕೊಳ್ಳದೆ ಇರುವುದು ಕಂಡುಬಂದ ಕಾರಣ ವಿದ್ಯುತ್ ಸಂಪರ್ಕ ಕಲ್ಪಿಸಲು ನಿರಾಕರಿಸಿ ಕಟ್ಟಡವನ್ನು ತೆರವುಗೊಳಿಸಲು ಸೂಚಿಸಲಾಗಿರುತ್ತದೆ.
ಹೆಸ್ಕಾಂ	804	**ಹೆಸ್ಕಾಂ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಒಟ್ಟು** 804 **ಸಂಖ್ಯೆ ಪ್ರಕರಣಗಳು (ಮನೆಗಳ) ಪತ್ತೆಯಾಗಿದ್ದು**. 343 **ಸಂಖ್ಯೆ ಪ್ರಕರಣಗಳಲ್ಲಿ ಮನೆಗಳ ಮೇಲೆ ಹಾದು ಹೋಗಿರುವ ವಿದ್ಯುತ್** ಮಾರ್ಗಗಳನ್ನು ಸ್ಥಳಾಂತರಿಸುವ ಕಾಮಗಾರಿಗಳು **ಪೂರ್ಣಗೊಂಡಿವೆ.** 461 **ಸಂಖ್ಯೆ ಪ್ರಕರಣಗಳು (ಮನೆಗಳ) ಬಾಕಿಯಿರುತ್ತವೆ.** ಇವುಗಳ ಪೈಕಿ 300 ಪ್ರಕರಣಗಳು (ಮನೆಗಳ) ಪಿ.ಎಮ್.ಆರ್.ಎ ಯೋಜನೆಯಡಿಯಲ್ಲಿ ಮಾರ್ಗಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗುತ್ತಿದೆ ಮತ್ತು 161 ಸಂಖ್ಯೆಯ ಪ್ರಕರಣಕ್ಕೆ (ಮನೆಗಳ) ಈಗಾಗಲೇ ಸಂಬಂಧಿಸಿದ ಮನೆ ಮಾಲೀಕರಿಗೆ ದಾಂಡೇಲಿ ಉಪ–ವಿಭಾಗದಿಂದ ಸ್ವಯಂ ಕಾರ್ಯನಿರ್ವಹಣ ಯೋಜನೆಯಡಿಯಲ್ಲಿ ಈ ಮೊದಲೆ ಹಾದುಹೋದ 11 ಕೆ.ವಿ. ಹೆಚ್.ಟಿ ಮಾರ್ಗಗವನ್ನು ನಿಗದಿತ ಅಂತರ ಕಾಯ್ದುಕೊಳ್ಳುವಂತೆ ನೋಟಿಸ್ ಕಳುಹಿಸಲಾಗಿರುತ್ತದೆ.

ಜೆಸ್ಕಾಂ	1196	• ಮುಂಚೆಯೇ ಹೈಟೆನ್ಷನ್ ಲೈನ್‌ಗಳು ಹಾದು ಹೋಗಿದ್ದು ಅವುಗಳ ಕೆಳಭಾಗದಲ್ಲಿ ಮತ್ತು ನಿಗದಿತ ಅಂತರ ಕಾಯ್ದುಕೊಳ್ಳದೇ ಮನೆಗಳನ್ನು ನಿರ್ಮಿಸಿಕೊಂಡಿರುವವರಿಗೆ ನೋಟಿಸ್ ನೀಡಲಾಗಿದೆ. ಮತ್ತು ನಿಗಧಿತ ಅಂತರ ಕಾಯ್ದುಕೊಳ್ಳಲು ಸೂಚಿಸಲಾಗಿದೆ. • ಆದಾಗ್ಯೂ ಗು.ವಿ.ಸ. ಕಂಪನಿಯು ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಲೈನ್ ಗಳನ್ನು ಸ್ಥಳಾಂತರಿಸಲು ಬೇರೆ ಮಾರ್ಗ ದೊರೆತ ಪ್ರಕರಣಗಳಲ್ಲಿ ಲೈನ್ ಗಳನ್ನು ಸ್ಥಳಾಂತರಿಸಲಾಗಿದೆ. ಸ್ಥಳಾಂತರಿಸಲು ಅವಕಾಶವಿರದ ಪ್ರಕರಣಗಳಲ್ಲಿ ಎಚ್‌ಟಿ ಏರಿಯಲ್ ಬಂಚ್ಡ ಕೇಬಲ್ (HT ABC) ಅಳವಡಿಸಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ:

ಪ್ರಸರಣ ವಲಯ	ನಿಗದಿತ ಅಂತರ ಕಾಯ್ದುಕೊಳ್ಳದೇ ನಿರ್ಮಿಸಲಾಗಿರುವ ಮನೆಗಳು/ಕಟ್ಟಡಗಳ ಸಂಖ್ಯೆ	ಕೈಗೊಳ್ಳಲಾದ ಕ್ರಮದ ವಿವರಗಳು
ಬೆಂಗಳೂರು	7619	• ಕವಿಪ್ರನಿನಿ ವತಿಯಿಂದ ಅಸುರಕ್ಷಿತ ವಲಯದಲ್ಲಿರುವ ಕಟ್ಟಡಗಳನ್ನು/ಭಾಗಗಳನ್ನು ತೆರವುಗೊಳಿಸಲು ಸುರಕ್ಷತಾ ಅಂತರಗಳನ್ನು ಕಾಪಾಡಲು ನೋಟಿಸ್‌ಗಳನ್ನು ಕಟ್ಟಡದ ನಿರ್ಮಾಣ ಹಂತದಲ್ಲಿ ಹಾಗೂ ಕಾಲಕಾಲಕ್ಕೆ ಕಟ್ಟಡದ ಮಾಲೀಕರಿಗೆ ನೋಟಿಸ್ ನೀಡಲಾಗುತ್ತಿದೆ ಮತ್ತು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಬಿಬಿಎಂಪಿ, ಬೆಸ್ಕಾಂ ಮತ್ತು ಇತರೆ ಇಲಾಖೆಗಳಿಗೂ ಸಹ ಪತ್ರಗಳನ್ನು ಬರೆಯಲಾಗಿರುತ್ತದೆ. • ಸುರಕ್ಷತಾ ಅಂತರವನ್ನು ಕಾಪಡದೇ ನಿರ್ಮಾಣ ಮಾಡುತ್ತಿರುವ ಕಟ್ಟಡಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ಪೋಲೀಸ್ ದೂರನ್ನು ಸಹ ನೀಡಲಾಗುತ್ತಿದೆ. ಅಸುರಕ್ಷಿತ ಕಟ್ಟಡಗಳನ್ನು/ಭಾಗಗಳನ್ನು ತೆರವುಗೊಳಿಸಿ ಸುರಕ್ಷತಾ ಅಂತರಗಳನ್ನು ಕಾಪಾಡಲು ಮತ್ತು ಸುರಕ್ಷತಾ ಅಂತರವನ್ನು ಕಾಪಡದೇ ಕಟ್ಟಡಗಳನ್ನು ನಿರ್ಮಾಣ ಮಾಡದಂತೆ ಸಾರ್ವಜನಿಕ ಪ್ರಕಟಣೆಯನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ.
ಮೈಸೂರು	978	• ಸದರಿ ನಾಗರೀಕರಿಗೆ ನಿಗಮದ ವತಿಯಿಂದ ಸೂಚನಾ ಪತ್ರವನ್ನು ನೀಡಲಾಗಿರುತ್ತದ • ವಿವಿಧ ಹೈಟೆನ್ಷನ್ ಲೈನ್‌ಗಳು ಹಾದು ಹೋಗಿರುವ ಕೆಳಭಾಗದಲ್ಲಿ ಮತ್ತು ಮಾರ್ಗದ ಕಾರಿಡಾರ್‌ನಲ್ಲಿ ನಿಗಧಿತ ಅಂತರ ಕಾಯ್ದುಕೊಳ್ಳದೇ ಮನೆಗಳನ್ನು ನಿರ್ಮಿಸಿರುವ ಸಂಬಂಧ, ಸಂಬಂಧಿತ ಇಲಾಖೆಯ ಅಧಿಕಾರಿಗೊಳೊಂದಿಗೆ ಸಮನ್ವಯ ಸಭೆಯನ್ನು ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಲಾಗಿದೆ. , ನಿಗದಿತ ಪ್ರದೇಶಗಳಲ್ಲಿ ಸುರಕ್ಷಿತ ಅಭಿಯಾನವನ್ನು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳಿಂದ ನಡೆಸಲಾಗಿರುತ್ತದೆ.
ಹಾಸನ	387	• ನಿಗದಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಮನೆಗಳಿಗೆ ಈಗಾಗಲೇ ತಿಳುವಳಿಕೆ/ ಎಚ್ಚರಿಕೆ ಪತ್ರ ಜಾರಿಗೊಳಿಸಲಾಗಿದ್ದು ವಿದ್ಯುಚ್ಛಕ್ತಿ ಅಧಿನಿಯಮದಂತೆ ಸುರಕ್ಷತಾ ಅಂತರ ಕಾಯ್ದುಕೊಳ್ಳಲು ಎಚ್ಚರಿಕೆ ನೀಡಲಾಗಿದೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಸೂಚನೆಯನ್ನು ನೀಡಲಾಗಿದೆ • ಈಗಾಗಲೇ ನಿರ್ಮಾಣಗೊಂಡು ಚಾಲನೆಯಲ್ಲಿರುವ ವಿದ್ಯುತ್ ಲೈನಿನ ಕೆಳಗೆ ಮನೆ ನಿರ್ಮಿಸದಂತೆ/ಲೈಸನ್ಸ್ ನೀಡದಂತೆ ನಗರಪಾಲಿಕೆಗಳಿಗೆ ಸೂಚನೆ ನೀಡಲಾಗಿದೆ
ತುಮಕೂರು	168	ಮನೆ ನಿರ್ಮಾಣ ಮಾಡಿ ಕೊಂಡಿರುವವರಿಗೆ ಸುರಕ್ಷತೆ ಅಂತರ ಕಾಯ್ದುಕೊಳ್ಳುವಂತೆ ನೋಟಿಸ್ ನೀಡಲಾಗಿದೆ ಹಾಗೂ ಸಾರ್ವಜನಿಕರಲ್ಲಿ ವಿದ್ಯುತ್ ಸುರಕ್ಷಿತ ಕುರಿತು ಜಾಗೃತಿ ಮೂಡಿಸಲಾಗಿದೆ.ನಿಗದಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಮನೆಗಳನ್ನು ತೆರವುಗೊಳಿಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ತಿಳಿಸಲಾಗಿದೆ.

2462

ಬಾಗಲಕೋಟೆ	201	• ಬಾಗಲಕೋಟ ವಲಯ ವ್ಯಾಪ್ತಿಯಲ್ಲಿ ಒಟ್ಟಾರೆ 201 ಪ್ರಕರಣ ಗಳನ್ನು ಪತ್ತೆ ಮಾಡಿ ಸೂಚನಾಪತ್ರವನ್ನು ಹೊರಡಿಸಲಾಗಿದೆ. • 110 ಕೆ.ವಿ ಬಾಗಲಕೋಟ ಮಾರ್ಗದ ಕೆಳಗಿನ 21 ಪ್ರಕರಣಗಳಲ್ಲಿ ಬಿ ಟಿ ಡಿ ಎ, ಬಾಗಲಕೋಟ ಇವರು ಸ್ವಯಂ ಕಾರ್ಯಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪತ್ರಿಕೆ ಮಂಜೂರಾಗಿದ್ದು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು. • 110 ಕೆ.ವಿ. ಬಿದ್ನಾಳ– ಎಸ್ ಆರ್ ಎಸ್ ಹುಬ್ಬಳ್ಳಿ 1 & 2 , 110 ಕೆ.ವಿ. ಹುಬ್ಬಳ್ಳಿ–ಆನಂದ ನಗರ– ಮಾರ್ಗಗಳಿಗೆ ಭೂಗತ ಕೇಬಲ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.
ಗುಲ್ಬರ್ಗ	213	• ಮಾರ್ಗ ಬದಲಾವಣೆ ಮಾಡಲು ಅವಕಾಶವಿರುವ ಸ್ಥಳಗಳ ಮಾರ್ಗ ಬದಲಾವಣೆ ಪ್ರಸ್ತಾವನೆ ತಯಾರಿಸಲಾಗುತ್ತಿದೆ. • ನಿಗದಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಮನೆಗಳನ್ನು ತೆರವುಗೊಳಿಸಲು ಸಂಭಂದ ಪಟ್ಟ ಪ್ರಾಧಿಕಾರಕ್ಕೆ ತಿಳಿಸಲಾಗಿದೆ

2472

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2472
ಮಾನ್ಯ ಸದಸ್ಯರ ಹೆಸರು	ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್ (ದೇವನಹಳ್ಳಿ)
ಉತ್ತರಿಸಬೇಕಾದ ದಿನಾಂಕ	16-03-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
1.	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಅಬಕಾರಿ ಇಲಾಖೆಯ ಒಟ್ಟು ಎಂ.ಆರ್.ಪಿ ಮಳಿಗೆಗಳು ಎಷ್ಟು? (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಒಟ್ಟು ಎಂ.ಆರ್.ಪಿ ಮಳಿಗೆಗಳ ವಿವರಗಳು ಕೆಳಕಂಡಂತಿವೆ.

ವಿಧಾನಸಭಾ ಕ್ಷೇತ್ರ	ತಾಲ್ಲೂಕುವಾರು ಮಂಜೂರು ಮಾಡಲಾದ ಸನ್ನದುಗಳ ವಿವರ	ವಿಧಾನಸಭಾ ಕ್ಷೇತ್ರವಾರು ಮಂಜೂರು ಮಾಡಲಾದ ಸನ್ನದುಗಳ ವಿವರ	ಒಟ್ಟು
ದೊಡ್ಡಬಳ್ಳಾಪುರ	02	04	06
ನೆಲಮಂಗಲ	02	01	03
ದೇವನಹಳ್ಳಿ	02	02	04
ಹೊಸಕೋಟೆ	02	03	05
ಒಟ್ಟು	**08**	**10**	**18**

ಕ್ರ ಸಂ	ಪ್ರಶ್ನೆ	ಉತ್ತರ
2.	ಈ ಮಳಿಗೆಗಳನ್ನು ನೀಡಲು ಇರುವ ಪ್ರಮುಖವಾದ ನಿಯಮಗಳು ಹಾಗೂ ಷರತ್ತುಗಳೇನು; (ಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳು ಕೆಳಕಂಡಂತಿವೆ: i. ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು. ii. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ರಂತೆ
3.	ಎಂ.ಆರ್.ಪಿ ಮಳಿಗೆಗಳನ್ನು ಪಡೆಯಲು ಯಾವ ಮಾರ್ಗಸೂಚಿಗಳನ್ನು ಅನುಸರಿಸಬೇಕು; ಮತ್ತು ಸಲ್ಲಿಸಬೇಕಾದ ದಾಖಲೆಗಳೇನು; (ಮಾಹಿತಿ ನೀಡುವುದು)	

		352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. iii. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ. • ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು. • ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು. • ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು. • ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು. iv. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್‌ಎಲ್ 2020 ದಿ:08.09.2020 ರಲ್ಲಿ ಈಗಾಗಲೇ ಮಂಜೂರು ಮಾಡಿರುವ ಒಟ್ಟು 900 ಸನ್ನದುಗಳ ಪೈಕಿ ಬಾಕಿ ಉಳಿದಿರುವ 441 ಸನ್ನದುಗಳನ್ನು ಕೆಳಕಂಡ ಷರತ್ತುಗಳ ಮೇಲೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. • ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು

2472

		ಗುರುತಿಸುವುದು. • ಸಿಎಲ್-11(ಸಿ) ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31.12.2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು. • ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳತಕ್ಕದ್ದು.
4.	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೊಸದಾಗಿ ಎಂ.ಆರ್.ಪಿ ಮಳಿಗೆ ಪಡೆಯಲು ಒಟ್ಟು ಎಷ್ಟು ಪ್ರಸ್ತಾವನೆಗಳು ಬಂದಿವೆ; ಯಾವಾಗ ಅನುಮತಿ ನೀಡಲಾಗುವುದು; ಏನಾದರೂ ತೊಡಕುಗಳಿವೆಯೇ? (ವಿಧಾನಸಭಾ ಕ್ಷೇತ್ರವಾರು ಪೂರ್ಣ ಮಾಹಿತಿಯನ್ನು ನೀಡುವುದು)	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೊಸದಾಗಿ ಎಂ.ಆರ್.ಪಿ ಮಳಿಗೆ ಪಡೆಯಲು ಒಟ್ಟು 22 ಅರ್ಜಿಗಳು ಸ್ವೀಕೃತಗೊಂಡಿದ್ದು, ಅವುಗಳ ಪೈಕಿ 10 ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆಇ 30 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎಂ.ಎಸ್.ಐ.ಎಲ್ ಸನ್ನದು ಮಂಜ

ಕ್ರಸಂ	ವಿಧಾನಸಭಾ ಕ್ಷೇತ್ರ	ಸ್ವೀಕೃತವಾದ ಅರ್ಜಿಗಳ ಸಂಖ್ಯೆ	ಮಂಜೂರಾದ ಸನ್ನದುಗಳ ಸಂಖ್ಯೆ
01	ದೊಡ್ಡಬಳ್ಳಾಪುರ	07	04
02	ನೆಲಮಂಗಲ	04	01
03	ದೇವನಹಳ್ಳಿ	06	02
04	ಹೊಸಕೋಟೆ	05	03
ಒಟ್ಟು		22	10

ಆಇ 30 ಇಎಲ್‌ಕ್ಯೂ 2021

		ಲೈನ್ ಗಳ ಅಳವಡಿಕೆ, ಬೆಳೆಮಾರ್ಪಾಡು, ಮಳೆಯಾಶ್ರಿತ ತೋಟಗಾರಿಕೆ ಉತ್ತೇಜಿಸುವುದು, ನೀರಾವರಿಪಂಪ್ ಸೆಟ್ ಗಳಿಗೆ ವಿದ್ಯುತ್ ಪೂರೈಕೆಯ ಫೀಡರ್ ಲೈನ್‌ಗಳ ಬೇರ್ಪಡಿಸುವಿಕೆ ನೀರಿನಪೂರೈಕೆಗೆ/ ಮರುಪೂರಣಕ್ಕಾಗಿ ತೆಗೆದುಕೊಳ್ಳ ಬಹುದಾದ ಕ್ರಮಗಳು ಕೃತಕ ನೀರು ಮರುಪೂರಣ ಹಾಗೂ ನೀರಿನ ಸಂರಕ್ಷಣಾ ರಚನೆಗಳು. ಚೆಕ್ ಡ್ಯಾಂ ಇಂಗುಕೆರೆ, ಕಾಂಟೂರ್ ಬದುಗಳು/

		ಕಂದಕಗಳು, ನಾಲೆಗಳ ಅಭಿವೃದ್ಧಿ ಇಂಗುಗುಂಡಿಗಳು/ ಮರುಪೂರಣಶಾಫ್ಟ್ ಗಳು / ಬಾವಿಗಳು ವೆಂಟೆಡ್ ಅಣೆಗಳು / ಬಂದಾರಗಳು, ಭೂಗತ ತಡೆಗೋಡೆ ಕೃಷಿ ಹೊಂಡಗಳು, ಗಲ್ಲಿಪ್ಲಗ್‌ಗಳು / ನಾಲಾಬದುಗಳು / ಗ್ಯಾಬೀಯನ್ ಗಳು ಮತ್ತು ಇತರೆ ಸ್ಥಳೀಯ ನೀರಿನ ಮರುಪೂರಣ / ನೀರಿನಸಂರಕ್ಷಣಾ / ಮಳೆಕೊಯ್ಲು ಪದ್ಧತಿಗಳು ಇತರೆ ಸ್ಥಳೀಯ ನೀರಿನ ಸಮರ್ಪಕ ಬಳಕೆ/ ನೀರಿನ ಉಳಿತಾಯ ಪದ್ಧತಿಗಳು ಮತ್ತು ಅಭ್ಯಾಸಗಳು.
ಈ	ಹಾಗಿದ್ದಲ್ಲಿ ಈ ಯೋಜನೆಗೆ ಮೀಸಲಿಟ್ಟ ಒಟ್ಟು ಅನುದಾನವೆಷ್ಟು; ಪ್ರತಿ ತಾಲ್ಲೂಕಿಗೆ ಅಂತರ್ಜಲ ಅಭಿವೃದ್ಧಿಗಾಗಿ ಹಂಚಿಕೆಯಾಗಿರುವ ಅನುದಾನವೆಷ್ಟು? (ಪ್ರತಿ ತಾಲ್ಲೂಕುವಾರು ಮಾಹಿತಿ ನೀಡುವುದು).	ಈ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಎರಡು ವಿಧಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. 1. ಸಾಂಸ್ಥಿಕ ಹಾಗೂ ಸಾಮರ್ಥ್ಯ ಬಲವರ್ಧನೆ ಘಟಕ -194.51 ಕೋಟಿ 2. ಪ್ರೋತ್ಸಾಹ ಧನ ಘಟಕ -1201.52 ಕೋಟಿ ಈ ಯೊಜನೆಯಡಿಯಲ್ಲಿ ಗ್ರಾಮಪಂಚಾಯತಿವಾರು ಜಲಭದ್ರತಾ ಯೋಜನೆಗಳಲ್ಲಿ ರೂಪಿಸಿದ ಬೇಡಿಕೆ ಹಾಗೂ ಅಂತರ್ಜಲ ಮರು ಪೂರೈಕೆಯ ಕಾಮಗಾರಿಗಳನುಸಾರವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ತಾಲ್ಲೂಕುವಾರು ಅನುದಾನ ನಿಗಧಿಪಡಿಸಿರುವುದಿಲ್ಲ.

ಸಂಖ್ಯೆ: ಎಂ ಐ ಡಿ 130 ಎಲ್ ಎ ಕ್ಯೂ 2021

(ಜೆ.ಸಿ ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು

2473

ಅನುಬಂಧ-1		
ಕೇಂದ್ರ ಸರ್ಕಾರದ ಅಟಲ್ ಭೂಜಲ ಯೋಜನ ಅಡಿ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳು.		
ಕ್ರ.ಸಂ.	ಜಿಲ್ಲಾ ಕಛೇರಿ	ತಾಲ್ಲೂಕುಗಳು
1	ಕೋಲಾರ	ಶ್ರೀನಿವಾಸಪುರ, ಕೋಲಾರ, ಮಾಲೂರ, ಮುಳಬಾಗಲು ಮತ್ತು ಬಂಗಾರಪೇಟೆ
2	ಚಿಕ್ಕಬಳ್ಳಾಪುರ	ಚಿಂತಾಮಣಿ,ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಗುಡಿಬಂಡ ಮತ್ತು ಬಾಗೇಪಲ್ಲಿ
3	ತುಮಕೂರು	ಚಿಕ್ಕನಾಯಕನಹಳ್ಳಿ, ಮಧುಗಿರಿ, ಕೊರಟಗೆರೆ, ತಿಪಟೂರ, ಶಿರಾ ಮತ್ತು ತುಮಕೂರು
4	ಬೆಂಗಳೂರು (ಗ್ರಾಮಾಂತರ)	ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ
5	ರಾಮನಗರಮ್	ಕನಕಪುರ ಮತ್ತು ರಾಮನಗರ
6	ಚಿಕ್ಕಮಂಗಳೂರು	ಕಡೂರು
7	ಚಿತ್ರದುರ್ಗ	ಚಳ್ಳಕೆರೆ, ಹೊಳಲ್ಕೆರೆ, ಹಿರಿಯೂರ, ಹೊಸದುರ್ಗ ಮತ್ತು ಚಿತ್ರದುರ್ಗ
8	ದಾವಣಗೆರೆ	ಜಗಳೂರು ಮತ್ತು ಚೆನ್ನಗಿರಿ
9	ಬಳ್ಳಾರಿ	ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ
10	ಬಾಗಲಕೋಟೆ	ಬಾದಾಮಿ ಮತ್ತು ಬಾಗಲಕೋಟೆ
11	ಗದಗ	ಗದಗ ಮತ್ತು ರೋಣ
12	ಬೆಳಗಾವಿ	ರಾಮದುರ್ಗ ಮತ್ತು ಅಥಣಿ
13	ಚಾಮರಾಜನಗರ	ಗುಂಡ್ಲುಪೇಟೆ
14	ಹಾಸನ	ಅರಸೀಕೆರೆ

ಕರ್ನಾಟಕ ವಿಧಾನ ಸಭೆ

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2495
02. ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
03. ಉತ್ತರಿಸುವ ದಿನಾಂಕ : 16.03.2021
04. ಉತ್ತರಿಸುವ ಸಚಿವರು : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ನಾಗಠಾಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿಜಯಪುರ ತಾಲ್ಲೂಕು ಹಾಗೂ ಚಡಚಣ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳಲ್ಲಿ ಮಂಜೂರಾದ ಹುದ್ದೆಗಳು ಎಷ್ಟು; ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು ಎಷ್ಟು; (ವಿವರವಾದ ಮಾಹಿತಿ ನೀಡುವುದು)	ವಿವರಗಳನ್ನು **ಅನುಬಂಧ–ಅ** ರಲ್ಲಿ ನೀಡಿದೆ.
ಆ)	ಈ ಪೈಕಿ ಖಾಲಿ ಇರುವ ಹುದ್ದೆಗಳು ಎಷ್ಟು; ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;	
ಇ)	ಇತ್ತೀಚೆಗೆ ಕ್ಷೇತ್ರ ವ್ಯಾಪ್ತಿಯ ಮಹಾರಾಷ್ಟ್ರ–ಕರ್ನಾಟಕ ಗಡಿಭಾಗ ಹಳ್ಳಿಗಳಲ್ಲಿ ಮನೆಗಳ್ಳತನ, ದರೋಡೆ, ಕೊಲೆ ಪ್ರಕರಣ, ಅಕ್ರಮ ಮರಳು ಗಣಿಗಾರಿಕೆ ಸೇರಿದಂತೆ ಇನ್ನು ಹೆಚ್ಚಿನ ಅಕ್ರಮ ಚಟುವಟಿಕೆಗಳು ಹೆಚ್ಚಾಗಿದ್ದು ಜನರು ಭಯಭೀತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2019 ರಿಂದ 2020ನೇ ಸಾಲಿನಲ್ಲಿ ಇಂತಹ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುತ್ತದೆ.
ಈ)	ಬಂದಿದ್ದಲ್ಲಿ, ಈ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು)	ನಾಗಠಾಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೊಳಪಡುವ ಝಳಕಿ, ಚಡಚಣ ಮತ್ತು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಗಳ ಸರಹದ್ದಿನಲ್ಲಿ ಕೊಲೆ, ದರೋಡೆ, ಮನೆಗಳ್ಳತನ ಹಾಗೂ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ರಾತ್ರಿ ಗಸ್ತು ಚುರುಕುಗೊಳಿಸಿ. ಕರ್ತವ್ಯಕ್ಕೆ ಹೆಚ್ಚಿನ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಿ ಅಪರಾಧ ಪ್ರಕರಣಗಳು ನಡೆಯದಂತೆ ನೋಡಿಕೊಳ್ಳಲಾಗುತ್ತಿದೆ. ಪೊಲೀಸ್ ಬಾತ್ಮೀದಾರರ ಮೂಲಕ ಮಾಹಿತಿ ಪಡೆದು ಅಕ್ರಮ ಮರಳುಗಾರಿಕೆಯ ಸಾಗಾಣೆಯನ್ನು ನಿಯಂತ್ರಿಸಲಾಗುತ್ತಿದೆ. ಈ ಕುರಿತು ದಾಖಲಾದ ಪ್ರಕರಣಗಳಲ್ಲಿ ಕಾನೂನು ರೀತ್ಯಾ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಕರಣ ವಿವರಗಳ ಮಾಹಿತಿಯನ್ನು **ಅನುಬಂಧ–ಆ** ರಲ್ಲಿ ನೀಡಲಾಗಿದೆ.

ಒಇ/20/ಪಿಪಿಎಸ್/2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

2495

ಅನುಬಂಧ–ಅ

ಕ್ರ ಸ	ಠಾಣೆಯ ಹೆಸರು	ಹುದ್ದೆ	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ	ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಕೊಂಡ ಕ್ರಮದ ವಿವರ (ಚಾಲ್ತಿ ನೇಮಕಾತಿ ಪ್ರಕ್ರಿಯೆ ಒಳಗೊಂಡಂತೆ)
1)	ಚಡಚಣ ಪೊಲೀಸ್ ಠಾಣೆ	ಪಿಎಸ್ಐ	02	01	01	➢ ಚಡಚಣ ಮತ್ತು ಝಳಕಿ ಪೊಲೀಸ್ ಠಾಣೆಗಳಿಗೆ ಹೆಚ್ಚುವರಿ ಪಿಎಸ್ಐ ಹುದ್ದೆಗಳನ್ನು ಸೃಜಿಸಲಾಗಿದ್ದು, ಅಧಿಸೂಚನೆ ಸಂಖ್ಯೆ:90/ನೇಮಕಾತಿ–2/2020–21, ದಿನಾಂಕ:14.05.2020 ರಲ್ಲಿ ಉತ್ತರ ವಲಯ, ಬೆಳಗಾವಿಗೆ 74 ಪಿ.ಎಸ್.ಐ (ಸಿವಿಲ್) ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ, ನೇಮಕಾತಿ ಪೂರ್ಣಗೊಂಡ ನಂತರ ಈ ಠಾಣೆಗಳಿಗೆ ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುವುದು. ➢ ಸಿಪಿಸಿ/ಸಿಎಚ್‌ಸಿ ರಿಕ್ತ ಸ್ಥಾನಗಳಿಗೆ ಬೇರೆ ಜಿಲ್ಲೆಯಿಂದ ವರ್ಗಾವಣೆ ಬರುವ ಸಿಪಿಸಿ/ಸಿಎಚ್‌ಸಿ ರವರಿಗೆ ಈಗಾಗಲೇ ನಿರಾಕ್ಷೇಪಣಾ ಪತ್ರಗಳನ್ನು ನೀಡಲಾಗಿದೆ.
		ಎಎಸ್ಐ	04	04	00	
		ಸಿಎಚ್‌ಸಿ	12	11	01	
		ಸಿಪಿಸಿ	30	30	00	
	ಒಟ್ಟು		**48**	**46**	**2**	
2)	ವಿಜಯಪುರ ಗ್ರಾ ಪೊಲೀಸ್ ಠಾಣೆ	ಪಿಎಸ್ಐ	02	02	00	
		ಎಎಸ್ಐ	05	05	00	
		ಸಿಎಚ್‌ಸಿ	14	14	00	
		ಸಿಪಿಸಿ	27	26	01	
	ಒಟ್ಟು		**48**	**47**	**1**	
3)	ಝಳಕಿ ಪೊಲೀಸ್ ಠಾಣೆ	ಪಿಎಸ್ಐ	02	01	01	
		ಎಎಸ್ಐ	04	04	00	
		ಸಿಎಚ್‌ಸಿ	13	13	00	
		ಸಿಪಿಸಿ	25	25	00	
	ಒಟ್ಟು		**44**	**43**	**1**	
4)	ಎಪಿಎಮ್‌ಸಿ ಪೊಲೀಸ್ ಠಾಣೆ	ಪಿಎಸ್ಐ	02	02	00	
		ಎಎಸ್ಐ	04	04	00	
		ಸಿಎಚ್‌ಸಿ	12	12	00	
		ಸಿಪಿಸಿ	32	29	03	
	ಒಟ್ಟು		**50**	**47**	**3**	
5)	ಆದರ್ಶನಗರ ಪೊಲೀಸ್ ಠಾಣೆ	ಪಿಎಸ್ಐ	02	02	00	
		ಎಎಸ್ಐ	04	04	00	
		ಸಿಎಚ್‌ಸಿ	14	14	00	
		ಸಿಪಿಸಿ	29	26	03	
	ಒಟ್ಟು		**49**	**46**	**3**	
6)	ಹೊರ್ತಿ ಪೊಲೀಸ್ ಠಾಣೆ	ಪಿಎಸ್ಐ	02	02	00	
		ಎಎಸ್ಐ	04	04	00	
		ಸಿಎಚ್‌ಸಿ	14	13	01	
		ಸಿಪಿಸಿ	27	25	02	
	ಒಟ್ಟು		**47**	**44**	**3**	
7)	ಗೋಲಗುಂಬಜ್ ಪೊಲೀಸ್ ಠಾಣೆ	ಪಿಎಸ್ಐ	02	02	00	
		ಎಎಸ್ಐ	06	06	00	
		ಸಿಎಚ್‌ಸಿ	14	14	00	
		ಸಿಪಿಸಿ	41	38	03	
	ಒಟ್ಟು		**63**	**60**	**3**	

2495

<u>ಅನುಬಂಧ–ಆ</u>

ಕ್ರ.ಸಂ.	ಅಪರಾಧ ಶೀರ್ಷಿಕೆ	ಪೊಲೀಸ್ ಠಾಣೆ	ದಾಖಲಾದ ಪ್ರಕರಣಗಳ ಸಂಖ್ಯೆ		
			2019	2020	2021
01	ಕೊಲೆ	ಝಳಕಿ ಠಾಣೆ	01	02	–
		ಚಡಚಣ	01	05	01
		ವಿಜಯಪುರ ಗ್ರಾಮೀಣ	05	09	0
02	ದರೋಡೆ	ಝಳಕಿ ಠಾಣೆ	–	–	–
		ಚಡಚಣ	–	–	–
		ವಿಜಯಪುರ ಗ್ರಾಮೀಣ	01	0	0
03	ಸುಲಿಗೆ	ಝಳಕಿ ಠಾಣೆ	–	01	–
		ಚಡಚಣ	01	–	–
		ವಿಜಯಪುರ ಗ್ರಾಮೀಣ	04	2	1
04	ಮನೆಗಳ್ಳತನ	ಝಳಕಿ ಠಾಣೆ	01	01	–
		ಚಡಚಣ	04	01	02
		ವಿಜಯಪುರ ಗ್ರಾಮೀಣ	04	6	4
05	ಅಕ್ರಮ ಮರಳು ಗಣಿಗಾರಿಕೆ	ಝಳಕಿ ಠಾಣೆ	19	–	–
		ವಿಜಯಪುರ ಗ್ರಾಮೀಣ	03	5	0
		ಚಡಚಣ	22	01	–
		ಒಟ್ಟು	66	33	08

2507

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2507
ಸದಸ್ಯರ ಹೆಸರು : ಶ್ರೀ ಲಿಂಗೇಶ .ಕೆ.ಎಸ್. (ಬೇಲೂರು)
ಉತ್ತರಿಸಬೇಕಾದ ದಿನಾಂಕ : 16.03.2021
ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಎಂ.ಎಸ್.ಐ.ಎಲ್. ವತಿಯಿಂದ ಸಗಟು ಮಾರಾಟ ಮಳಿಗೆ (ಎಂ.ಆರ್.ಪಿ) ಯನ್ನು ನಿರ್ಮಿಸಲು ಇರುವ ಮಾನದಂಡಗಳೇನು;	1) ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 07 ಇಎಫ್ಎಲ್ 2008, ದಿನಾಂಕ:03/07/2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2 ಸನ್ನದುಗಳು ಮತ್ತು ಜಿಲ್ಲಾ ಕೇಂದ್ರ ಸ್ಥಾನಕ್ಕೆ 2 ಒಟ್ಟು 463 ಸಿಎಲ್-11(ಸಿ) ಸನ್ನದುಗಳನ್ನು ಎಂ.ಎಸ್.ಐ.ಎಲ್. ಸಂಸ್ಥೆಗೆ ಮಂಜೂರು ಮಾಡಲಾಗಿರುತ್ತದೆ ಹಾಗು 2) ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 15 ಇಎಫ್ಎಲ್ 2015, ದಿನಾಂಕ: 23/09/2016 ರಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 4 ಸನ್ನದುಗಳಂತೆ ಒಟ್ಟು 900 ಸಿಎಲ್-11(ಸಿ) ಸನ್ನದುಗಳನ್ನು ಎಂ.ಎಸ್.ಐ.ಎಲ್. ಸಂಸ್ಥೆಗೆ ಹೆಚ್ಚುವರಿಯಾಗಿ ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ. ಮೇಲ್ಕಂಡ ಆದೇಶದನುಸಾರ ಸಿಎಲ್–11(ಸಿ) ಸನ್ನದುಗಳನ್ನು ಪ್ರಾರಂಭಿಸಲು ಎಂ.ಎಸ್.ಐ.ಎಲ್. ಸಂಸ್ಥೆಯ ವತಿಯಿಂದ ಕ್ರಮ ವಹಿಸಲಾಗಿರುತ್ತದೆ.
ಆ)	ಸಗಟು ಮಾರಾಟ ಮಳಿಗೆ (ಎಂ.ಆರ್.ಪಿ) ಯನ್ನು ನಿರ್ಮಿಸಲು ಅಬಕಾರಿ ಇಲಾಖೆಯು ನಿರ್ದಿಷ್ಟಪಡಿಸಿರುವ ಮಾನದಂಡಗಳೇನು? (ಸಂಪೂರ್ಣ ವಿವರ ನೀಡುವುದು)	ಎಂ.ಎಸ್.ಐ.ಎಲ್. ಮದ್ಯದ ಮಳಿಗೆಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳು ಕೆಳಕಂಡಂತಿರುತ್ತವೆ: ಎಂ.ಎಸ್.ಐ.ಎಲ್. ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ಎಫ್.ಡಿ/07/ಇಎಫ್ಎಲ್/2008, ದಿನಾಂಕ: 03/07/2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2

ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ.

ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಎಫ್.ಡಿ/15/ಇಎಫ್ಎಲ್/2015 ದಿನಾಂಕ : 23-09-2016 ರಲ್ಲಿ ರಾಜ್ಯದ 220 ವಿಧಾನಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 4 ಸನ್ನದುಗಳಂತೆ ಒಟ್ಟು 880, ಯಾದಗಿರಿ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11-ಸಿ ಸನ್ನದುಗಳನ್ನು ಕೆಳಕಂಡ ಷರತ್ತುಗಳನ್ನು ವಿಧಿಸಿ ಎಂ.ಎಸ್.ಐ.ಎಲ್. ಸಂಸ್ಥೆಗೆ ಮಂಜೂರಾತಿ ನೀಡಲು ಸರ್ಕಾರವು ಅನುಮತಿ ನೀಡಿರುತ್ತದೆ.

i. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯ ಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

ii. ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು.

iii. ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.

ಮೇಲಿನ 900 ಸನ್ನದುಗಳಲ್ಲಿ ಬಾಕಿ ಉಳಿದಿರುವ 441 ಸಿಎಲ್-11ಸಿ ಕೋಟಾದಡಿಯಲ್ಲಿನ ಸನ್ನದುಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ/08/ಇಎಫ್ಎಲ್/2020, ದಿನಾಂಕ: 08-09-2020 ರಲ್ಲಿ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಲಾಗಿದೆಯೆಂದು ನಿರ್ದೇಶಿಸಲಾಗಿರುತ್ತದೆ:

1. ಎಂ.ಎಸ್.ಐ.ಎಲ್. ಸಂಸ್ಥೆಗೆ ತನ್ನ ವಾಣಿಜ್ಯ ಕಾರ್ಯ ಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು

2507

ನಿಗದಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

2. ಸಿಎಲ್-11ಸಿ ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31-12-2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು.

ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನುಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೇ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.

ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್.ಡಿ 65 ಇಡಬ್ಲ್ಯೂಪಿ 2020, ದಿನಾಂಕ: 09-10-2020 ರನ್ವಯ ವಿಧಿಸಿರುವ ಈ ಕೆಳಕಂಡ ಷರತ್ತುಗಳನ್ನು ದೃಢೀಕರಿಸಿಯೇ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿ ಸರ್ಕಾರವು ಸೂಚಿಸಿರುತ್ತದೆ.

(1) ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್-11 ಸಿ ಸನ್ನದಿಗಾಗಿ ಅರ್ಜಿಯನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 2 ರನ್ವಯ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4(1)(ಬಿ) ರ ನಮೂನೆ ಸಿಎಲ್-1ಎ ರಲ್ಲಿಯೇ ಸಲ್ಲಿಸತಕ್ಕದ್ದು.

(2) ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್-11 ಸಿ ಸನ್ನದಿಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ಎಂ.ಎಸ್.ಐ.ಎಲ್ ಸಂಸ್ಥೆಯ ನಿರ್ದೇಶಕ ಮಂಡಳಿಯಿಂದ ಅಧಿಕರಿಸಲ್ಪಟ್ಟಿರತಕ್ಕದ್ದು ಮತ್ತು

		ಅರ್ಜಿಯನ್ನು ನಮೂನೆ-ಸಿಎಲ್-1ಎ ರಲ್ಲಿ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4 ರ ಘೋಷಣೆಯನ್ವಯ ಸಲ್ಲಿಸತಕ್ಕದ್ದು. (3) ಈ ರೀತಿಯಾಗಿ ಅಧೀಕರಿಸಲ್ಪಟ್ಟ ವ್ಯಕ್ತಿಯು ಸನ್ನದಿಗಾಗಿ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಿಯಾದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

ಸಿಐ 25 ಸಿಎಂಐ 2021 (ಇ)

(ಜಗದೀಶ ಶೆಟ್ಟರ),
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು.

ಕರ್ನಾಟಕ ವಿಧಾನಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2515
2.	ಸದಸ್ಯರ ಹೆಸರು	:	ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
3.	ಉತ್ತರಿಸುವ ದಿನಾಂಕ	:	16-03-2021
4.	ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಯಾವುದೇ ಅಭ್ಯರ್ಥಿಯು ಯಾವುದೇ ಸರ್ಕಾರಿ ಹುದ್ದೆಗೆ (KPSC, KEA, KSP) ಅರ್ಜಿ ಸಲ್ಲಿಸಲು ಅವಶ್ಯವಿರುವ ಪ್ರಮಾಣ ಪತ್ರಗಳಾದ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ ಹಾಗೂ ಗ್ರಾಮೀಣ ವ್ಯಾಸಂಗದ ಪ್ರಮಾಣ ಪತ್ರಗಳನ್ನು ಪಡೆದಲ್ಲಿ ಆ ಪ್ರಮಾಣ ಪತ್ರಗಳಿಗೆ ನಿರ್ದಿಷ್ಟ ಅಥವಾ ಕಾಲಾವಧಿ ಇರುತ್ತದೆಯೇ;	ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು 1977ರಲ್ಲಿ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ ಹಾಗೂ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000 ರಲ್ಲಿ ಗ್ರಾಮೀಣ ವ್ಯಾಸಂಗದ ಪ್ರಮಾಣ ಪತ್ರಗಳಿಗೆ ನಿರ್ದಿಷ್ಟ ಅಥವಾ ಕಾಲಾವಧಿಯನ್ನು ನಿಗದಿಪಡಿಸಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಶಾಲೆಯಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರಗಳ ಮಾನ್ಯತೆ ಎಷ್ಟು ವರ್ಷದವರೆಗೆ ಇರುತ್ತದೆ; (ವಿವರ ನೀಡುವುದು)	
ಇ)	ಇಲ್ಲದಿದ್ದಲ್ಲಿ ಒಮ್ಮೆ ಪ್ರಮಾಣ ಪತ್ರಗಳನ್ನು ಪಡೆದರೆ, ಶಾಶ್ವತವಾಗಿ ಮಾನ್ಯತೆಯಿರುತ್ತದೆಯೇ; ಅಥವಾ ಅರ್ಜಿ ಸಲ್ಲಿಸುವಾಗ ಪ್ರತಿಬಾರಿ ಪ್ರಮಾಣ ಪತ್ರಗಳನ್ನು ಪಡೆಯಬೇಕೇ; (ವಿವರ ನೀಡುವುದು)	
ಈ)	ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರಗಳ ನಮೂನೆ ಮಾದರಿಯನ್ನು ನೀಡುವುದು?	ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೆನೆನಿ 2001, ದಿನಾಂಕ:13-02-2001ರ ನಮೂನೆ-1ರಲ್ಲಿ ಜನರಲ್ ಮೆರಿಟ್ ಅಭ್ಯರ್ಥಿಗಳ ಮೇಲುಸ್ತರಕ್ಕೆ ಸೇರಿಲ್ಲವೆಂದು ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣಪತ್ರವನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. ಮುಂದುವರೆದು, ಗ್ರಾಮೀಣ ಮೀಸಲಾತಿ ಸೌಲಭ್ಯಕ್ಕಾಗಿ ಪ್ರಮಾಣ ಪತ್ರ

		ಪಡೆಯುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೇನೆನಿ 2001, ದಿನಾಂಕ:13-02-2001ರಲ್ಲಿ ನಿಗದಿಪಡಿಸಲಾಗಿದ್ದ ನಮೂನೆ-2ನ್ನು ರದ್ದುಪಡಿಸಿ, ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಸೇನೆನಿ 2005, ದಿನಾಂಕ:10-08-2005ರಲ್ಲಿ ತಿದ್ದುಪಡಿ ಮಾಡಿದ ನಮೂನೆ-2ನ್ನು ಹೊರಡಿಸಲಾಗಿದ್ದು, **ಅನುಬಂಧ-2ರಲ್ಲಿ** ಲಗತ್ತಿಸಿದೆ. ಕನ್ನಡ ಮಾಧ್ಯಮ ~~ಗ್ರಾಮೀಣ ವ್ಯಾಸಂಗ~~ ಪ್ರಮಾಣ ಪತ್ರದ ನಿರ್ದಿಷ್ಟ ನಮೂನೆಯನ್ನು ಸರ್ಕಾರದಿಂದ ಹೊರಡಿಸಿರುವುದಿಲ್ಲ.

ಸಂಖ್ಯೆ: ಸಿಆಸುಇ 52 ಎಸ್‌ಆರ್‌ಆರ್ 2021

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿಗಳು

2515

ನಮೂನೆ-1

ಜನರಲ್ ಮೇರಿಟ್ ಅಭ್ಯರ್ಥಿಗಳ ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣಪತ್ರ.

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

ತಹಸೀಲ್ದಾರ್,
. . . . ತಾಲ್ಲೂಕು,
. . . . ಜಿಲ್ಲೆ.

ಮಾನ್ಯರೆ,

ಶ್ರೀ: ಶ್ರೀಮತಿ: . . . . ಎಂಬುವವರ ಮಗ: ಮಗಳು: ಹೆಂಡತಿ: ಗಂಡ: . . . . ಆದ ನಾನು ಮೇಲುಸ್ತರದಲ್ಲಿ (Creamy layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ. :
2. ಅಭ್ಯರ್ಥಿಯ ಸ್ವಂತ ಸ್ಥಳ : ಗ್ರಾಮ :
   ತಾಲ್ಲೂಕು :
   ಜಿಲ್ಲೆ :
3. ಅಭ್ಯರ್ಥಿಯ ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ :
4. ಅಭ್ಯರ್ಥಿಯ ತಂದೆ: ತಾಯಿ: ಪೋಷಕರ ಹೆಂಡತಿ: ಗಂಡನ ಹೆಸರು ಮತ್ತು ಉದ್ಯೋಗ. (ಉದ್ಯೋಗವು ಸರ್ಕಾರಿ: ಅರೆಸರ್ಕಾರಿ: ಸಾರ್ವಜನಿಕ ಉದ್ದಿಮೆ: ಖಾಸಗಿ) :
5. ಅಭ್ಯರ್ಥಿಯ ಪ್ರಸ್ತುತ ಅಂಚೆ ವಿಳಾಸ (ಸ್ಪಷ್ಟವಾಗಿ ನಮೂದಿಸುವುದು) :
6. ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ :
7. ಅಭ್ಯರ್ಥಿಯ ಪ್ರಾಥಮಿಕ: ಮಾಧ್ಯಮಿಕ: ಹಾಗೂ ಪ್ರೌಢಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು. :
8. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ: ತಾಯಿ: ಪೋಷಕರು (ತಂದೆ: ತಾಯಿ ಜೀವಂತವಾಗಿರದಿದ್ದಲ್ಲಿ) ಹೆಂಡತಿ: ಗಂಡ ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ. :
   (1) ವೇತನ (ವೇತನ ಶ್ರೇಣಿ) :
   (2) ಜಮೀನಿನ ವಿವರಗಳು :
   (3) ಇತರೇ ಮೂಲಗಳಿಂದ :
9. ಆದಾಯ ತೆರಿಗೆ ಪಾವತಿದಾರರೇ? :
10. ಸಂಪತ್ತು ತೆರಿಗೆ ಪಾವತಿದಾರರೇ? :
11. ಮಾರಾಟ ತೆರಿಗೆ ಪಾವತಿದಾರರೇ? :

ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಲಾದ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಸ್ಥಳ : ತಮ್ಮ ವಿಧೇಯ

ದಿನಾಂಕ : (ಅಭ್ಯರ್ಥಿಯ ಸಹಿ).

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ: ತಾಯಿ: ಪೋಷಕರು
(ತಂದೆ: ತಾಯಿ: ಜೀವಂತವಾಗಿರದಿದ್ದಲ್ಲಿ)
(ಹೆಂಡತಿ: ಗಂಡ ಇವರ ಸಹಿ)

2515

ನಮೂನೆ-2

ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ : .... ರವರ ಮಗ: ಮಗಳು: ಪತ್ನಿ ಶ್ರೀ: ಶ್ರೀಮತಿ: ಕುಮಾರಿ: .... ಜಿಲ್ಲೆ .... ತಾಲ್ಲೂಕು: .... ಗ್ರಾಮದಲ್ಲಿ .... ವಾಸವಾಗಿರುವ ಇವರು ಒಂದನೇ ತರಗತಿಯಿಂದ .... ತರಗತಿಯವರೆಗೆ .... ಜಿಲ್ಲೆ .... ತಾಲ್ಲೂಕು: .... ಪಟ್ಟಣ .... ಶಾಲೆಯಲ್ಲಿ ವ್ಯಾಸಂಗ ಮಾಡಿ .... ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಕರ್ನಾಟಕದ ಪೌರ-ನಿಗಮಗಳು ಅಧಿನಿಯಮ, 1976 ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿದೆ.

(ಸಹಿ)
ಮುಖ್ಯೋಪಾಧ್ಯಾಯರು.

ಮೇಲುರುಜು
ಕ್ಷೇತ್ರ ಶಿಕ್ಷಣ ಅಧಿಕಾರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2518
ಸದಸ್ಯರ ಹೆಸರು	ಶ್ರೀ ಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್
ಉತ್ತರಿಸಬೇಕಾದ ದಿನಾಂಕ	16/03/2021.
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th colspan="2">ಉತ್ತರ</th></tr>
<tr><td>ಅ)</td><td>ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ದಿನಾಂಕ:28-02-2021ರಂದು ನಡೆದ ಎಫ್.ಡಿ.ಎ ಪರೀಕ್ಷೆಗೆ ಎಷ್ಟು ಮಂದಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು; ಹಾಗೂ ಎಷ್ಟು ಮಂದಿ ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಿರುತ್ತಾರೆ,(ವಿವರ ನೀಡುವುದು)</td><td colspan="2">ದಿನಾಂಕ:28-02-2021ರಂದು ನಡೆದ ಎಫ್.ಡಿ.ಎ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಸಂಖ್ಯೆ-3,74,124
ದಿನಾಂಕ:28-02-2021ರಂದು ನಡೆದ ಎಫ್.ಡಿ.ಎ ಪರೀಕ್ಷೆಗೆ ಹಾಜರಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆ:
• ಬೆಳಗ್ಗಿನ ಅಧಿವೇಶನಕ್ಕೆ ಹಾಜರಾದ ಒಟ್ಟು ಅಭ್ಯರ್ಥಿಗಳು 2,49,012
• ಮಧ್ಯಾಹ್ನದ ಅಧಿವೇಶನಕ್ಕೆ ಹಾಜರಾದ ಒಟ್ಟು ಅಭ್ಯರ್ಥಿಗಳು 2,47,539</td></tr>
<tr><td>ಆ)</td><td>ಈ ಪರೀಕ್ಷೆಯ ಅರ್ಜಿ ಸಲ್ಲಿಕೆಯಿಂದ ಕರ್ನಾಟಕ ಲೋಕ ಸೇವಾ ಆಯೋಗದ ಸಂಗ್ರಹವಾದ ಶುಲ್ಕದ ಒಟ್ಟು ಮೊತ್ತವೆಷ್ಟು: (ವಿವರವನ್ನು ನೀಡುವುದು)</td><td colspan="2">ರೂ.8,03,81,100.00/-</td></tr>
<tr><td rowspan="5">ಈ)</td><td rowspan="5">ಪ್ರತಿ ಒಬ್ಬ ಅಭ್ಯರ್ಥಿಯ ಪರೀಕ್ಷೆಗೆ ಅರ್ಜಿ ಶುಲ್ಕ, ಲಿಖಿತ ಪರೀಕ್ಷಾ ಶುಲ್ಕ ತಗಲುವ ವೆಚ್ಚ ಎಷ್ಟು (ಸಂಪೂರ್ಣ ವಿವರವನ್ನು ನೀಡುವುದು)</td><td colspan="2">• ಪ್ರತಿ ಒಬ್ಬ ಅಭ್ಯರ್ಥಿಯ ಪರೀಕ್ಷೆಗೆ ಅರ್ಜಿ ಶುಲ್ಕ:-</td></tr>
<tr><td>ಸಾಮಾನ್ಯ ಅರ್ಹತೆ ಅಭ್ಯರ್ಥಿಗಳಿಗೆ</td><td>ರೂ.600+ಪ್ರೋಸಸಿಂಗ್ ಚಾರ್ಜ್ 35/-</td></tr>
<tr><td>ಪ್ರವರ್ಗ 2(ಎ), 2(ಬಿ), 3(ಎ), 3(ಬಿ)ಗೆ ಸೇರಿದ ಅಭ್ಯರ್ಥಿಗಳಿಗೆ</td><td>ರೂ.300+ಪ್ರೋಸಸಿಂಗ್ ಚಾರ್ಜ್ 35/-</td></tr>
<tr><td>ಮಾಜಿ ಸೈನಿಕ ಅಭ್ಯರ್ಥಿಗಳಿಗೆ(ಸಮಾನ್ಯ ಅರ್ಹತೆ ಮತ್ತು ಪ್ರವರ್ಗ 2(ಎ), 2(ಬಿ), 3(ಎ), 3(ಬಿ)ಗೆ ಸೇರಿದವರಿಗೆ)</td><td>ರೂ.50+ಪ್ರೋಸಸಿಂಗ್ ಚಾರ್ಜ್ 35/-</td></tr>
<tr><td>ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ</td><td>ಶುಲ್ಕ ಪಾವತಿಯಿಂದ ವಿನಾಯಿತಿ ಇದೆ. ಆದರೆ, ಪ್ರೋಸೆಸಿಂಗ್ ಚಾರ್ಜ್ 35/- ಅನ್ನು ಎಲ್ಲಾ ಅಭ್ಯರ್ಥಿಗಳು ಪಾವತಿಸಲೇಬೇಕು.</td></tr>
</table>

		ಇದನ್ನು ಪಾವತಿಸಲು ಯಾರಿಗೂ ವಿನಾಯಿತಿ ನೀಡಲಾಗಿರುವುದಿಲ್ಲ.
		• ದಿನಾಂಕ:23-01-2021ರ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಮತ್ತು ದಿನಾಂಕ:28-02-2021ರ (ದಿ:24-01-2021ರಂದು ನಡೆಯಬೇಕಿದ್ದ) ಲಿಖಿತ ಸ್ಪರ್ಧಾತ್ಮಕ ಪರೀಕ್ಷಾ ಸಂಬಂಧ ಕಾರ್ಯನಿರ್ವಹಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ ಮತ್ತು ಸಿಬಂ್ಬದಿವರ್ಗದವರಿಗೆ ಸಂಭಾವನೆ/ ಇಂಧನ ವೆಚ್ಚ/ಖಜಾನೆ ವಿಡಿಯೋ ಚಿತ್ರೀಕರಣ ವೆಚ್ಚ ಹಾಗೂ ಪರೀಕ್ಷಾ ಉಪಕೇಂದ್ರಗಳ ಶಾಲಾ/ಕಾಲೇಜುಗಳ ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರಿಗೆ ಸಂಭಾವನೆ/ ಸಾದಿಲ್ವಾರು/ ಅಂಚೆ/ ವಿಡಿಯೋ ಚಿತ್ರೀಕರಣ ಇತ್ಯಾದಿಗಳಿಗಾಗಿ ಇಲ್ಲಿಯವರೆಗೆ ತಗುಲಿದ ಅಂದಾಜು ವೆಚ್ಚ ರೂ. 40535358/-ಗಳಾಗಿರುತ್ತದೆ. ಇದಲ್ಲದೆ ಪರೀಕ್ಷಾ ಕೇಂದ್ರಗಳಿಂದ ಹೆಚ್ಚುವರಿಯಾಗಿ ಭರಿಸಲಾದ ವೆಚ್ಚವನ್ನು ಪಾವತಿಸುವಂತೆ ಸಂಬಂಧಿತರಿಂದ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿವೆ.
	ಉ) ಪರೀಕ್ಷೆಗಳಲ್ಲಿ ಅಕ್ರಮಗಳನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?	• ಸದರಿ ಪರೀಕ್ಷೆಯನ್ನು 28 ಜಿಲ್ಲೆಯ ಜಿಲ್ಲಾಧಿಕಾರಿಗಳ ಮುಖೇನ ನಡೆಸಲಾಗಿದ್ದು, ಪರೀಕ್ಷೆಯಲ್ಲಿ ಯಾವುದೇ ಅಕ್ರಮಗಳು ನಡೆಯದಂತೆ ಸಂಬಂಧಿತ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ, ವಿಡಿಯೋ ಸಂವಾದದ ಮುಖೇನ ಸೂಚನೆಗಳನ್ನು ನೀಡಲಾಗಿರುತ್ತದೆ. • ಪೊಲೀಸ್ ಆಯುಕ್ತರುಗಳಿಗೆ, ಪೊಲೀಸ್ ವರಿಷ್ಠಾಧಿಕಾರಿಗಳಿಗೂ ಸಹ ಲಿಖಿತ ಸೂಚನೆಗಳನ್ನು ನೀಡಲಾಗಿರುತ್ತದೆ. • ದಿನಾಂಕ:28-02-2021ರ ಸ್ಪರ್ಧಾತ್ಮಕ ಪರೀಕ್ಷಾ ಸಂಬಂಧ, ದುರಾಚಾರ ಪ್ರಕರಣಗಳು ಸಂಭವಿಸಬಹುದಾದ ಆಯ್ದ ಸೂಕ್ಷ್ಮ ಪರೀಕ್ಷಾಕೇಂದ್ರಗಳನ್ನು ಗುರುತಿಸಿ, ಪರೀಕ್ಷಾ ಉಪಕೆಂದ್ರಗಳಿಗೆ ಮೊಬೈಲ್ ಜಾಮರ್‌ಗಳನ್ನು ಪ್ರಾಯೋಗಿಕವಾಗಿ ಅಳವಡಿಸಲಾಗಿರುತ್ತದೆ. • ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ನಡೆಸುವ ಪರೀಕ್ಷೆಗಳಲ್ಲಿ ಉಪಯೋಗಿಸುವಂತೆಕರ್ನಾಟಕ ಸೆಕ್ಯೂರ್ಡ್ ಎಕ್ಸಾಮಿನೇಷನ್ ಸಿಸಂ್ಟ ಅನ್ನು ಅಳವಡಿಸಿಕೊಂಡು, ಆಯೋಗದಲ್ಲಿ ಕೇಂದ್ರಿಕೃತ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿ, ಸಂಬಂಧಿತ ಜಿಲ್ಲಾ ಮತ್ತು ಉಪ ಖಜಾನೆಗಳಲ್ಲಿನ ಗೋಪ್ಯ

2518

		ಸಾಮಗ್ರಿಗಳನ್ನು ಠೇವಣಿಸುವ ದಿನಾಂಕದಿಂದ ಪರೀಕ್ಷೆ ಮುಕ್ತಾಯದ ದಿನಾಂಕದವರೆಗೆ ಕೆಸ್ವಾನ್ ಮುಖಾಂತರ ಸಿಸಿ ಟಿವಿ ಅನ್ನು ಆಯೋಗದಲ್ಲಿ ವೀಕ್ಷಿಸಲಾಗಿರುತ್ತದೆ ಮತ್ತು ಸದರಿ Recording ಗಳನ್ನು State Data Center ನಲ್ಲಿ ಸಂಗ್ರಹಿಸಲು ಕ್ರಮವಹಿಸಲಾಗಿರುತ್ತದೆ.

ಸಂಖ್ಯೆ.ಸಿಆಸುಇ 56 ಎಸ್‌ಎಲ್‌ಎ 2021

(ಬಿ.ಎಸ್ ಯಡಿಯೂರಪ್ಪ)

ಮುಖ್ಯಮಂತ್ರಿ